ಸಂಪುಟ 15
ಸಂಚಿಕೆ 12

# ಐಕ್ಯರಂಗ

28 ಮಾರ್ಚ್ 1993
ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

# "ನೀನು ಅತ್ತಾಂಗ ಮಾಡು- ನಾನು ಕೊಟ್ಟಾಂಗ ಮಾಡುತೀನಿ"

## ಇಂಟಿಕ್ ಮುಷ್ಕರದ- ಕಾರ್ಮಿಕ ಮಂತ್ರಿಗಳ ಭರವಸೆಯ ನಾಟಕ

ವಿ.ಜೆ.ಕೆ. ನಾಯರ್

ಸಾರ್ವಜನಿಕ ವಲಯದ ಕಾರ್ಮಿಕರು ಬಹಳ ದಿನಗಳಿಂದ ಒತ್ತಾಯಿಸುತ್ತಿದ್ದ ತುಟ್ಟಿಭತ್ಯದರದ ಪರಿಷ್ಕರಣೆ ಹಾಗೂ ವೇತನ ಮಾತುಕತೆಗಳ ಮೇಲೆ ನಿರ್ಬಂಧವನ್ನು ರದ್ಧತಿ ಬಗ್ಗೆ ಭಾರತ ಸರಕಾರ ಕೈಗೊಂಡಿದೆಯೆಂಬ ನಿರ್ಧಾರ ಇಂಟಕ್‌ನ ಒಂದು ಸಾಧನೆಯೆಂಬಂತೆ ಚಿತ್ರಿಸಲಾಗುತ್ತಿದೆ. ಇದಕ್ಕಿಂತ ದೊಡ್ಡ ಸುಳ್ಳು ಇನ್ನೊಂದಿರಲಿಕ್ಕಿಲ್ಲ.

ಕಾರ್ಮಿಕ ಮಂತ್ರಿ ಪಿ.ಎ. ಸಂಗ್ಮಾ ಇಂಟಕ್ ಒತ್ತಾಯಕ್ಕೆ ಮಣಿದು ತಾನು ಈ ನಿರ್ಧಾರಕ್ಕೆ ಬಂದಿರುವುದಾಗಿ ನಟಿಸುತ್ತಿದ್ದಾರೆ.

ಈ ಎರಡು ದೇಡಿಕೆಗಳು ಹಾಗೂ ಕಾರ್ಮಿಕರ ನೀಡಿಕೆಯಿಲ್ಲದ ಪೆನ್ಶನ್ ಮತ್ತಿತರ ದೇಡಿಕೆಗಳ ಮೇಲೆ ಸಾರ್ವಜನಿಕ ವಲಯದ ಕಾರ್ಮಿಕರು ಎಪ್ರಿಲ್ 20-22,1993 ರಂದು ಮುಷ್ಕರದ ಕರೆಯಲ್ಲಿ ಇಂಟಕ್ ಕೂಡಾ ಸೇರಿಕೊಂಡಿತ್ತು. ಸಿ.ಐ.ಟಿ.ಯು ಮುಖ್ಯ ಪಾತ್ರ ವಹಿಸುತ್ತಿರುವ ಸಿ.ಪಿ. ಎಸ್.ಟಿ.ಯು. (ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ) ಕಳೆದ ಐದು ವರ್ಷಗಳಿಂದ ಈ ಆಂದೋಳನ ನಡೆಸುತ್ತಾ ಬಂದಿದೆ.

ಸರಕಾರೀ ನೌಕರರಿಗೆ ಹಾಗೂ ಬ್ಯಾಂಕ್ ವಿಮಾ ನೌಕರರಿಗೆ ಸಂಬಳದ ಶೇಕಡಾ ಪ್ರಮಾಣದಲ್ಲಿ ತುಟ್ಟಿಭತ್ಯೆ ನೀಡಲಾಗುತ್ತಿದೆ ಅಂದರೆ ಜೀವನದ ವೆಚ್ಚದ ಏರಿಕೆಯನ್ನು ಪೂರ್ಣ ಸರಿಹೊಂದಿಸುವ ದರದಲ್ಲಿ ತುಟ್ಟಿಭತ್ಯೆ ನೀಡಲಾಗುತ್ತಿದೆ. ಸಾರ್ವಜನಿಕ ವಲಯದ ಉದ್ದಿಮೆಗಳ ನೌಕರರಿಗೂ ಇದೇ ತುಟ್ಟಿಭತ್ಯೆ ವ್ಯವಸ್ಥೆ ಇರಬೇಕೆಂದು 1989 ರಲ್ಲಿ ಮುಷ್ಕರ ಆರಂಭಿಸಿದರು. ಆಗಿನ ಪ್ರಧಾನ ಮಂತ್ರಿ ರಾಜೀವ್‌ಗಾಂಧಿ ಈ ತುಟ್ಟಿಭತ್ಯೆ ವ್ಯವಸ್ಥೆ ಸಾರ್ವಜನಿಕ ವಲಯದ ನೌಕರರಿಗೂ ವಿಸ್ತರಿಸುವ ಭರವಸೆ ನೀಡಿದ್ದರಿಂದ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು. ಆದರೆ ಸರ್ಕಾರ ಕೊಟ್ಟ ವಚನ ಪಾಲಿಸಲಿಲ್ಲ. ಬದಲಿಗೆ ತುಟ್ಟಿಭತ್ಯೆ ಕುರಿತು ಒಂದು ಸಮಿತಿಯನ್ನು ರಚಿಸಿತು. 1992 ರಲ್ಲಿ ಕಾರ್ಮಿಕ ಮಂತ್ರಿ ಸಂಗ್ಮಾರವರ ಅಧ್ಯಕ್ಷತೆಯಲ್ಲಿ ಈ ಸಮಿತಿ ಪಾಯಿಂಟಿಗೆ 2 ರೂ ತುಟ್ಟಿಭತ್ಯೆಯನ್ನು ಶಿಫಾರಸುಮಾಡಿತು. ಸರಕಾರ ಕೂಡ ಈ ಶಿಫಾರಸನ್ನು ಜಾರಿಗೆ ತರಲಿಲ್ಲ. ಈ ನಡುವೆ ಸರಕಾರ ಎಲ್ಲಾ ಸರಕಾರೀ ಹಾಗೂ ಸಾರ್ವಜನಿಕ ವಲಯದ ನೌಕರರ ತುಟ್ಟಿಭತ್ಯೆಯ ಕುರಿತು ಪರಿಶೀಲಿಸಲೆಂದು ಹೆಚ್. ಎಸ್. ರೇ ಕಮಿಟಿ ನೇಮಿಸಿತು. ಹಣಕಾಸು ವಲಯದ ನೌಕರರು ಈಗಾಗಲೇ ಪಡೆದಿರುವ ನೂರಕ್ಕೆ ನೂರು ಜೀವನ ವೆಚ್ಚ ಏರಿಕೆಯನ್ನು ಸರಿಹೊಂದಿಸುವ ಶೇಕಡಾ ಪ್ರಮಾಣದ ತುಟ್ಟಿಭತ್ಯೆ ಪದ್ಧತಿಗೇ ಕೊಡಲಿಯೇಟು ಹಾಕುತ್ತದೆ ಎಂದು ನಿರೀಕ್ಷಿಸಲಾಯಿತು.

ಸಿಪಿಎಸ್.ಟಿ.ಯು ಮತ್ತೆ ಕಾರ್ಯಾಚರಣೆಗಿಳಿಯಿತು. ಚಳುವಳಿಯ ಮುಷ್ಕರದ ಕಾರ್ಯಕ್ರಮ ರೂಪಿಸಿತು. ಆದರೆ ಅಯೋಧ್ಯಾ ಘಟನೆಗಳಿಂದಾಗಿ ಅದನ್ನು ಮುಂದೂಡಬೇಕಾಗಿ ಬಂತು. ಬಿ.ಎಂ.ಎಸ್. ಸಿಪಿಎಸ್‌ಟಿಯುನಿಂದ ಹಿಂತೆಗೆದುಕೊಂಡಿತು. ಆದರೆ ಇಂಟಕ್ ಸಿಪಿಎಸ್.ಟಿ.ಯು ಜತೆಗೂಡಿ ಮುಷ್ಕರದ ಕರೆ ನೀಡಿತು. ಈಗ ಇಂಟಕ್‌ನ ದೇಡಿಕೆಯಂತೆ ಸರಕಾರ ಪಾಯಿಂಟಿಗೆ ಎರಡು ರೂ. ತುಟ್ಟಿಭತ್ಯೆ ದರವನ್ನು ಒಪ್ಪಿಕೊಂಡಿದೆ ಎಂದು ವರದಿ ಮಾಡಿದೆ.

ಕಾಂಗ್ರೆಸ್ (ಐ) ಮುಖಂಡರಿಗೆ ನಾಚಿಕೆಯೆಂಬುದೇ ಇದ್ದಂತಿಲ್ಲ ಸಾರ್ವಜನಿಕ ವಲಯದ ಕಾರ್ಮಿಕರು ಸಿಪಿಐಎಸ್‌ಟಿಯು ನೇತೃತ್ವದಲ್ಲಿ ಹೋರಾಟ ನಡೆಸದಿದ್ದರೆ ಈ ಭಾಗಶಃ ಸಾಧನೆ ಕೂಡಾ ಆಗುತ್ತಿರಲಿಲ್ಲ ಎಂಬುದು ಎಲ್ಲರ ಅನುಭವಕ್ಕೂ ಬಂದಿರುವ ಸಂಗತಿ ಆದರೂ ತಾನು 'ಕೊಟ್ಟೆ' ಎಂದು ಪ್ರಚಾರ ಗಿಟ್ಟಿಸಿಕೊಳ್ಳಲು ಸರಕಾರ ಏನು ಮಾಡಲೂ ಸಿದ್ಧ ಎಂದು ಮತ್ತೊಮ್ಮೆ ತೋರಿಸಿಕೊಟ್ಟಿದೆ.

## "ಮೂರು ದಿನದ ಮುಷ್ಕರದ ಸಿದ್ಧತೆ ಮುಂದುವರೆಸಿ"

### -ಪ್ರಾಯೋಜಕ ಸಮಿತಿ ಕರೆ

ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳು ಎಪ್ರಿಲ್ 20-22 ರವರೆಗೆ ಮೂರು ದಿನದ ಮುಷ್ಕರ ನಡೆಸಲು ಘೋಷಣೆಯನ್ನು ಜಂಟಿಯಾಗಿ ನೀಡಿದ್ದವು. ಇದು ಸಂಘಗಳ ಭೇದ-ಭಾವವಿಲ್ಲದೆ ಎಲ್ಲೆಡೆ ಸಾರ್ವಜನಿಕ ವಲಯದ ಕಾರ್ಮಿಕರ ನಡುವೆ ದೊಡ್ಡ ಪ್ರಭಾವ ಬೀರಿ ಮೂರುದಿನದ ಮುಷ್ಕರಕ್ಕೆ ಭರದ ಸಿದ್ಧತೆ ಆರಂಭವಾಗಿತ್ತು. ಇದನ್ನು ಕಂಡ ಸರಕಾರ ಇಂಟಕ್‌ನೊಂದಿಗೆ ಈ "ಒಪ್ಪಂದ"ಕ್ಕೆ ಬಂದಿದೆ ಎಂದು ಭಾರತೀಯ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಹೇಳಿದೆ.

ಇಂಟಕ್ ಮತ್ತು ಸರಕಾರ ಸೇರಿ ಸಾರ್ವಜನಿಕ ವಲಯದ ಎಲ್ಲಾ ಕಾರ್ಮಿಕರ ಐಕ್ಯ ಆಂದೋಳನವನ್ನು ಬುಡಮೇಲು ಮಾಡಲು ನಡೆಸಿರುವ ಪಿತೂರಿ ಇದು ಎಂದಿರುವ ಪ್ರಾಯೋಜಕ ಸಮಿತಿ ಇಂಟಕ್ ಹೀಗೆ ಮಾಡಿರುವುದು ಮೊದಲ ಬಾರಿಯಲ್ಲ ಎಂದಿನಂತೆ ಸರಕಾರ "ಆಶ್ವಾಸನೆ"ಯ ಮೇರೆಗೆ ಮುಷ್ಕರವನ್ನು ಅದು "ಹಿಂತೆಗೆದು'ಕೊಂಡಿದೆ ಎಂದು ಟೀಕಿಸಿದೆ.

ಸರಕಾರ ಅನ್ಯಾಯ ಪೂರ್ಣವಾಗಿ ವರ್ತಿಸಿದೆ ಎಂದು ಖಂಡಿಸಿರುವ ಪ್ರಾಯೋಜಕ ಸಮಿತಿ ಮುಷ್ಕರಕ್ಕೆ ಜಂಟಿಯಾಗಿ ಕರೆನೀಡಿದ ಎಲ್ಲಾ ಸಂಘಗಳೊಡನೆ ಮಾತುಕತೆ ನಡೆಸದೆ ಇಂಟಕ್‌ನೊಂದಿಗೆ ಮಾತ್ರವೇ ಮಾತುಕತೆ ನಡೆಸಿರುವುದು ಕಾರ್ಮಿಕ ಶಾಸನಗಳ ಪ್ರಕಾರ ಆಕ್ಷೇಪಾರ್ಹ ವರ್ತನೆ ಎಂದಿದೆ.

ಸಾರ್ವಜನಿಕ ವಲಯದ ಕಾರ್ಮಿಕರು ಸರಕಾರದ "ಆಶ್ವಾಸನೆ"ಯಿಂದಾಗಿ ತಮ್ಮ ಜಾಗರೂಕತೆಯನ್ನು ಸಡಿಲಗೊಳಿಸದೆ ಮೂರು ದಿನಗಳ ಮುಷ್ಕರಕ್ಕೆ ಸಿದ್ಧತೆ ಮುಂದುವರೆಸಿ ಸರಕಾರ ತಮ್ಮ ದೇಡಿಕೆಗಳನ್ನು ಒಪ್ಪಿಕೊಂಡು ಅವನ್ನು ಜಾರಿಗೆ ತರುವಂತೆ ಒತ್ತಾಯ ತರಬೇಕೆಂದು ಈ ಪ್ರಾಯೋಜಕ ಸಮಿತಿ ಕರೆ ನೀಡಿದೆ.

## ಒಳಪುಟಗಳಲ್ಲಿ



ಪುಟ 4-5

ಆತ್ಮಗೌರವದ ಹಾದಿತೆರೆದೀ ಇದ
-- ಕಾಂ. ಇ.ಎಂ.ಎಸ್.

ದಶಕದಲ್ಲಿಯೇ ಹೆಚ್ಚು ಕೊರತೆಯ ಬಜೆಟ್

ಈ ಪರಿಯ ಬೇರಾವ ದೇಶದಲೂ ಕಾಣೆ
-- ಡಾ. ಎಂ.ಕೆ. ಭಂಡೆ

ಇದು ಭಯಂಕರ ಬಜೆಟ್

ಅಯೋಧ್ಯಾ ಕಾಂಡ



ಪುಟ 2-3

ಇಂದಿನ ರಾಜಕೀಯದ ಕೆಲವು ಪ್ರಶ್ನೆಗಳು
-- ಕಾಂ. ಸುರ್ಜಿತ್

ಶ್ವೇತ ಪತ್ರದ ಕುಟಿಲ ಮನಸ್ಸುಗಳು

ಮಂಜು ಮುಸುಕಿದ ಹಾದಿಯಲ್ಲಿ
ಸಾರಾ ಅಬುಬಕರ್

## ರಾಜ್ಯಾದ್ಯಂತ ಅಸಂಘಟಿತ ಕಾರ್ಮಿಕರ ಮುಷ್ಕರ

ಕರ್ನಾಟಕ ರಾಜ್ಯದಲ್ಲಿರುವ 50 ಲಕ್ಷಕ್ಕೂ ಮೇಲ್ಪಟ್ಟ ಅಸಂಘಟಿತ ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಎರಡು ವರ್ಷಕ್ಕೊಮ್ಮೆ ನೋಟಿಫಿಕೇಶನ್ ಮಾಡಿ ಬೆಲೆ ಹೆಚ್ಚಳಕ್ಕನುಸಾರ ಹೆಚ್ಚಿನ ಕನಿಷ್ಟವೇತನ ಪ್ರಕಟಿಸುವುದರಲ್ಲಿ ರಾಜ್ಯ ಸರಕಾರ ವಿಫಲಗೊಂಡಿದೆ. ಮಾತ್ರವಲ್ಲ ಮಿನಿ ಸಿಮೆಂಟ್, ಹಾಲು ವಿತರಣೆ, ರಬ್ಬರ ವಸ್ತುಗಳ ಉತ್ಪಾದನೆ, ಕೈಮಗ್ಗ, ವಿದ್ಯುತ್ ಚಾಲಿತ ಮಗ್ಗ, ರಕ್ಷಣಾ ಸಂಸ್ಥೆಗಳು ಮೊದಲಾವುಗಳಲ್ಲಿ ದುಡಿಯುತ್ತಿರುವವರಿಗೆ ಕನಿಷ್ಟ ವೇತನವನ್ನು ಸರಕಾರ ಇನ್ನೂ ನಿರ್ಧರಿಸಿಲ್ಲ. ಹೋಟೆಲ್, ಪ್ಲಾಂಟೇಶನಗಳ ಕೆಲಸಗಾರರಿಗೆ ಹೋರಾಟ ಮಾಡಿ ಪಡೆದ ಸಂಬಳಕ್ಕಿಂತಲೂ ಕಡಿಮೆ ಕನಿಷ್ಠ ವೇತನ ನಿರ್ಧರಿಸಲಾಗಿದೆ.

1991 ರ ಬೆಲೆಗನುಸಾರ 976 ಜೀವನದ ಸೂಚ್ಯಾಂಕಕ್ಕೆ ತಿಂಗಳಿಗೆ ಕನಿಷ್ಟ ರೂ 1250 ನಿರ್ಧರಿಸಬೇಕೆಂದು ಒತ್ತಾಯಿಸಿ ಕಳೆದ ಮೂರು ವರ್ಷಗಳಿಂದಲೂ ಹೋರಾಡುತ್ತಾ ಬಂದಿದ್ದೇವೆ. ಸರಕಾರ ಕಾರ್ಮಿಕರ ದೇಡಿಕೆಯತ್ತ ಗಮನ ಹರಿಸದೆ, ಅಸಂಘಟಿತ ಮತ್ತು ಕಂಟ್ರಾಕ್ಟ್ ಕಾರ್ಮಿಕರನ್ನು ಸಂಪೂರ್ಣ ಕಡೆಗಣಿಸಿ, ನಿರ್ಲಕ್ಷ್ಯ ಧೋರಣೆ ತೋರ್ಪಡಿಸುತ್ತಿರುವುದನ್ನು ಪ್ರತಿಭಟಿಸಿ, ಸರಕಾರ ಕೂಡಲೇ ಕನಿಷ್ಟ ವೇತನ ಪ್ರಕಟಿಸಬೇಕೆಂದು ಒತ್ತಾಯಿಸಲು 15-3-93 ರಂದು ರಾಜ್ಯಾದ್ಯಂತ ಒಂದು ದಿವಸ ಮುಷ್ಕರ, ಧರಣಿ ನಡೆಸಬೇಕೆಂದು ಕರೆ ನೀಡಿತ್ತು ಆ ಕರೆಯಂತೆ ಬೆಂಗಳೂರು, ದಕ್ಷಿಣ ಕನ್ನಡ, ತುಮಕೂರು, ಕುಣಿಗಲ್, ಬಿಜಾಪುರ, ಹರಿಹರ, ಹುಬ್ಬಳ್ಳಿ ಧಾರವಾಡ ಮೊದಲಾದ ಕೇಂದ್ರಗಳಲ್ಲಿ, ಬೀಡಿ, ಹೋಟೆಲ್, ಟೈಲ್, ನೇಕಾರರು, ಸಣ್ಣ ಕೈಗಾರಿಕೆಗಳ ಕೆಲಸಗಾರರು ಮುಷ್ಕರ ಹೂಡಿದ್ದಾರೆ. ಧರಣಿ ನಡೆಸಿದ್ದಾರೆ.

ಬೆಂಗಳೂರಿನಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಮುಂಜಾನೆ ಕಬ್ಬನ್ ಪಾರ್ಕಿನಲ್ಲಿ ಧರಣಿ ನಡೆಸಿದರು. ಸಾಯಂಕಾಲ ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಮೆರವಣಿಗೆ ನಡೆಸಲಾಯಿತು. ಎಸ್. ಸೂರ್ಯನಾರಾಯಣರಾವ್, ವಿ.ಜೆ. ಕೆ. ನಾಯರ್, ಎಸ್.ಕೆ. ಉಪಾಧ್ಯಾಯ, ಆರ್. ಶ್ರೀನಿವಾಸ್, ಇ.ಕೆ.ಎಸ್. ರಾಜನ್ ಮೊದಲಾದವರು ಭಾಷಣ ಮಾಡಿದರು.

ಎಸ್. ಸೂರ್ಯನಾರಾಯಣರಾವ್, ವಿ.ಜೆ.ಕೆ. ನಾಯರ, ಎಸ್.ಕೆ. ಉಪಾಧ್ಯಾಯ, ಇ.ಕೆ. ಎಸ್. ರಾಜನ್ ಮತ್ತು ಸುಬ್ರಮಣ್ಯ ಅವರು ಕಾರ್ಮಿಕ ಮಂತ್ರಿ ಬ್ಲೇಸಿಯಸ್ ಡಿ' ಸೋಜ ಅವರನ್ನು ಭೇಟಿ ಮಾಡಿ, ಮನವಿಯನ್ನರ್ಪಿಸಿದರು. ಕನಿಷ್ಟ ವೇತನದ ಕುರಿತು ಚರ್ಚಿಸಲು ಜಂಟೀ ಸಭೆ ಕರೆಯಲಾಗುವುದೆಂದು ಹೇಳಿದರು.

## ಕುಷ್ಟಗಿಯ ಅತ್ಯಾಚಾರದ ಪ್ರಕರಣ: ಸಚಿವರಿಗೆ ನಿಯೋಗದ ಮನವಿ

ರಾಯಚೂರು ಜಿಲ್ಲೆಯ ಕುಷ್ಟಗಿ ತಾಲೂಕಿನ ಮದಲಗಟ್ಟದ ದಲಿತ ಯುವತಿ, ಶರಣವ್ವಳ ಮೇಲೆ ಮೂರು ಜನ ಸರ್ಕಾರಿ ಅಧಿಕಾರಿಗಳೂ, ಒಬ್ಬ ವಕೀಲರಿಂದಾದ ಅತ್ಯಾಚಾರ ಮತ್ತು ಕಗ್ಗೊಲೆಯನ್ನು ಬಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್ಐ) ರಾಜ್ಯ ಸಮಿತಿ ಉಗ್ರವಾಗಿ ಖಂಡಿಸಿದೆ.

ಈ ಘಟನೆ ಮತ್ತು ಅದರ ತನಿಖೆ ವಾಸಿಕಕಾಗಿ ಪ್ರಕರಣದ ಬಗ್ಗೆ ಪರಿಶೀಲಿಸಲು ಡಿ. ವೈ.ಎಫ್.ಐ.ನ ನಿಯೋಗವೊಂದು ಕುಷ್ಟಗಿಗೆ ಮಾರ್ಚ್ 11 ರಂದು ಭೇಟಿನೀಡಿತು. ಅಂದು ರಾಜ್ಯ ಗೃಹಸಚಿವರಾದ ರಮಾನಾಥ್ ರೈಯವರೂ ಸಹ ಭೇಟಿ ನೀಡಿದ್ದರು.

ವಿವಿಧ ಸಂಘಟನೆಗಳಿಂದ ಸಚಿವರಿಗೆ ಮನವಿ ಪತ್ರವನ್ನು ಸಲ್ಲಿಸಿ ಹಲವಾರು ವಿಷಯಗಳ ಬಗ್ಗೆ ಚರ್ಚಿಸಿತು. ಅತ್ಯಾಚಾರ ಮತ್ತು ಕೊಲೆಯ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳನ್ನು ದೋಷ ಮುಕ್ತರನ್ನಾಗಿಸಲು ನಡೆದಿರುವ ಪ್ರಯತ್ನಗಳನ್ನು (ಪೋಲೀಸರೂ ಸಹ ಪಾಲ್ಗೊಂಡು- ಭಯ ಹುಟ್ಟಿಸುವುದು ಇತ್ಯಾದಿ) ಸಚಿವರ ಗಮನಕ್ಕೆ ತಂದು ಸಿ.ಓ.ಡಿ. ತನಿಖೆ ಅಡ್ಡಿಪಡಿಸುತ್ತಿರುವುದರಿಂದಾಗಿ ಸಿ.ಬಿ.ಐ.ಗೆ ಒಪ್ಪಿಸಬೇಕೆಂದು ಆಗ್ರಹಿಸಲಾಯಿತು. ಅಲ್ಲದೇ ಈ ಹೀನ ಕೃತ್ಯವನ್ನು ಪ್ರತಿಭಟಿಸಿದ ಪ್ರಾಂತ ರೈತ ಸಂಘ, ಡಿ.ವೈ.ಎಫ್.ಐ, ಎಸ್.ಎಫ್.ಐ, ಮುಂತಾದ ಸಂಘಟನೆಗಳ ಮುಖಂಡರು, ಕಾರ್ಯಕರ್ತರುಗಳನ್ನು ಅಮಾನುಷವಾಗಿ ಪೋಲೀಸರು ಥಳಿಸಿರುವುದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯಿಸಲಾಯಿತು. ಮತ್ತು ಜಿಲ್ಲೆಯ ಪೋಲೀಸ್ ಅಧಿಕಾರಿಗಳನ್ನು ಸಂಪೂರ್ಣವಾಗಿ ಬದಲಾಯಿಸಲು ಸೂಚಿಸಲಾಯಿತು. ಜಾತಿ ನಡುವೆ ವೈಷಮ್ಯ ಹುಟ್ಟಿಸಲು ಯತ್ನಿಸುವ ಸಂಚನ್ನು ವಿವರಿಸಲಾಯಿತು.

ಮನವಿ ಸ್ವೀಕರಿಸಿದ ಸಚಿವರು ಸೂಕ್ತ ಕ್ರಮದ ಭರವಸೆ ನೀಡಿದರು. ಬಹುತೇಕ ಪ್ರಶ್ನೆಗಳ ಬಗ್ಗೆ ಮೌನಿಯಾಗಿದ್ದರು.

ಈ ನಿಯೋಗದಲ್ಲಿ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಪ್ರಾಂತ ರೈತ ಸಂಘದ ಮುಖಂಡ ಆರ್.ಕೆ. ದೇಸಾಯಿ, ಅಲ್ಲದೇ ಎಸ್.ಎಫ್.ಐ. ಡಿ.ವೈ.ಎಫ್.ಐ ನ ಸಂಗಾತಿಳಿದ್ದರು.

# ಶ್ವೇತ ಪತ್ರ ಬಯಲಿಗೆಳೆದ ಕುಟಿಲ ಮನಸ್ಸುಗಳು

ಡಿಸೆಂಬರ್ 22-23, 1949 ರಲ್ಲಿ ಅಯೋಧ್ಯೆಯ ಬಾಬ್ರಿಮಸೀದಿಯನ್ನು ಯಾವ ರೀತಿಯಲ್ಲಿ ಕುಟಿಲತನದಿಂದ ವಶಪಡಿಸಿಕೊಳ್ಳಲಾಯಿತು; ಹೇಗೆ ರಾಜಾಜಿ, ನೆಹರೂ, ಪಟೇಲ್ ಇವಕ್ಕೆ ಪ್ರತಿಕ್ರಿಯಿಸಿದರು; ರಾತ್ರಿ ಕಳ್ಳತನದಲ್ಲಿ ತಂದಿಟ್ಟ ಮೂರ್ತಿಗಳನ್ನು ತೆಗೆಯದೇಕೆಂದು ಮುಖ್ಯ ಕಾರ್ಯದರ್ಶಿ. ಭಗವಾನ್ ಸಹಾಯ್ ಹೇಗೆ ಪ್ರಯತ್ನಿಸಿದರು; ಹೇಗೆ, ಇವೆಲ್ಲಾ ಪ್ರಯತ್ನಗಳನ್ನು ಅಯೋಧ್ಯೆಯ ಜಿಲ್ಲಾ ಮ್ಯಾಜಿಸ್ಟ್ರೇಟ್ ಕೆ.ಕೆ.ನಯ್ಯಾರ್ ಬುಡಮೇಲು ಮಾಡಿದರು; ಹೇಗೆ ಇದೇ ನಯ್ಯಾರ್‌ಮುಂದೆ ಬಿಜೆಪಿಯ ಪೂರ್ವಜ ಜನಸಂಘದ ಎಂ.ಪಿ.ಯಾದರು. ಮಸೀದಿಯಲ್ಲಿ ಮೂರ್ತಿಗಳೊಂದಿಗೆ ಇವರ ಭಾವಚಿತ್ರವನ್ನೂ ಇಡಲಾಯಿತು- ಇವೆಲ್ಲವರ ಬಗ್ಗೆ ಜನಗಳಿಗೆ ತಿಳಿದಿರುವುದು ಬಹಳ ಕಡಿಮೆ. ಅಕ್ಟೋಬರ್ 10,1949 ರಂದು ಅಯೋಧ್ಯೆಯ ನಗರ ಮ್ಯಾಜಿಸ್ಟ್ರೇಟ್ ವರದಿಯ ಪ್ರಕಾರ ಮಸೀದಿಯ ಬಳಿ ಅದನ್ನು ಕೆಡವಿ "ಭಗವಾನ್ ಶ್ರೀ ರಾಮಚಂದ್ರ ಹುಟ್ಟಿದ ಜಾಗದಲ್ಲಿ ದೇವಸ್ಥಾನ" ಕಟ್ಟುವ ಯೋಜನೆ ಕಾರ್ಯಾರಂಭಗೊಂಡಿತ್ತು. ಅಂದರೆ ಬಾಬ್ರಿ ಮಸೀದಿ ರಾಮಜನ್ಮಭೂಮಿಯ ಮೇಲಿದೆ ಎಂದು ಹಿಂದಿನಿಂದಲೂ ಭಾವಿಸಲಾಗಿತ್ತು ಎಂಬುದು ನಿಜವಲ್ಲ! ಅದೇ ಕೆ.ಕೆ. ನಯ್ಯಾರ್ ಈ ಯೋಜನೆಯನ್ನು ಬುಡಮೇಲು ಮಾಡಿದ ಎರಡು ತಿಂಗಳಲ್ಲೇ ಬಾಬ್ರಿ ಮಸೀದಿಯನ್ನು ಹಿಂದೂ ಕೋಮುವಾದಿಗಳು ವಶಪಡಿಸಿಕೊಳ್ಳಲು ಕಪಟದಿಂದ ನೆರವಾದರು.

ಈ ಎಲ್ಲಾ ಸಂಗತಿಗಳು ಅಸ್ಪಷ್ಟವಾಗಿ ಜನಗಳಿಗೆ ಗೊತ್ತಿದೆಯೇ ವಿನಹ ಪೂರ್ಣ ವಿವರಗಳು ಇನ್ನೂ ಗೊತ್ತಿಲ್ಲ. ಸರಕಾರದ ಬಳಿ ಈ ಬಗ್ಗೆ ಪೂರ್ಣ ಮಾಹಿತಿಗಳಿವೆ. ಈ ಅಧಿಕೃತ ದಸ್ತಾವೇಜುಗಳನ್ನೆಲ್ಲಾ ಈಗ ಪ್ರಕಟಪಡಿಸಿದ್ದರೆ, ಸತ್ಯವನ್ನು ಬಯಲುಗೊಳಿಸಿದ್ದರೆ ಜನಗಳ ಮೇಲೆ ಎಂತಹ ಪರಿಣಾಮವಾಗುತ್ತಿತ್ತು, ಕೋಮು ದ್ವೇಷ ಹರಡುವ ಶಕ್ತಿಗಳನ್ನು ಎಷ್ಟು ಸುಲಭವಾಗಿ ಮೂಲೆಗುಂಪು ಮಾಡಬಹುದಿತ್ತು! ಸರಕಾರದ ಅಯೋಧ್ಯೆ ಕುರಿತಾದ ಶ್ವೇತಪತ್ರ ಇದನ್ನು ಸುಲಭವಾಗಿ ಮಾಡಬಹುದಿತ್ತು. ಆದರೆ ನರಸಿಂಹರಾವ್ ಸರಕಾರ ಹಾಗೆ ಮಾಡಲಿಲ್ಲ. ಏಕೆಂದರೆ ಈ ಶ್ವೇತ ಪತ್ರ ಈ ಸರಕಾರದ ನೀಚ ಧೋರಣೆಗೆ ಅನುಗುಣವಾದ ಕುಟಿಲ ದಸ್ತಾವೇಜು ಮಾತ್ರ ಎಂದು ಪ್ರಸಿದ್ಧ ನ್ಯಾಯ ತಜ್ಞ ಎ.ಜಿ.ನೂರಾಣಿ ಅಭಿಪ್ರಾಯಪಟ್ಟಿದ್ದಾರೆ. ನರಸಿಂಹರಾವ್ ಬಿಜೆಪಿಯನ್ನು ಎದುರಿಸಲು ಸಿದ್ಧರಿಲ್ಲ. ಬದಲಿಗೆ ಅವರೊಡನೆ ಸ್ಪರ್ಧೆಗಳಿದಿದ್ದಾರೆ. ಕಾಂಗ್ರೆಸ್‌ಗೆ ಹೇಗೂ ಮುಸ್ಲಿಂ ಮತ ಸಿಗುವುದಿಲ್ಲ. ಆದ್ದರಿಂದ ಹಿಂದು ಮತಗಳನ್ನು ಗಳಿಸಲು ಏನೂ ಮಾಡಬೇಕೋ ಅದನ್ನೆಲ್ಲಾ ಮಾಡಲು ಬಿಜೆಪಿಯೊಂದಿಗೆ ಸ್ಪರ್ಧೆ. ಇದು ಮೂರ್ಖ ಹಾಗೂ ಸಿನಿಕತನದ ಧೋರಣೆ ಎನ್ನುತ್ತಾರೆ ಶ್ರೀ ಎ.ಜಿ. ನೂರಾಣಿ. ಏಕೆಂದರೆ ಇದಕ್ಕಿಂತ ಭಿನ್ನವಾದ ಒಂದು ದಾರಿಯೂ ಇದೆ. ನಿಜ, ಅಧಿಕಾರಕ್ಕೆ ಬರಲು ಆಸೆಪಡುವ ಯಾವುದೇ ಸರಕಾರ ಹಿಂದೂಗಳ ಬೆಂಬಲ ಪಡೆಯಲೇಬೇಕು. ಆದರೆ ಬಹುಪಾಲು ಹಿಂದೂಗಳು ಸಜ್ಜನಿಕೆಯ ಸಲಹೆಗಳಿಗೆ ಓಗೊಡುವುದಿಲ್ಲ ಎಂದು ಭಾವಿಸುವುದು ಈ ಮಹಾನ್ ಕೋಮಿಗೆ ಮಾಡುವ ಅವಮಾನ ಎನ್ನುತ್ತಾರೆ ನೂರಾಣಿಯವರು. ಹಿಂದೂ ಮತಗಳನ್ನು ಗಳಿಸಲು ಬಿಜೆಪಿ ತೋರುವ ದಾರಿಯನ್ನು ತುಳಿಯಬೇಕಾಗಿಲ್ಲ. ಗಾಂಧೀಜಿಯಂತಹ ಸ್ವಾತಂತ್ರ್ಯ ಹೋರಾಟದ ಮಹಾನ್ ವ್ಯಕ್ತಿಗಳು ತೋರಿದ ದಾರಿ ಆಗಲೇ ಇದೆ ಎನ್ನುತ್ತಾರೆ ಅವರು. ಆದರೆ ನರಸಿಂಹರಾವ್ ಬಿಜೆಪಿ ದಾರಿಯ ಆರಿಸಿಕೊಂಡಿದ್ದಾರೆ ಎಂದು ಅಯೋಧ್ಯಾ ಶ್ವೇತಪತ್ರ ತೋರಿಸುತ್ತದೆ.

### "ಬಿಜೆಪಿಗೆ ಸಾಂತ್ವನ ನೀಡುವ ಶ್ವೇತಪತ್ರ"

ನೂರಾಣಿಯವರು ಈ ಶ್ವೇತಪತ್ರಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಮಾಹಿತಿ ನೀಡಿದ್ದಾರೆ. ಅಯೋಧ್ಯೆಯ ಕುರಿತು ಶ್ವೇತ ಪತ್ರ (ಅಂದರೆ ಸರಕಾರದ ಸವಿವರವಾದ ದಸ್ತಾವೇಜು) ಹೊರಡಿಸುವುದಾಗಿ ಡಿಸೆಂಬರ್ 10ರಂದು ಪ್ರಧಾನಿಗಳು ಘೋಷಿಸಿದರು. ಇನ್ನೇನು 'ಎರಡು ಮೂರು ದಿನಗಳಲ್ಲಿ ಅದು ಹೊರಬರಲಿದೆ' ಎಂದರು. ಡಿಸೆಂಬರ್ 12 ರಂದು ಮೂವರು ಬಿಜೆಪಿ ಉಪಾಧ್ಯಕ್ಷರುಗಳು- ಭಂಡಾರಿ, ಶರ್ಮಾ ಹಾಗೂ ಮಲ್ಕಾನಿ ಬಿಜೆಪಿ ತನ್ನದೇ ಒಂದು 'ಶ್ವೇತಪತ್ರ' ಪ್ರಕಟಿಸುವುದಾಗಿ ಬೆದರಿಸಿದರು. ಇದರಲ್ಲಿ ಜುಲೈ 27,1992 ರಿಂದ (ಅಂದರೆ ಸಾಧು ಸಂತರೊಡನೆ 'ಒಪ್ಪಂದ'ದ ದಿನದಿಂದ) ಡಿಸೆಂಬರ್ 6 ರ ವರೆಗಿನ ಅವಧಿಯ ಪೂರ್ಣ ಉಲ್ಲೇಖವಿರುತ್ತದೆ ಎಂದೂ ಬೆದರಿಸಿದರು. ಸಾಧು- ಸಂತರಿಗೆ ಕೊಟ್ಟ ಭರವಸೆಗಳನ್ನು ಡಿಸೆಂಬರ್ 3-4- ರಂದು ಸರಕಾರ ಈ ಬಗ್ಗೆ ರಚಿಸಿದ ವಿಶೇಷ ಸೆಲ್‌ನ ಸಂಯೋಜಕ ನರೇಶ ಚಂದ್ರ ಬಿಜೆಪಿ-ಆರ್.ಎಸ್‌ಎಸ್.-ವಿ. ಹೆಚ್.ಪಿ. ಮುಖಂಡರಿಗೆ ನೀಡಿದ ಭರವಸೆಗಳನ್ನು ಪ್ರಕಟಿಸುವುದಾಗಿ ಹೇಳಿದರು. ನರಸಿಂಹರಾಯರ ಶ್ವೇತ ಪತ್ರಕ್ಕೆ ಆಮೇಲೆ ಎರಡು-ಮೂರು ದಿನಗಳಲ್ಲ, ಎರಡು ಮೂರು ತಿಂಗಳೇ ಹಿಡಿಯಿತು. ಆದರೆ ಇದರಲ್ಲಿ ಜುಲೈ 27 ರಿಂದ ಡಿಸೆಂಬರ್ 6 ರ ನಡುವಿನ ಪ್ರಧಾನಮಂತ್ರಿಗಳ ಮಾತುಕತೆಗಳ ವಿವರವನ್ನು ಸಂಪೂರ್ಣವಾಗಿ ಮರೆಮಾಚಲಾಗಿದೆ. ಈ ನಡುವೆ ಆಗಸ್ಟ್ 15,1992 ರಂದು ದಿಲ್ಲಿಯ ಕೆಂಪುಕೋಟೆಯಿಂದ ಬಾಬ್ರಿ ಮಸೀದಿಯನ್ನು ರಕ್ಷಿಸುವ ಪ್ರಧಾನಿ ಮಂತ್ರಿಗಳ ಭರವಸೆಯ ಪ್ರಸ್ತಾಪವೂ ಈ ಶ್ವೇತಪತ್ರದಲ್ಲಿ ಇಲ್ಲ- ಏಕೆ? ಭಾರತೀಯ ನಾಗರಿಕರಿಗೆ ಈ ಮಾಹಿತಿ ತಿಳಿಯುವ ಹಕ್ಕಿದೆ ಎನ್ನುತ್ತಾರೆ ನೂರಾಣಿ.

### ಇನ್ನೆರೆಡು ಕುಟಿಲ ಅಂಶಗಳು

ಸರಕಾರದ ಈ ಬಹು ನಿರೀಕ್ಷಿತ ಶ್ವೇತ ಪತ್ರ ಬಿಜೆಪಿಯನ್ನು ಸಾಂತ್ವನಗೊಳಿಸುವ ಪ್ರಯತ್ನ ಎಂದಿರುವ ನೂರಾಣಿಯವರು ಶ್ವೇತಪತ್ರದ ಇನ್ನೆರಡು ಕುಟಿಲ ಅಂಶಗಳತ್ತ ಗಮನಸೆಳೆದಿದ್ದಾರೆ. ಮೊದಲನೆಯದಾಗಿ, ಡಿಸೆಂಬರ್ 6 ರಂದು ರಾಷ್ಟ್ರಪತಿಗಳ ಹೇಳಿಕೆ "ಬಾಬ್ರಿ ಮಸೀದಿ" ಎಂದು ಉಲ್ಲೇಖಿಸಿತ್ತು. ಆದರೆ ಸರಕಾರದ ಶ್ವೇತಪತ್ರದಲ್ಲಿ ಹಾಗೆಂದು ಉಲ್ಲೇಖಿಸದೆ "ಕಟ್ಟಡ" ಎಂದಷ್ಟೇ ಹೇಳಲಾಗಿದೆ. ಅಷ್ಟೇ ಅಲ್ಲ. ಡಿಸೆಂಬರ್ 22,1949 ರಿಂದ "ಈ ಕಟ್ಟಡವನ್ನು' ಮುಸಲ್ಮಾನರು ನಮಾಜಿಗೆ ಬಳಸಿಲ್ಲ ಎಂದಿದೆ. ಅಂದರೆ ಮುಸಲ್ಮಾನರು ಸ್ವೇಚ್ಛೆಯಿಂದ ಇದನ್ನು ಬಿಟ್ಟುಕೊಟ್ಟರು ಎಂಬ ಅರ್ಥ ಬರುವಂತೆ ಹೇಳಲಾಗಿದೆ. ವಾಸ್ತವವಾಗಿ ಅವರನ್ನು ಬಲವಂತದಿಂದ ಮಸೀದಿ ಪ್ರವೇಶಿಸದಂತೆ ತಡೆಯಲಾಗಿತ್ತು. ಪ್ರಧಾನ ಮಂತ್ರಿಗಳು ಕೆಂಪುಕೋಟೆಯಿಂದ ದೇಶಕ್ಕೆ ನೀಡಿದ ಭರವಸೆಯನ್ನು ಈಡೇರಿಸಲಾಗದ್ದು ಒಂದು ಸಣ್ಣ ತಪ್ಪು ಎಂಬಂತೆ ಚಿತ್ರಿಸುವ ಪ್ರಯತ್ನ ಇದು ಎಂದು ನೂರಾಣಿ ಹೇಳುತ್ತಾರೆ. ವಾಸ್ತವವಾಗಿ ಈ ಶ್ವೇತಪತ್ರದ ಕರಡಿನಲ್ಲಿ ಈ ಅಂಶ ಹಿಂದೂ ಕೋಮುವಾದಿಗಳತ್ತ ಇನ್ನೂ ಹೆಚ್ಚು ವಾಲಿತ್ತಂತೆ. ಬಾಬ್ರಿ ಮಸೀದಿ ಕಟ್ಟಡದೊಳಗೆ" 11-12 ನೇ ಶತಮಾನದ ಇಸ್ಲಾಮೇತರ ವಾಸ್ತುಶಿಲ್ಪದ ಅಂಶಗಳಿವೆ ಎಂದು ದೃಢಪಟ್ಟಿದೆ" ಎಂದು ಹಿಂದೂ ಕೋಮುವಾದಿಗಳ ಅಭಿಪ್ರಾಯವನ್ನು ಈ ಕರಡು ಪ್ರತಿಧ್ವನಿಸಿತ್ತು. ಆದರೆ ಅರ್ಜುನ್‌ಸಿಂಗ್‌ರವರ ತೀವ್ರ ಆಕ್ಷೇಪಣೆಯಿಂದ ನಂತರ ಇದನ್ನು ತಿದ್ದುಪಡಿಮಾಡಲಾಯಿತಂತೆ. ಈ ಅಂಶವನ್ನು ನಿರ್ಧರಿಸುವುದಕ್ಕೆ ಅಲ್ಲವೇ ಇದೇ ಸರಕಾರ ಈ ವಿವಾದವನ್ನು ಸುಪ್ರೀಂ ಕೋರ್ಟಿಗೆ ನೀಡಿರುವುದು. ಹಾಗಿರುವಾಗ ಮೊದಲೇ ಸರಕಾರ ಈ ನಿರ್ಧಾರಕ್ಕೆ ಹೇಗೆ ಬಂತು?

ಈ ಶ್ವೇತ ಪತ್ರದ ಇನ್ನೊಂದು ಕುಟಿಲ ಅಂಶ ಇದಕ್ಕೆ ಸಂಬಂಧ ಪಟ್ಟದ್ದೇ. ಎರಡು ವರ್ಷಗಳ ಹಿಂದೆ ನ್ಯಾಯಮೂರ್ತಿ ಕೃಷ್ಣ ಅಯ್ಯರ್ ನೇತೃತ್ವದ ಸ್ವತಂತ್ರ ತಂಡವೊಂದು ಎಂಟಂಶದ ಸೂತ್ರವನ್ನು ಈ ವಿವಾದ ಇತ್ಯರ್ಥಕ್ಕಾಗಿ ಇಟ್ಟಿತ್ತು. ಅದರಲ್ಲಿ ಮಸೀದಿಯಿರುವ ಜಾಗದಲ್ಲಿ ದೇವಸ್ಥಾನವಿತ್ತೇ ಎಂದು ಸಲಹಾ ರೂಪದ ಅಭಿಪ್ರಾಯ ಕೇಳಬಹುದು ಎಂದು ಸೂಚಿಸಲಾಗಿತ್ತು. ಆದರೆ ಈಗ ನರಸಿಂಹರಾವ್ ಸರಕಾರ ಸುಪ್ರೀಂ ಕೋರ್ಟ್‌ನ್ನು ಕೇಳಿದ ಪ್ರಶ್ನೆಯಲ್ಲಿ ಈ ಅಂಶವನ್ನು ಬೇಕೆಂದೇ ವಿಸ್ತರಿಸಲಾಗಿದೆ- "ಈ ಕಟ್ಟಡ ಇದ್ದ ಪ್ರದೇಶದಲ್ಲಿ ಮೊದಲು ಒಂದು ಹಿಂದೂ ದೇವಸ್ಥಾನವಿತ್ತೇ..........?" ಎಂದು ಕೇಳಲಾಗಿದೆ. ಇಲ್ಲಿ ರಾಮದೇವಸ್ಥಾನ ಒಂದು ಹಿಂದೂ ದೇವಸ್ಥಾನ ವಾಗಿಬಿಟ್ಟಿದೆ, "ಜಾಗ", "ಪ್ರದೇಶ" ವಾಗಿ ಬಿಟ್ಟಿದೆ. ಎರಡು ರೆವಿನ್ಯೂ ಜಾಗಗಳ ಒಂದು ಹಳ್ಳಿಯೇ ಈ 'ಪ್ರದೇಶ' ದಲ್ಲಿ ಬರುತ್ತದೆ. ಕಲ್ಯಾಣ್‌ಸಿಂಗ್ ಬಾರಿಬಾರಿಗೂ ಹೇಳುತ್ತಿದ್ದ ಮಾತು ನೆನಪಾಗುತ್ತದೆಯೋ? ನರಸಿಂಹರಾವ್ ಹಾಗೂ ಶರದ್‌ಪವಾರ್ ಜೊತೆ ಮಾತುಕತೆಗಳ ಸಮಯದಲ್ಲಿ ಮಸೀದಿಯನ್ನು "ಸಂಘ ಪರಿವಾರ" ಕ್ಕೆ ವಹಿಸಿಕೊಡಲಿರುವ ಒಂದು ಮುಖವುಳಿಸಿಕೊಳ್ಳುವ ಸೂತ್ರವನ್ನು ಅನ್ವೇಷಿಸಲಾಗುತ್ತಿದೆ ಎಂದು ತನಗೆ ತಿಳಿಸಲಾಗಿತ್ತು ಎಂದು ಹಲವು ಬಾರಿ ಹೇಳಿದ್ದರು ಕಲ್ಯಾಣ್‌ಸಿಂಗ್!

ಈ "ಪ್ರದೇಶ"ದಲ್ಲಿ ಒಂದು ಹಿಂದೂ ದೇವಸ್ಥಾನವಿತ್ತು ಎಂದು ಸುಪ್ರಿಂ ಕೋರ್ಟ್ ಅಭಿಪ್ರಾಯ ನೀಡುತ್ತದೆ ಇದರಿಂದ ಮಸೀದಿ ರಕ್ಷಿಸಲಾಗದ ತನ್ನ ಹೊಣೆಯಿಂದಲೂ ಜಾರಿಕೊಳ್ಳಬಹುದು, ಅಷ್ಟೇ ಅಲ್ಲ ದೇವಸ್ಥಾನ ಕಟ್ಟಿದ ಕೀರ್ತಿಗೆ ಪಾತ್ರವಾಗಿ ಬಿಜೆಪಿಯೊಂದಿಗೆ ಸ್ಪರ್ಧೆಯಲ್ಲಿ ಗೆಲ್ಲಬಹುದು- ಇದು ನರಸಿಂಹರಾವ್ ಸರಕಾರದ ಆಟ. ಈ ಹಿನ್ನೆಲೆಯಲ್ಲಿ ಈ ಕುಟಿಲ ಶ್ವೇತಪತ್ರ ಈ ಹೀನ ಧೋರಣೆಗೆ ಅತ್ಯಂತ ಸೂಕ್ತವಾದ ಅಭಿವ್ಯಕ್ತಿ ಎಂದಿದ್ದಾರೆ ಶ್ರೀ ಎ.ಜಿ. ನೂರಾಣಿ.

●

## ಸುದ್ದಿಗಳು

ಪುಟ 7 ರಿಂದ.

ಕುಸಿದ ದರಗಳಿಗೆ ಬೆಂಬಲ ದರ ನಿಗದಿಪಡಿಸಲು ಒತ್ತಾಯಿಸಲು ಹಾಗೂ ಇಂತಹ ಆತಂಕಕಾರಿ ಸಂದರ್ಭದಲ್ಲಿ ಕೋಮುವಾದಿಗಳು ದೇಶದ ರೈತರ ಹಾಗೂ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲು ಕೋಮುಗಲಭೆ ಹುಟ್ಟು ಹಾಕಿ ಸಾವಿರಾರು ಅಮಾಯಕರ ಬಲಿಗೆ ಕಾರಣರಾಗಿರುವುದನ್ನು ಖಂಡಿಸಲು ಜಿಲ್ಲಾ ಸಮ್ಮೇಳನ ನಡೆಯಲಿದೆ ಎಂದು ವಿವರಿಸಿದರು.

ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ರಾಜಶೇಖರ ಗೌಡ ಮಾಜಿ ಜಿಲ್ಲಾ ಪರಿಷತ್ ಸದಸ್ಯರು, ಕಾರ್ಯಾಧ್ಯಕ್ಷರಾಗಿ ಎಸ್. ಪ್ರಸನ್ನಕುಮಾರ್. ಸಿ. ಐ.ಟಿ.ಯು ಮುಖಂಡರು, ಪ್ರಧಾನ ಕಾರ್ಯದರ್ಶಿಯಾಗಿ ವಿ.ಎಸ್. ಶಿವಶಂಕರ್, ಖಜಾಂಚಿಯಾಗಿ ಎಸ್. ದಿವಾಕರಪ್ಪ ಕಾರ್ಯದರ್ಶಿಯಾಗಿ ಕೆ. ಗಾದಿಲಿಂಗಪ್ಪನವರಲ್ಲದೆ ಉಪಾಧ್ಯಕ್ಷರಾಗಿ ಹನುಮಂತಪ್ಪ (ಗೆಣಿಕೆಹಾಳು) ನಾಗರಾಜ (ಮುಷ್ಟಗಟ್ಟಿ) ಫಕೀರಪ್ಪ (ಸೋಮಲಾಪುರ) ಬೆನಕಪ್ಪ (ಹೆಚ್. ವೀರಾಪುರ) ರಾಮಕೃಷ್ಣಪ್ಪ (ಕ್ಯಾದಿಗೆಹಾಳ್) ಈರಣ್ಣ (ಓರೆಬಾವಿ) ಆಚೆನಪ್ಪ ( ಕಲ್ಲುಕಂಬ) ತಿಪ್ಪಣ್ಣ (ಕುರುಗೋಡು) ಬಸಪ್ಪ (ಗೆಣಿಕೆಹಾಳು ಕ್ಯಾಂಪ್). ಜಂಟಿ ಕಾರ್ಯದರ್ಶಿಗಳಾಗಿ ಲೋಕನಗೌಡ, ದೊಡ್ಡಬಸಪ್ಪ, ತಿಮ್ಮಪ್ಪ (ಅರಣ್ಯ ಇಲಾಖೆ) ರಾಮಣ್ಣ (ಡಿ.ವೈ.ಎಫ್.ಐ) ತಿಮ್ಮಪ್ಪ ವಿರೇಶ್ (ಎಸ್.ಎಫ್.ಐ) ಡಿ.ಎಂ. ನಾಗಭೂಷಣಯ್ಯ, ಅಯ್ಯಪ್ಪ, ಮಾಬೂಸಾಬ್, ತಾಯಪ್ಪ (ಹಮಾಲಿ ಸಂಘ) ತಿಪ್ಪಯ್ಯ, ಸತ್ತಾರ್ ಸಾಬ್, (ಹಮಾಲಿ ಮುಖಂಡರು ಎಮ್ಮಿಗನೂರು) ಈರಣ್ಣ, ಹುಸೇನಪ್ಪ, ಆಯ್ಕೆಯಾದರು.

### ರೈತ-ಕಾರ್ಮಿಕರ ನಾಯಕ ರಾಮಣ್ಣ ನಿಧನ

ಮಂಗಳೂರು ತಾಲೂಕು ಮುನ್ನೂರು ಗ್ರಾಮದ ದಡ್ಡೆಲಿಮಾರ ರಾಮಣ್ಣರವರು ಮಾರ್ಚ್ 4 ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿದ್ದು ಪತ್ನಿ ಹಾಗೂ ಏಳು ಮಂದಿ ಗಂಡು ಮಕ್ಕಳನ್ನು ಅಗಲಿದ್ದಾರೆ.

ರಾಮಣ್ಣ ಭೂಮಾಲೀಕರ ವಿರುದ್ಧದ ಚಳವಳಿಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದು ಇಲ್ಲಿ ರೈತ ಸಂಘ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಯಾವುದೇ ವಿಭಾಗದ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿದ್ದರೆ ಆ ಹೋರಾಟಕ್ಕೆ ಸ್ಪಂದಿಸುವ ಧೀಮಂತಿಕೆ ಉಳ್ಳವರಾಗಿದ್ದರು. ಇವರು ಮಾರ್ಕ್ಸ್‌ವಾದದ ಧ್ಯೇಯ ಧೋರಣೆಗಳಿಗೆ ಕಟ್ಟಿಬದ್ಧರಾಗಿದ್ದರು.

1953-54ರ ಕಾಲಘಟ್ಟದಲ್ಲಿ ಮಂಗಳೂರಿನ ಯೆಯ್ಯಾಡಿಯಲ್ಲಿ ಗೇರು ಬೀಜ ಕಾರ್ಖಾನೆಯ ಕಾರ್ಮಿಕರು ತಮ್ಮ ಬೇಡಿಕೆಗಾಗಿ ದೀರ್ಘಾವಧಿ ಸತ್ಯಾಗ್ರಹದಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಆ ಕಾರ್ಮಿಕರಿಗೆ ಸಹಾಯಕವಾಗಿ ಶ್ರೀಯುತರು ಈ ಪ್ರದೇಶದಿಂದ ಎತ್ತಿನಗಾಡಿ ತುಂಬಾ ಅಕ್ಕಿ ಸಂಗ್ರಹಿಸಿ ಕಳುಹಿಸಿ ಕೊಟ್ಟಿರುವುದು ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ.

ಇವರು ಮಾರ್ಕ್ಸ್‌ವಾದದ ಧ್ಯೇಯ ಧೋರಣೆಗಳಿಗೆ ಕಟ್ಟಿಬದ್ಧರಾಗಿದ್ದರು.

ಇವರ ನಿಧನಕ್ಕೆ ಸಿಪಿಐ(ಎಂ)ನ ಉಳ್ಳಾಲ ವಲಯ ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸಿದೆ.

### ವಿದ್ಯುತ್ ಸೌಲಭ್ಯಕ್ಕೆ ಕುಷ್ಟಗಿಯಲ್ಲಿ ಚಳವಳಿ ಮಹತ್ವದ ಹೋರಾಟ

ಕುಷ್ಟಗಿ ತಾಲೂಕಿನಾದ್ಯಂತ ಹಲವಾರು ಸಮಸ್ಯೆಗಳ ತಾಂಡವಾಡುತ್ತಿವೆ. ಅದರಲ್ಲೂ ವಿದ್ಯುತ್ ಕೊರತೆಯ ಸಮಸ್ಯೆಯಂತು ಹೇಳತೀರದು. ಪಟ್ಟಣಗಳಲ್ಲಿ ಅಂದರೆ ಕುಷ್ಟಗಿ ನಗರ ಮತ್ತು ಹನುಮಸಾಗರ, ಮತ್ತು ಅವರಗೆರಾ ಇತ್ಯಾದಿ ಸರ್ಕಲ್‌ಊರುಗಳಲ್ಲಿ ವಿದ್ಯುತ್‌ಇಲ್ಲದೆ ಕತ್ತಲೆ ರಾಜ್ಯವಾಡುತ್ತಿದೆ. ಜನರಿಗೆ ಇಂಥ ಕಷ್ಟಕರ ಪರಿಸ್ಥಿತಿಯುಲ್ಲಿದ್ದರೂ ಶಾಸಕ ಹನುಮಗೌಡ ಜನತೆಯ ಕೊರಟಗೆರಿ ಆಶೋತ್ತರ ಬೇಡಿಕೆಗಳಿಗೆ ಸ್ಪಂದಿಸಲಾರದೆ ಸುಮ್ಮನೆ ಕೈಕಟ್ಟಿ ಕುಳಿತುಕೊಂಡಿದ್ದಾರೆ.

ಒಂದು ಕಡೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ತೋಟಪಟ್ಟಿ (ತೋಟಗಾರಿಕೆ) ಬಿತ್ತಿದ ಬೀಜ, ಮತ್ತು ಹಾಕಿದ ಗೊಬ್ಬರ ನಾಶ, ಅದೂ ಅಲ್ಲದೇ ಇದರ ಜೊತೆಯಲ್ಲಿ ಕೃಷಿಕೂಲಿಕಾರರ ಸಮಸ್ಯೆಗಳು ಬದುಕಿಗಾಗಿ ಹಿಟ್ಟು ಇಲ್ಲದೆ. ಸಂಗಡಿ ಅನ್ನುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಕೆಲವೊಂದು ಪಟ್ಟಣಗಳಲ್ಲಿ ಕುಡಿಯಲು ನೀರು ಸಹಿತ ಸಿಗದ ಸನ್ನಿವೇಶವೂ ನಿರ್ಮಾಣವಾಗಿತ್ತು ನಲ್ಲಿಯಲ್ಲಿ ಸ್ವಲ್ಪವೂ ನೀರೇ ಸಿಗಲಾರದ ಸಮಸ್ಯೆಯಾಗಿತ್ತು.

ಇದರ ಜೊತೆಯಲ್ಲಿ ಕೆ.ಇ.ಬಿ. ಅಧಿಕಾರಿಗಳ ಭ್ರಷ್ಟಾಚಾರವು ಕೊನೆಯಿಲ್ಲದಂತಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಗ್ರಾಮಾಂತರ ಹಲ

ಪುಟ 8 ಕ್ಕೆ

### ಮೂರು ತಿಂಗಳಲ್ಲಿ ಬಿಜೆಪಿ ಗೃಹಮಂತ್ರಿ ?

ಅಯೋಧ್ಯೆಯಲ್ಲಾದಂತೆ ಗಲಭೆ ನಡೆಯುವುದಿಲ್ಲ, ಏಕೆಂದರೆ ಇದು ಕೇವಲ ಬಿಜೆಪಿ ನಡೆಸುವ ರ್‍ಯಾಲಿ, ಸಂಘಪರಿವಾರದ ರ್‍ಯಾಲಿ ಅಲ್ಲ ಎಂದರೂ ಫೆಬ್ರವರಿ 25 ರ ಬಿ. ಜೆ.ಪಿ. "ರ್‍ಯಾಲಿ" ಶಾಂತಿಯುತವಾಗಿರುತ್ತದೆಂಬ ವಿಶ್ವಾಸ ಯಾರಿಗೂ ಇರಲಿಲ್ಲ. "ನಿಷೇಧವನ್ನು ಎದುರಿಸಿ ಶಾಂತಿಯುತವಾಗಿ" ನಡೆಯಿತೆಂದು ಬಿಜೆಪಿ ಹೇಳಿಕೊಂಡ ಈ ರ್‍ಯಾಲಿಯಲ್ಲದ ರ್‍ಯಾಲಿಯ ಒಂದು ದೃಶ್ಯ- ಬಿಜೆಪಿ ಬಗ್ಗೆ ಸಹಾನುಭೂತಿಯಿರುವ 'ಇಂಡಿಯನ್ ಎಕ್ಸ್‌ಪ್ರೆಸ್' (ಮಾರ್ಚ್7)ನಲ್ಲಿ

"ಇನ್ನು ಮೂರು ತಿಂಗಳಲ್ಲಿ ನಾನು ಈ ದೇಶದ ಗೃಹಮಂತ್ರಿಯಾಗುತ್ತೇನೆ ಆಗ ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಸರಿಯಾದ ಪಾಠ ಕಲಿಸುತ್ತೇನೆ"

ಬಿ.ಎಲ್ ಶರ್ಮಾ "ಪ್ರೇಂ"

ಎಂದು ಬಿಜೆಪಿ ಸಂಸತ್ ಸದಸ್ಯ ಈ ರ್‍ಯಾಲಿ ಸಮಯದಲ್ಲಿ ದಿಲ್ಲಿ ಪೋಲೀಸರ ಮೇಲೆ ಎಗರಾಡಿದರು ಎಂದು 'ಇಂಡಿಯನ್ ಎಕ್ಸ್‌ಪ್ರೆಸ್'ನ ಅದೇ ಸಂಚಿಕೆ ಪ್ರಕಟಿಸಿದೆ.



# ಅಯೋಧ್ಯಾ ಕಾಂಡ



## ಇಂದಿನ ರಾಜಕೀಯದ ಕೆಲವು ಪ್ರಶ್ನೆಗಳು

### ಪತ್ರಿಕಾಗೋಷ್ಠಿಯೊಂದಲ್ಲಿ ಕಾಂ. ಸುರ್‌ಜಿತ್ ಉತ್ತರ

ಪ್ರಧಾನಮಂತ್ರಿಗಳು ಧರ್ಮವನ್ನು ರಾಜಕೀಯದೊಂದಿಗೆ ಬೆರೆಸುವುದನ್ನು ನಿಷೇಧಿಸುವ ಶಾಸನ ತರುವುದಾಗಿ ಹೇಳಿದ್ದಾರೆ. ಆದರೆ ಇಂತಹ ಶಾಸನ ತರುವುದರಿಂದ ಮಾತ್ರವೇ ಈ ದುಷ್ಟ ಪ್ರವೃತ್ತಿಯನ್ನು ತಡೆಯಲು ಸಾಧ್ಯವಿಲ್ಲ. ಜನಗಳ ಪ್ರಜ್ಞೆಯನ್ನು ಜಾಗೃತಗೊಳಿಸದೇ ಇದ್ದರೆ ಇಂತಹ ಶಾಸನಗಳಿಂದ ಏನೂ ಪ್ರಯೋಜನವಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಅಯೋಧ್ಯಾ ಘಟನೆ ಹಾಗೂ ನಂತರದ ಘಟನೆಗಳಿಗೆ ಇಂತಹ ಶಾಸನವಿಲ್ಲದ್ದು ಕಾರಣವಲ್ಲ, ಕೋಮುವಾದಿಗಳೊಂದಿಗೆ ಪ್ರಧಾನ ಮಂತ್ರಿಗಳ ರಾಜಿನಿಲುವು ಕಾರಣ ಎಂದು ಅವರು ಆಪಾದಿಸಿದರು.

ಕಾಂ. ಸುರ್ಜಿತ್ ಕೊಯಮತ್ತೂರಿನಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಪ್ರಶ್ನೆಯೊಂದನ್ನು ಉತ್ತರಿಸುತ್ತಾ ಹೀಗೆ ಹೇಳಿದರು. ಸ್ವಾತಂತ್ರ್ಯ ಬಂದ ಸಮಯದಲ್ಲಿ ಸಂವಿಧಾನ ಸಭೆಯಲ್ಲಿ ಚರ್ಚೆ ನಡೆಯುತ್ತಿದ್ದಾಗಲೂ ಇಂತಹ ಒಂದು ಶಾಸನದ ಪ್ರಸ್ತಾಪ ಬಂದಿತ್ತು. ಆದರೆ ಕೊನೆಗೂ ಅದನ್ನು ಜಾರಿಗೆ ತರಲಿಲ್ಲ. ಎಂದು ಸುರ್ಜಿತ್ ನೆನಪಿಸಿದರು.

ಪ್ರಧಾನ ಮಂತ್ರಿಗಳು ಸರ್ವಸಮ್ಮತಿಯ ಮಾತಾಡುತ್ತಿದ್ದಾರೆ. ಆದರೆ ಕಾಂಗ್ರೆಸ್ (ಐ) ಕೋಮುವಾದ, ಮೂಲಭೂತವಾದದ ವಿರುದ್ಧ ಯಾವುದೇ ಆಂದೋಲನ ಆರಂಭಿಸಿಲ್ಲ. ಆದರೆ ಎಡ-ಜಾತ್ಯಾತೀತ ಶಕ್ತಿಗಳು ಜಾತ್ಯಾತೀತತೆಯ ರಕ್ಷಣೆಗೆ ಒಂದು ದೇಶವ್ಯಾಪಿ ಆಂದೋಳನ ಹರಿಯಬಿಟ್ಟು 50 ಲಕ್ಷ ಸಹಿ ಸಂಗ್ರಹಣೆಯ ಕೆಲಸದಲ್ಲಿ ತೊಡಗಿದ್ದಾರೆ. ಎಪ್ರಿಲ್ 14 ರಂದು ದೆಹಲಿಯಲ್ಲಿ ಬೃಹತ್ ರ್‍ಯಾಲಿಗೆ ಸಿದ್ಧತೆ ನಡೆಸುತ್ತಿದ್ದಾರೆ ಎಂದು ಸುರ್ಜಿತ್ ಹೇಳಿದರು.

**ಮಧ್ಯಾವಧಿ ಚುನಾವಣೆಯ** ಬಗ್ಗೆ ಕೇಳಿದ ಪ್ರಶ್ನೆಯೊಂದನ್ನು ಉತ್ತರಿಸುತ್ತಾ ಸುರ್ಜಿತ್ "ನಾವು ಇದನ್ನು ಬಯಸುವುದಿಲ್ಲ. ಏಕೆಂದರೆ ಅದರಿಂದ ದೇಶದಲ್ಲಿ ಕೋಮು, ಧರ್ಮ ಆಧಾರದಲ್ಲಿ ಒಡಕು ಬರುತ್ತದೆ. ಆದರೆ ಇದು ನಮ್ಮ ಕೈಯಲಿಲ್ಲ. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಹೇಗೆ ವರ್ತಿಸುತ್ತದೆ ಎಂಬುದರ ಮೇಲೆ ಅವಲಂಬಿಸಿದೆ" ಎಂದರು.

**ಕಾಶ್ಮೀರ ಸಮಸ್ಯೆ** ಕುರಿತ ಪ್ರಶ್ನೆಯೊಂದನ್ನು ಉತ್ತರಿಸುತ್ತಾ ಸುರ್ಜಿತ್ "ಆಗಸ್ಟ್ 1992 ರಷ್ಟು ಹಿಂದೆಯೇ ಎಡಪಕ್ಷಗಳು ನ್ಯಾಶನಲ್ ಕಾನ್ಫರೆನ್ಸ್, ಕಾಂಗ್ರೆಸ್ ಪಕ್ಷ ಹಾಗೂ ಜನತಾದಳವನ್ನೊಳಗೊಂಡು, ಅಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಆರಂಭಿಸುವ ರಾಜಕೀಯ ಮುತುವರ್ಜಿ ವಹಿಸಬೇಕು ಎಂದು ಒತ್ತಾಯಿಸಿದ್ದವು" ಎಂದರು. ಆದರೆ ಸರಕಾರದ ನಿದ್ದೆ ಹರಿಯಲಿಲ್ಲ. ಈಗ ಇದ್ದಕ್ಕಿದ್ದಂತೆ ಸರಕಾರ ರಾಜ್ಯಪಾಲರನ್ನು ಬದಲಿಸಿ ರಾಜಕೀಯ ಮುತುವರ್ಜಿಯ ಮಾತಾಡುತ್ತಿದೆ ಎಂದು ವ್ಯಂಗವಾಡಿದ ಸುರ್ಜಿತ್ ಸರ್ವಸಮ್ಮತಿಯ ರಾಗ ಹಾಕುವ ಸರಕಾರ, ಈಗಲೂ ಈ ಬಗ್ಗೆ ರಾಷ್ಟ್ರೀಯ ರಾಜಕೀಯ ಪಕ್ಷಗಳೊಡನೆ ಸಮಾಲೋಚನೆ ನಡೆಸಿಲ್ಲ ಎಂದರು.

### ಅಣ್ಣಾ ಡಿಎಂಕೆ ಮತ್ತು ಭಾಜಪ ಸಂಬಂಧ

ಎ.ಐ.ಎ.ಡಿ.ಎಂ.ಕೆ.- ಕಾಂಗ್ರೆಸ್ (ಐ) ಸಂಬಂಧಗಳ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಸುರ್ಜಿತ್ ತಮಿಳುನಾಡಿನ ಸನ್ನಿವೇಶ ಗೊಂದಲಮಯವಾಗಿದೆ ಎಂದರು. ಬಿ.ಜೆ.ಪಿಯೊಂದಿಗೆ ಮೈತ್ರಿಯ ಬಗ್ಗೆ ಎಐಎಡಿಎಂಕೆ ಹೇಗೆ ಯೋಚಿಸಲು ಸಾಧ್ಯ, ಏಕೆಂದರೆ ಈ ಎರಡು ಪಕ್ಷಗಳಲ್ಲಿ ಪರಸ್ಪರ ಪೂರ್ತಿ ವಿರುದ್ಧವಾದ ದೃಷ್ಟಿಕೋಣ, ಡಿ.ಎಂ.ಕೆ. ಯಾಗಲಿ, ಎ.ಐ.ಎ.ಡಿ.ಎಂ.ಕೆ. ಯಾಗಲೀ ತಮಿಳುನಾಡಿನ ಸಾಮಾಜಿಕ ಸುಧಾರಣಾ ಆಂದೋಲನದಿಂದ ರೂಪುಗೊಂಡ ಪಕ್ಷಗಳು ಎಂದು ಸುರ್ಜಿತ್ ನೆನಪಿಸಿದರು.

*ಮಾಜಿ ರಾಷ್ಟ್ರಪತಿ ವೆಂಕಟರಾಮನ್ ರಾಷ್ಟ್ರೀಯ ಸರಕಾರ ಪ್ರಸ್ತಾಪ ಇಟ್ಟಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಈ ಬಗ್ಗೆ ಯೋಚಿಸಬಹುದೇ?* ಈ ಪ್ರಶ್ನೆಯನ್ನು ಉತ್ತರಿಸುತ್ತಾ ಸುರ್ಜಿತ್ ಒಂದು ರಾಷ್ಟ್ರೀಯ ಸರಕಾರದ ಪ್ರಶ್ನೆ ಬರುವುದು ವಿದೇಶೀ ಆಕ್ರಮಣದ ಸಂದರ್ಭದಲ್ಲಿ ಮಾತ್ರ ಎಂದರು ಮುಂದುವರೆದು ಬಿ.ಜೆ.ಪಿ.ಯಿಲ್ಲದೆ ರಾಷ್ಟ್ರೀಯ ಸರಕಾರ ಸಾಧ್ಯವಿಲ್ಲ ಆದರೆ ಬಿಜೆಪಿಯಿರುವ ರಾಷ್ಟ್ರೀಯ ಸರಕಾರದಿಂದ ಅಲ್ಪಸಂಖ್ಯಾತರಲ್ಲಿ ಪರಕೀಯ ಭಾವನೆ ಬೆಳೆಯುವಂತಾಗಬಹುದು ಎಂಬ ಕಾರಣಕ್ಕೆ ಸಿಪಿಐ(ಎಂ) ಅದನ್ನು ವಿರೋಧಿಸಿತು ಎಂದು ಸುರ್ಜಿತ್ ಸ್ಪಷ್ಟಪಡಿಸಿದರು.

## ನಾವೆಲ್ಲರೂ ಒಂದೇ ಜಾತಿ

*ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೇ ಕುಲ ;*
*ನಾವು ಮನುಜರು ;*
*ನರರ ನಡುವಿನಡ್ಡ ಗೋಡೆಗಳನು ಕುಟ್ಟಿ ಕೆಡಹುವೆವು*
*ನಾವು ಪ್ರಲಯ ರುದ್ರರು!*
*ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು*
*ನಾವು ನವ ವಿಧಾತರು !*

*ಬನ್ನಿ ರಣ್ಣ ಬನ್ನಿ ರೆಲ್ಲಬಣ್ಣದಣ್ಣ ತಮ್ಮರು*
*ನಡೆಯ ನುಡಿಯ ನೂರು ಗೋಡೆ ಗೋಡೆ ನಿಮಿರಿ ನಿಂತರೂ*
*ನಾವೆಲ್ಲರು ಒಂದೆ ತಾಯ ಎದೆಯಾಸೆಯ ಕುಡಿಗಳು ;*
*ಒಂದೆ ಮಹಾ ಪ್ರೇಮಾಗ್ನಿಯ ಹೋಮಾಗ್ನಿಯ ಕಿಡಿಗಳು*
*ಧೂಮವಾವುದನ್ನೋ ಇಲ್ಲಿ ಬೆಳೆಯ ಬಂದ ಭೀಮರು,*
*ಪ್ರೇಮಸಿದ್ಧಿಗಾಗಿ ನೋಡುತ್ತಿರುವ ಸತ್ಯ ಕಾಮರು!*
*ಕೈಕೈಗಳ ಕುಲುಕಿಸಿ*
*ಎದೆಗೆದೆಯನು ಹಾಯಿಸಿ,*
*ಭೇದವೆಲ್ಲ ಸುಟ್ಟುರಿವೊಲು ಎದೆಯೊಲವನು ಕೆರಳಿಸಿ,*
*ತೊಳತೊಳಗುವ ನರತೆಯೆಂಬ ಬಂಗಾರವನರಳಿಸಿ*
*ಯುವಜನವಿದೊ ನವಜನವಿದೊ ದುಡುಕುತಿಹುದು ಮುಂದಕೆ*
*ಪದಪದಕೂ ಯುಗ ಯುಗಗಳೆ ಸರಿಯುತಿರಲು ಹಿಂದಕೆ*
*ಒಮ್ಮತದೊಗ್ಗಟ್ಟಿನ ಒಬ್ಬಗೆ ಬಾಳಿನ ಚಂದಕೆ!*
*ಜಾತಿ ಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ,*
*ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ,*
*ಸೇರಿಕೊಳಿ, ಕೂಡಿಕೊಳಿ, ಮುನ್ನುಗ್ಗುವ ಸಾಲಿಗೆ*
*ಕತ್ತಲೊಡನೆ ಹೂಡಿದ ಈ ಉತ್ಸಾಹದ ದಾಳಿಗೆ*
*ಕೂಡಿಸಿದರೆದೆ ಕೊರಲುಗಳನು ಹೊಸ ಬಾಳಿನ ಹಾಡಿಗೆ;*
*ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ;*
*ನಾವು ಮನುಜರು!*
*ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು*
*ನಾವು ನವ ವಿಧಾತರು!*

*-- ಎಂ. ಗೋಪಾಲಕೃಷ್ಣ ಅಡಿಗ*

## ಮಂಜು ಮುಸುಕಿದ ಹಾದಿಯಲ್ಲಿ ಮುಸ್ಲಿಮರು

**-- ಸಾರಾ ಅಬೂಬಕರ್**

*ಇಂದಿನ ಉದ್ರಿಕ್ತ ಪರಿಸ್ಥಿತಿಯಲ್ಲಿ ಮುಂಬಯಿಯಲ್ಲಿ ಇತರೆಡೆಗಳಲ್ಲಿ ಬಾಂಬ್ ಆಸ್ಫೋಟಗಳಾಗುತ್ತಿರುವ ಹಿನ್ನೆಲೆಯಲ್ಲಿ, ಮುಸ್ಲಿಮರ ಕರ್ತವ್ಯ ಎಂದು ಪ್ರಗತಿಪರ ಮುಸ್ಲಿಮರ ಕರ್ತವ್ಯ ಎಂದು ಪ್ರಗತಿಪರ ಮುಸ್ಲಿಂ ಮಹಿಳೆ ಪ್ರಸಿದ್ಧ ಸಾಹಿತಿ ಸಾರಾ ಅಬೂಬಕರ್ ವಿವರಿಸಿದ್ದಾರೆ. ಮಂಗಳೂರಿನಲ್ಲಿ ಸಿ.ಪಿ.ಐ(ಎಂ) ಮತ್ತು ಅದರ ಅಭಿಮಾನಿಗಳ ಮುತುವರ್ಜಿಯಿಂದ ಜಾತ್ಯಾತೀತರೆಲ್ಲರನ್ನೂ ಒಗ್ಗೂಡಿಸಿ ನಡೆದ ಸಭೆಯ ವರದಿ ನೀಡುತ್ತಾ ಮುಸ್ಲಿಮರು ತುಳಿಯುತ್ತಿರುವ ತಪ್ಪುದಾರಿಗಳನ್ನು ಎತ್ತಿ ತೋರಿಸಿರುವುದು ಅಭಿನಂದನೀಯ. ಈ ವರದಿಯನ್ನು ಲಂಕೇಶ್ ಪತ್ರಿಕೆಯಿಂದ ಪುನರ್ಮುದ್ರಿಸಲಾಗಿದೆ.*

ಮಂಗಳೂರಿನ ಬುದ್ಧಿಜೀವಿಗಳು, ಲೇಖಕರು, ಪ್ರಾಧ್ಯಾಪಕರು, ಜಾತ್ಯಾತೀತವಾದಿಗಳು ಒಟ್ಟಾಗಿ ಕೋಮುವಾದಿ ವಿರೋಧಿ ವೇದಿಕೆಯೊಂದನ್ನು ಸಂಘಟಿಸಿದ್ದು, ಈ ವೇದಿಕೆಯ ವತಿಯಿಂದ ದಿನಾಂಕ 30-1-93 ರಂದು ಮಂಗಳೂರಿನಲ್ಲಿ ಕೋಮುವಾದಿ ವಿರೋಧಿ ಮೆರವಣಿಗೆ ಮತ್ತು ಬಹಿರಂಗ ಸಭೆ ಜರುಗಿತು. ಶ್ರೀ ಫಕೀರ್ ಮಹಮ್ಮದ್ ಕಟ್ಪಾಡಿಯವರು ಪ್ರಾಸ್ತಾವಿಕ ಭಾಷಣ ಮಾಡಿ ಸ್ವಾಗತಿಸಿದರು. ಜಿ.ಕೆ. ಗೋವಿಂದರಾವ್, ಸಿ.ಎಸ್. ರಾಮಚಂದ್ರನ್, ಪ. ನಾರಾಯಣರಾವ್, ಬಿ.ಎ. ಮೋಹಿದೀನ್, ಬಿ.ವಿ. ಕಕ್ಕಿಲ್ಲಾಯ ಮುಂತಾದವರು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು.

ಜಿ.ಕೆ. ಗೋವಿಂದರಾವ್ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ 'ಮುಸ್ಲಿಮರಿಗೆ ರಾಷ್ಟ್ರ ಪ್ರೇಮ ಇಲ್ಲವೆಂಬ ಆಪಾದನೆ ಹೊರಿಸಲಾಗುತ್ತಿದೆ. ಆದರೆ ಹಾಗೆನ್ನುವ ಹಿಂದೂಗಳಿಗೆ ಎಷ್ಟು ರಾಷ್ಟ್ರಪ್ರೇಮವಿದೆ ಎಂದು ಪ್ರಶ್ನಿಸಿದರು. ಇಂದು ಮಧ್ಯಮ ವರ್ಗದ ಹಿಂದೂಗಳು ಒಂದು ಕಾಲನ್ನು ಅಮೆರಿಕಾದಲ್ಲೇ ಇಟ್ಟಿರುತ್ತಾರೆ. ಅದಕ್ಕೆ ಅನುಕೂಲವಾಗುವಂತೆ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಾರೆ ಅವಕಾಶ ದೊರೆತೊಡನೆ ಇವರು ಇಂಗ್ಲೆಂಡ್ ಅಥವಾ ಅಮೆರಿಕಾಕ್ಕೆ ಹಾರಿಹೋಗುತ್ತಾರೆ. ತಮ್ಮ ಮಕ್ಕಳು ವಿದೇಶಗಳಿಗೆ ಹೋಗಿ ಕೈ ತುಂಬಾ ಸಂಪಾದಿಸುವುದೇ ಇವರ ಗುರಿಯಾಗಿರುತ್ತದೆ. ಅಮೆರಿಕಾದಲ್ಲಿ ಗಣಪತಿ ದೇವಸ್ಥಾನ ಕಟ್ಟಿಸುವುದು ಮತ್ತು ಎಂದಾದರೊಮ್ಮೆ ಭಾರತಕ್ಕೆ ಬಂದು ನಮಗೆ ಧರ್ಮ ಕಲಿಸುವುದು! ಇವರಿಗೆ ಈ ದೇಶದ ಕುರಿತು ಎಷ್ಟು ಕಾಳಜಿ ಇದೆಯೆಂಬುದು ಇದರಿಂದ ವ್ಯಕ್ತವಾಗುತ್ತದೆ. ನಮ್ಮ ಪಕ್ಕದಲ್ಲಿ ಮುಸ್ಲಿಂ ರಾಷ್ಟ್ರ ಇರುವುದರಿಂದಲಷ್ಟೆ ನಮ್ಮಲ್ಲಿ ರಾಷ್ಟ್ರಪ್ರೇಮ ಉಕ್ಕುತ್ತದೆ. ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಇದ್ದುದರಿಂದ ಎಲ್ಲರೂ ರಾಮಭಕ್ತರಾಗಿ ರಾಮಮಂದಿರ ಕಟ್ಟಿಸಲುದ್ಯುಕ್ತರಾಗಿದ್ದಾರೆ ಒಂದು ವೇಳೆ ಅಲ್ಲಿ ಮಸೀದಿ ಇದ್ದಿರದಿದ್ದರೆ ಅಲ್ಲಿ ಮಂದಿರ ಕಟ್ಟಿಸುವ ಕಲ್ಪನೆ ಬರುತ್ತಿತ್ತೆ? ಬೆಂಗಳೂರಿನಲ್ಲಿ ಮುಸ್ಲಿಮನನ್ನು, ತಮಿಳನನ್ನು ಕಂಡಾಗಲಷ್ಟೆ ಕನ್ನಡ ಪ್ರಜ್ಞೆ ಜಾಗೃತಗೊಳ್ಳುತ್ತದೆ' ಎಂದರು.

ಈ ದೇಶದ ವರ್ತಕ ಸಮುದಾಯ ಕೋಮುವಾದಿಗಳ ಹಿಂದಿದೆ. 'ದೇಶದ ಅವಮಾನ ಬಾಬರಿ ಮಸೀದಿ. ಅದನ್ನು ಕೆಡವಿ ಆ ಅವಮಾನವನ್ನು ತೊಡೆದೆವು ಎನ್ನುತ್ತಾರೆ ಕೋಮುವಾದಿಗಳು. ನಾವೆಲ್ಲರೂ ಸಾವಿರಾರು ವರ್ಷಗಳಿಂದ ಇಲ್ಲಿನ ದಲಿತರನ್ನು ತುಳಿಯುತ್ತಾ ಬಂದಿದ್ದೇವೆ; ಈಗಲೂ ತುಳಿಯುತ್ತಿದ್ದೇವೆ. ಇದು ನಮ್ಮ ರಾಷ್ಟ್ರಕ್ಕೆ ಅವಮಾನವಲ್ಲವೇ?' ಎಂದೂ ಪ್ರಶ್ನಿಸಿದರು. 18 ವರ್ಷಗಳ ಹಿಂದೆ ಉಡುಪಿಯ ಸ್ವಾಮಿಗಳು ಧಾರವಾಡದಲ್ಲಿ ಭಾಷಣ ಮಾಡುತ್ತಾ ವಿಧವೆಯರ ತಲೆ ಬೋಳಿಸುವುದು ಅವರು ಪರಪುರುಷರಿಗೆ ಆಕರ್ಷಕವಾಗಿ ಕಾಣಿಸದಿರಲಿ ಎನ್ನುತ್ತಾ ವಿಧವೆಯರ ಕೇಶಮುಂಡನವನ್ನು ಸಮರ್ಥಿಸಿದ್ದರು. ಈ ಕೋಮುವಾದಿಗಳ ಕೈಗೆ ಅಧಿಕಾರ ದೊರೆತರೆ ಮಹಿಳೆಯರ ಸ್ಥಿತಿ ಏನಾಗುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ ಎಂದೂ ಹೇಳಿದರು.

ಸಿ. ಎಸ್. ರಾಮಚಂದ್ರನ್ ಅವರು ಹಿಂದೂ ಮತ್ತು ಮುಸ್ಲಿಂ ಎರಡೂ ಕೋಮುವಾದಗಳ ಅತಿರೇಕವನ್ನು ವಿವರಿಸುತ್ತಾ ತಮ್ಮ ಕೆಲವೊಂದು ಅನುಭವಗಳನ್ನು ಸಭಿಕರ ಮುಂದಿಟ್ಟರು.

ಕಲ್ಲಿಕೋಟೆ ವಿಶ್ವವಿದ್ಯಾಲಯ ಶುಕ್ರವಾರ ಮಧ್ಯಾಹ್ನ 12 ಗಂಟೆಯಿಂದ 2 ಗಂಟೆಯವರೆಗೆ ಸ್ಥಗಿತಗೊಳ್ಳುತ್ತದೆ. ಕೇವಲ ಕೆಲವು ಜನರಿಗಾಗಿ ಒಂದು ಇಡೀ ವಿಶ್ವವಿದ್ಯಾಲಯ ಸ್ಥಗಿತಗೊಳ್ಳಬೇಕಾದ ಅಗತ್ಯವಿದೆಯೇ? ಎಂದು ಪ್ರಶ್ನಿಸುತ್ತಾ ವಿದೇಶವೊಂದರಲ್ಲಿ ಯಾವರೀತಿ ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಿ ಕೋಮುವಾದವನ್ನು ಬೆಳೆಸಲಾಗುತ್ತಿದೆ ಎಂಬುದಕ್ಕೆ ತಮ್ಮ ಅನುಭವದ ತುಣುಕೊಂದನ್ನು ನಮ್ಮ ಮುಂದಿಟ್ಟರು, ಸೊಹ್ರಾಬ್, ರಸ್ತುಂ ಪರಸ್ಪರ ಹೋರಾಡಿ ಮಡಿಯುವ ದೃಶ್ಯವನ್ನು ಕರುಣಾಜನಕವಾಗಿ ವಿವರಿಸುತ್ತಿದ್ದರೆ ಇಬ್ಬರು ಕಾಫಿರ್‌ಗಳು ಹೋರಾಡಿ ಸಾಯುವುದಕ್ಕೆ ನಾವೇಕೆ ದುಃಖಿಸಬೇಕು ಎನ್ನುತ್ತಾ ಹುಡುಗರು ನಗುತ್ತಿದ್ದುದನ್ನು ವಿವರಿಸಿದರು.

ಸಮಾನ ನಾಗರಿಕಾ ಸಂಹಿತೆ ಇಲ್ಲದಿರುವುದರಿಂದ ಮುಸ್ಲಿಂ ಮಹಿಳೆಯರಿಗೆ ನಷ್ಟವೇ ಹೊರತು ಹಿಂದೂಗಳಿಗಲ್ಲ. ಹಿಂದೂಗಳು ಅದರಿಂದ ತಲೆಕೆಡಿಸಿಕೊಳ್ಳಬೇಕಾದ ಅಗತ್ಯವೇ ಇಲ್ಲ. ಸಿವಿಲ್ ಕೋಡ್ ಬದಲಾಯಿಸಬೇಕಾದರೆ ಅದು ಆ ಜನರಿಂದಲೇ ಬರಬೇಕು. ನಾಗರಿಕ ಸಂಹಿತೆಯ ಕುರಿತು ಜವಾಹರಲಾಲ್ ನೆಹರೂ ಅವರು ಪಾರ್ಲಿಮೆಂಟಿನಲ್ಲಿ ಮುಸ್ಲಿಮರಿಗೆ ಆಶ್ವಾಸನೆ ಇತ್ತಿದ್ದರು. ಏನೆಂದರೆ ನಾಗರಿಕ ಸಂಹಿತೆಯನ್ನು ಬದಲಾಯಿಸಲು ಅದನ್ನು ಮುಸ್ಲಿಮರು ತಾವಾಗಿ ಕೇಳಬೇಕು. ಆಗ ಮಾತ್ರ ಅದನ್ನು ಜಾರಿಗೆ ತರಬಹುದು ತಮ್ಮ ಮಹಿಳೆಯರ ಉದ್ಧಾರಕ್ಕಾಗಿ ಶಾರದಾ ಬಿಲ್, ಹಿಂದೂ ವಿವಾಹ ಕಾಯಿದೆ ಮುಂತಾದುವನ್ನು ಹಿಂದುಗಳೂ ತಾವಾಗಿ ಕೇಳಿಸಿಕೊಂಡು ಮಾಡಿಸಿಕೊಂಡಿದ್ದಾರೆ. ಸತೀ ಸಹಗಮನದ ವಿರುದ್ಧ ಹೋರಾಡಿದವರು ಓರ್ವ ಹಿಂದುವೇ ಹೊರತು ಮುಸ್ಲಿಮನಲ್ಲ. ಹಾಗೆಯೇ ತಮ್ಮ ಸಮಾಜದ, ತಮ್ಮ ಮಹಿಳೆಯರ ಉದ್ಧಾರಕ್ಕಾಗಿ ಆ ಸಮಜದಿಂದಲೇ ಕೋರಿಕೆ ಬರಬೇಕಷ್ಟೆ ಹೊರತು ನಾವಾಗಿ ಯಾವ ನಿಯಮವನ್ನು ಯಾರ ಮೇಲೂ ಹೇರುವಂತಾಗಬಾರದು ಎಂದು ನೆಹರೂ ಅವರು ಪಾರ್ಲಿಮೆಂಟಿನಲ್ಲಿ ಹೇಳಿದ್ದರು. ಭಾರತೀಯ ದಂಡಸಂಹಿತೆ ( ಕ್ರಿಮಿನಲ್ ಪ್ರೋಸೀಜರ್ ಕೋಡ್) ಎಲ್ಲರಿಗೂ ಏಕಪ್ರಕಾರವಾಗಿ ಅನ್ವಯಿಸುತ್ತದೆ ಎಂಬುದನ್ನೂ ಇವರು ಒತ್ತಿ ಹೇಳಿದರು.

ಉತ್ತರ ಭಾರತದಲ್ಲಿದ್ದ ಸಮಸ್ಯೆಯನ್ನು ದಕ್ಷಿಣಕ್ಕೆ ತಂದವರು ಉಡುಪಿಯ ಮಠಾಧೀಶರು ಎಂಬುದನ್ನು ಪ. ನಾರಾಯಣರಾವ್ ಹೇಳಿದರು.

ಕೋಮುವಾದಿ ವಿರೋಧಿ ವೇದಿಕೆ ಸಂಘಟಿಸಿದ ಈ ಮೆರವಣಿಗೆ ಮತ್ತು ಸಭೆಯಲ್ಲಿ ಮಂಗಳೂರು ಮತ್ತು ಆಸುಪಾಸಿನಿಂದ ಬಹಳ ಕಮ್ಮಿ ಸಂಖ್ಯೆಯಲ್ಲಷ್ಟೇ ಮುಸ್ಲಿಮರು ಭಾಗವಹಿಸಿದ್ದರು. ತಮ್ಮ ಒಳಿತಿಗಾಗಿ, ತಮ್ಮ ಉದ್ಧಾರಕ್ಕಾಗಿ ಇತರರು ಹೋರಾಡುತ್ತಿರುವಾಗ ಅವರೊಡನೆ ಸೇರಿಕೊಳ್ಳಲೂ ಕೂಡಾ ಮುಸ್ಲಿಮರು ಈ ರೀತಿ ಹಿಂಜರಿಯುತ್ತಿರುವುದೇಕೆ? ಇದು ನನ್ನಿಂದ ಉತ್ತರಿಸಲಾಗದ ಪ್ರಶ್ನೆ. ಮುಸ್ಲಿಂ ಮಹಿಳೆಯರು ಬಿಡಿ, ಪುರುಷರೂ ಕೂಡಾ ಈ ರೀತಿ ನಿರ್ಲಿಪ್ತರಾದರೆ ಯಾರಿಂದಲಾದರೂ ತಮ್ಮ ಉದ್ಧಾರ ಸಾಧ್ಯವೇ? ಮುಸ್ಲಿಮರ ಈ ನಿರ್ಲಿಪ್ತತೆಗೆ ಕಾರಣವೇನು? ತಮ್ಮ ಶೈಕ್ಷಣಿಕ ಹಿಂದುಳಿದಿರುವಿಕೆಯೋ ಅಥವಾ ಮೂಲಭೂತವಾದಿ ಜಮಾತೆ-ಇಸ್ಲಾಮಿಯಗಳ ಮೆದುಳು ತೊಳೆಯುವ ಕೆಲಸವೇ? 'ಇಹಲೋಕದಲ್ಲಿ ನೀವು ಯಾವುದಕ್ಕೂ ಆಸೆ ಪಡಬೇಡಿ. ನಿಮಗೆ ಸಕಲ ಸುಖ ಸೌಭಾಗ್ಯಗಳೂ 'ಅಲ್ಲಿ' ಇವೆ ಅಲ್ಲಿ ಅದನ್ನು ಅನುಭವಿಸಲು ಸಿದ್ಧರಾಗಿ' ಎನ್ನುವ ಬೋಧನೆ ಕೇಳಿ ಕೇಳಿ ಅಮಾಯಕ ಬಡ ಮುಸ್ಲಿಮರ ದೇಹ, ಮನಸುಗಳು ಜಡ್ಡುಗಟ್ಟಿ ಹೋಗಿವೆಯೇ ? ಅಥವಾ ಈ ದೇಶದ ಬಹುಸಂಖ್ಯಾತರೆಲ್ಲರೂ ಕೋಮುವಾದಿಗಳೆಂಬ ತಪ್ಪು ಕಲ್ಪನೆಯೇ?

ಈ ದೇಶದಲ್ಲಿ ಕೋಮುವಾದಿಗಳಲ್ಲದ ಬಹುಸಂಖ್ಯಾತರ ದೊಡ್ಡ ವರ್ಗವೇ ಇದೆ. ಎಡ ರಾಜಕೀಯ ಪಕ್ಷಗಳಂತೂ ಎಂದಿನಿಂದಲೂ ಕೋಮುವಾದವನ್ನು ವಿರೋಧಿಸುತ್ತಾ ಬಂದಿವೆ. ರಾಷ್ಟ್ರೀಯ ಪತ್ರಿಕೆಗಳೆಂದು ಕರೆಸಿಕೊಳ್ಳುವ ಪತ್ರಿಕೆಗಳೂ ಯಾವ ರೀತಿ ಕೋಮುವಾದವನ್ನು ವಿರೋಧಿಸುತ್ತಾ ಬಂದಿವೆ ಎಂಬುದನ್ನು ನಾವು ಕಾಣುತ್ತಿದ್ದೇವೆ. ಪತ್ರಿಕೆಗಳ ಪತ್ರಗಳ ವಿಭಾಗದಲ್ಲಿ ಪ್ರಕಟವಾಗುವ ಪತ್ರಗಳಂತೂ ನಮ್ಮ ಕಪ್ಪುಮೋಡದ ಬೆಳ್ಳಿ ರೇಖೆಗಳು. ಇವೆಲ್ಲವನ್ನು ಮುಸ್ಲಿಮರು ಅರ್ಥಮಾಡಿಕೊಳ್ಳಬೇಕು. ಇಂತಹ ಜಾತ್ಯತೀತ ವ್ಯಕ್ತಿಗಳು, ಸಂಘಟನೆಗಳೂ ಮಾಡುವ ಎಲ್ಲ ಹೋರಾಟಕ್ಕೂ ಮುಸ್ಲಿಮರು ಬೆಂಬಲ ನೀಡಬೇಕು ಮತ್ತು ಇಂತಹ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕೋಮುವಾದಿ ವಿರೋಧಿ ವೇದಿಕೆಯ ಮುಸ್ಲಿಂ ಮಹಿಳೆಯರೂ ಬೆಂಬಲ ನೀಡಬೇಕು. ಬುರ್ಖಾ ಹಾಕಿಕೊಂಡೇ ಆದರೂ ಬಂದು ಇಂತಹ ಮೆರವಣಿಗೆ ಮತ್ತು ಸಭೆಗಳನ್ನು ಭಾಗವಹಿಸಬೇಕು. ನಮಗಾಗಿ ಇತರರು ಹೋರಾಡುತ್ತಿರುವಾಗ ನಾವು ಕುರುಡರೂ ಕಿವುಡರೂ ಆದರೆ ಮುಂದೆ ನಮಗಾಗಿ ಧ್ವನಿ ಎತ್ತುವವರೇ ಇಲ್ಲದಂತಹ ಒಂದು ಪರಿಸ್ಥಿತಿಯೂ ನಮಗೆ ಎದುರಾಗಬಹುದು. ಈಗಾಗಲೇ ನಮ್ಮ ಕೆಲವು ಧರ್ಮಾಂಧ ಸಂಘಟನೆಗಳೂ, ಮೌಲ್ವಿಗಳೂ, ನಮ್ಮ ರಾಜಕೀಯ ನಾಯಕರೂ ನಮಗೆ ಸಾಕಷ್ಟು ಹಾನಿ ಮಾಡಿದ್ದಾರೆ. ಇನ್ನುಮುಂದೆ ಕೂಡಾ ಮುಸ್ಲಿಮರು ಇವರನ್ನೇ ಅನುಸರಿಸುವುದಾದರೆ ಬರಲಿರುವ ಎಲ್ಲ ದುರಂತಗಳಿಗೂ ನಾವೇ ದಾರಿ ಮಾಡಿಕೊಟ್ಟಂತಾಗುತ್ತದೆ. ನಾವು "ಅಲ್ಲಿಗೆ" ಹೋಗುವ ಮುನ್ನ ಈ ಲೋಕದಲ್ಲಿ ಮನುಷ್ಯರಂತೆ ಬಾಳಿ ಬದುಕಬೇಕಾಗಿದೆ. ಮಂಜುಮುಸುಕಿದ ಹಾದಿಯಲ್ಲಿ ಕೈ ಹಿಡಿದು ಮುನ್ನಡೆಸಲು ನಮಗಾರೂ ಇಲ್ಲ. ಎಲ್ಲರೂ ಶಿಕ್ಷಣ ಪಡೆದು ದೀಪ ಹಚ್ಚಿಕೊಂಡು ಗಂಟುಕಟ್ಟಿಕೊಳ್ಳುವ ಎಂಬುದನ್ನು ಯಾರೂ ಮರೆಯಬಾರದು.

# ಆತ್ಮಗೌರವದ ಹಾದಿತೆರೆದೇ ಇದೆ

-- ಇ.ಎಂ.ಎಸ್.

*ಹಿಂದೆ ಬ್ರಿಟಿಷರು ಭಾರತವನ್ನು ಆಕ್ರಮಿಸಿ ಗುಲಾಮರಂತೆ ನಮ್ಮನ್ನು ದುಡಿಸಿಕೊಂಡರು. ಆದೆ ಇಂದು ದಿಲ್ಲಿಯ ಪ್ರಭುಗಳು ನಮ್ಮಷ್ಟಕ್ಕೆ ನಾವೇ ಗುಲಾಮತನವನ್ನೇಪ್ಪಿಕೊಳ್ಳದೇ ದಬೇರೆ ದಾರಿಯೇ ಇಲ್ಲ ಎನ್ನುತ್ತಿದ್ದಾರೆ ಈಗಿನ ಪರಿಸ್ಥಿತಿಯಲ್ಲಿ ಮನಮೋಹನಸಿಂಗರ ಗುಲಾಮಿಾ ಬಜೆಟ್‌ಬಿಟ್ಟರೆ ಬೇರೆ ದಾರಿಯೇ ಇಲ್ಲ ಎನ್ನುತ್ತಾರೆ.*

*ಮುಂದೆ ದಿಲ್ಲಿಯನ್ನು ಆಳಲು ಸ್ಪರ್ಧೆ ಹೂಡಿರುವ ಬಿಜೆಪಿಯವರು ಈ ಗುಲಾಮತನದ ದಾರಿಯಲ್ಲಿ ನಾಮುಂದು, ತಾಮುಂದು ಎನ್ನುವಂತೆ ಕಾಂಗ್ರೆ ಜೊತೆಯಲ್ಲಿ ಸ್ಪರ್ಧೆ ಹೂಡಿದ್ದಾರೆ.*

*ಆದರೆ ಭಾರತಕ್ಕೊಂದ ಆತ್ಮಗೌರವ ಸ್ವಾವಲಂಬನೆಯ ದಾರಿ ಇದೆ ಎನ್ನುತ್ತಾರೆ. ಶತ್ರುಗಳೂ ಗೌರವಿಸುವ ಶ್ರೀಮಂತ ಅನುಭವದ ಕಾಂ. ಇ.ಎಂ. ಎಸ್. ಕಮ್ಯುನಿಸ್ಟ್ ಪಕ್ಷಗಳು ಎಡ ಆರ್ಥಿಕ ತಜ್ಞರು ಸಾರುತ್ತಿದ್ದ ಈ ಸತ್ಯಕ್ಕೆರಿ ಹಾಗೂ ಜಾರ್ಜ್‌ಫರ್ನಾಂಡೀಸ್ ಮತ್ತವರ ಜೊತೆಗೆ ಕೆಲ ಆರ್ಥಿಕ ತಜ್ಞರೂ ದನಿಗೂಡಿಸಿರುವುದನ್ನು ಉಲ್ಲೇಖಿಸಿದ್ದಾರೆ.*

*ಬಿಜೆಪಿ ಪ್ರಕಟಿಸಿದ ಪರ್ಯಾಯ ಬಜೆಟ್ ಎಂಬ ನಾಟಕಕ್ಕೆ ಮುಖ ಪುಟದ ಪ್ರಚಾರ ನೀಡಿದ, ಮನಮೋಹನ್‌ಸಿಂಗ್‌ರ ಗುಲಾಮಿ ಬಜೆಟ್‌ಅನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸುತ್ತಿರುವ ಭಾರತದ ಪತ್ರಿಕೆಗಳು ಈ ಬಜೆಟ್ ಪರ್ಯಾಯವನ್ನು ಜನರ ಗಮನದಿಂದ ಮರೆಮಾಡಲು ಏಕೆ ಪ್ರಯತ್ನಿಸಿದವು ಎಂದು ಪ್ರಶ್ನಿಸಿದ್ದಾರೆ.*

ಮನಮೋಹನ್‌ಸಿಂಗ್ ಮತ್ತು ಅವರ ಪೋಷಕ ಪಿ.ವಿ. ನರಸಿಂಹರಾವ್ ತಮ್ಮ ಸರಕಾರ ಹಿಡಿದ ದಾರಿಯಲ್ಲಿ ಕಷ್ಟಕರ ಸಮಸ್ಯೆಗಳಿವೆಯೆಂದು ಒಪ್ಪುತ್ತಾರೆ. ನಿರುದ್ಯೋಗ, ವೇತನ, ಕೂಲಿ, ಜನಸಾಮಾನ್ಯರ ಜೀವನ ಮತ್ತು ಹಾಗೂ ಕೆಲಸದ ಪರಿಸ್ಥಿತಿ ಮುಂತಾದ ಸಾಮಾಜಿಕ-ಆರ್ಥಿಕ ಸಮಸ್ಯೆಗಳು ಹದಗೆಡುತ್ತವೆ. ವಿದೇಶೀ ಬಹುರಾಷ್ಟ್ರೀಯ ಬಂಡವಾಳ ದೊಡ್ಡ ಪ್ರಮಾಣದಲ್ಲಿ ಒಳ ಬರುವುದರಿಂದ ಭಾರತೀಯ ಆರ್ಥಿಕ ಹಾಗೂ ರಾಜಕೀಯ ಸಾರ್ವಭೌಮತೆಯ ಮೇಲೆ ಭಾರೀ ಮಿತಿ ಬರುತ್ತವೆ ಎಂದೂ ಒಪ್ಪಿಕೊಳ್ಳಲಾಗುತ್ತಿದೆ. ಆದರೆ ಬೇರೆ ದಾರಿಯಿದೆಯೇ? ಎಂಬ ಪ್ರಶ್ನೆಯನ್ನು ಅವರು ಒಡ್ಡುತ್ತಾರೆ. ಅವರ ಪ್ರಕಾರ ಇಲ್ಲ.

ಆದರೆ ಪರ್ಯಾಯ ಮಾರ್ಗ ಇದೆ ಎಂದು ಹೇಳುವ ಆರ್ಥಿಕ ತಜ್ಞರು, ಸಾಮಾಜಿಕ ವಿಜ್ಞಾನಿಗಳು, ರಾಜಕೀಯ ಕಾರ್ಯಕರ್ತರಿದ್ದಾರೆ. ಕೆಲವು ದೇಶಪ್ರೇಮಿ ಆರ್ಥಿಕ ತಜ್ಞರು ಹಾಗೂ ಎಡಪಂಥೀಯರು ಈಗಾಗಲೇ ತಮ್ಮ ಪರ್ಯಾಯವನ್ನು ದೇಶದ ಮುಂದಿಟ್ಟಿದ್ದಾರೆ. ಈಗ ಪರ್ಯಾಯ ದಾರಿಯಿದೆಯೆನ್ನುವವರ ಸಂಖ್ಯೆ ಇನ್ನೂ ಹೆಚ್ಚಿದೆ. ಉದಾಹರಣೆಗೆ ಇತ್ತೀಚೆಗೆ "ವೊಲಂಟರಿ ಆಕ್ಷನ್ ನೆಟ್‌ವರ್ಕ್ ಇಂಡಿಯಾ" ಎಂಬ ಸಂಘಟನೆಯೊಂದು ಫೆಬ್ರವರಿ 22 ರಂದು "1993-94ಕ್ಕೆ ಒಂದು ರಾಷ್ಟ್ರೀಯ ಬಜೆಟ್ -ಫಂಡ್-ಬ್ಯಾಂಕ್ ನಿರ್ದೇಶಿತ ಕೇಂದ್ರ ಬಜೆಟ್‌ಗೆ ಪರ್ಯಾಯ" ಎಂಬ ದಸ್ತಾವೇಜನ್ನು ಪತ್ರಿಕೆಗಳಿಗೆ ಬಿಡುಗಡೆಮಾಡಿತು. ಯೋಜನಾ ಆಯೋಗದ ಮಾಜಿ ಸದಸ್ಯ ಡಾ. ಅರುಣ್ ಘೋಷ್, ರಜನಿ ಕೋಠಾರಿಯವರಂತಹ ಸಾಮಾಜಿಕ, ವಿಜ್ಞಾನಿಗಳು, ಜಾರ್ಜ್ ಫರ್ನಾಂಡೀಸ್ ರಬಿರಾಯ್‌ರಂತಹ ಎಂ.ಪಿ.ಗಳು ಸದಸ್ಯರಾಗಿರುವ ಸಂಘಟನೆಯಿದು.

ಹೆಚ್ಚಿನ ಆದಾಯದ ಗುಂಪುಗಳ ಮೇಲೆ ತೆರಿಗೆ ಹಾಕಿ, ಅನಗತ್ಯ ಖರ್ಚುಗಳನ್ನು ಕಡಿತಮಾಡಿ ಸರಕಾರದ ಆದಾಯ ಹೆಚ್ಚಿಸಿ ಹಣಕಾಸು ಕೊರತೆಯನ್ನು 4. ಶೇಕ್ಕೆ ಇಳಿ ಈ ಎಲ್ಲ ಪ್ರಯತ್ನಗಳ ಫಲವಾಗಿಸಲು ಖಂಡಿತಾ ಸಾಧ್ಯ ಎನ್ನುತ್ತದೆ ಈ ದಸ್ತಾವೇಜು. ಮನಮೋಹನ್‌ಸಿಂಗ್ ಮಾದರಿಯಂತೆ ಇದು ಹೆಚ್ಚಿನ ಆದಾಯದ ಗುಂಪುಗಳಿಗೆ ತೆರಿಗೆ ರಿಯಾಯ್ತಿ ನೀಡುವುದಿಲ್ಲ ಬದಲಿಗೆ ಹೆಚ್ಚು ತೆರಿಗೆ ಹಾಕುತ್ತದೆ. ರಾಷ್ಟ್ರೀಯ ಆರ್ಥಿಕ ಸಂಶೋಧನಾ ಮಂಡಳಿಯ ಒಂದು ಅಧ್ಯಯನದ ಪ್ರಕಾರಅತೀ ಹೆಚ್ಚು ಆದಾಯವುಳ್ಳ 5 ಶೇ. ಮಂದಿ ದೇಶದ 30 ಶೇ. ಸಂಪತ್ತನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದಾರೆ. ಆದ್ದರಿಂದ ಇನ್ನೂ 45 ಲಕ್ಷ ಮಂದಿಯನ್ನು ತೆರಿಗೆಯ ವ್ಯಾಪ್ತಿಗೆ ತರಲು ಸಾಧ್ಯ ಇದರಿಂದ ನೇರ ತೆರಿಗೆಯ ಬಾಬ್ತಿನ ಹಣ 67 ಸಾವಿರ ಕೋಟಿ ರೂ.ಗೇರುತ್ತದೆ. 1992-93 ರಲ್ಲಿ ಈ ಬಾಬ್ತಿನಲ್ಲಿ ಸರಕಾರಕ್ಕೆ ದೊರೆತ ಹಣ 18ಸಾವಿರ ಕೋಟಿ ರೂ. ಪರೋಕ್ಷ ತೆರಿಗೆಯನ್ನು ಇಳಿಸಿದರೆ ಮೂಲವಸ್ತುಗಳ ಬೆಲೆ ಇಳಿದು ಜೀವನಾವಶ್ಯಕ ವಸ್ತುಗಳ ಬೆಲೆಗಳೂ ಇಳಿಯುತ್ತವೆ ಎಂದು ಈ ದಸ್ತಾವೇಜು ಅಂದಾಜು ಮಾಡಿದೆ.

ರೆವಿನ್ಯೂ ಕೊರತೆ 1992-93 ರಲ್ಲಿ 14170 ಕೋಟಿ ರೂ. ಇದ್ದದ್ದು ಸಂಪೂರ್ಣವಾಗಿ ಮಾಯವಾಗಿ 1993-94 ರಲ್ಲಿ 2484 ಕೋಟಿರೂ ಹೆಚ್ಚುವರಿ ರೆವಿನ್ಯೂ ಆದಾಯವನ್ನು ಸರಕಾರ ಗಳಿಸಲು ಸಾಧ್ಯ. ಹಣಕಾಸು ಕೊರತೆಯೂ 30 ಸಾವಿರ ಕೋಟಿ ರೂಗಳಿಗೆ ಇಳಿಯುತ್ತದೆ. ಮನಮೋಹನಸಿಂಗ್‌ರ ಬಜೆಟ್ ತೋರಿಸಿರುವ ಹಣಕಾಸು ಕೊರತೆ 36 ಸಾವಿರ ಕೋಟಿ ರೂ.

ಈ ದಸ್ತಾವೇಜಿನಲ್ಲಿ ಹಣಕಾಸು ಕೊರತೆ ಹಾಗೂ ರೆವಿನ್ಯೂ ಕೊರತೆ ಎರಡೂ ಇಳಿಯಲು ಕಾರಣ ಮನಮೋಹನಸಿಂಗ್ ಮಾದರಿಯ ಶ್ರೀಮಂತ-ಪರ ದಿಕ್ಕನ್ನು ಬಿಟ್ಟು ಬಡಜನ-ಪರ ದಿಕ್ಕನ್ನು ಹಿಡಿದಿರುವುದು. ನಮ್ಮ ಗುತ್ತೇದಾರಿಗಳ ಕೈಯಲ್ಲಿರುವ ದೊಡ್ಡ ಪತ್ರಿಕೆಗಳು ಪರ್ಯಾಯ ಮಾರ್ಗದ ಈ ಮಾದರಿಯ ಬಗ್ಗೆಯಾಗಲೀ, ಎಡ-ಪ್ರಜಾಪ್ರಭುತ್ವ ಆರ್ಥಿಕ ತಜ್ಞರು, ಸಾಮಾಜಿಕ ವಿಜ್ಞಾನಿಗಳ, ರಾಜಕೀಯ ಕಾರ್ಯಕರ್ತರು ಮಂಡಿಸಿದ ಮಾದರಿಗಳ ಬಗ್ಗೆಯೇ ಆಗಲಿ ಸ್ವಲ್ಪವೂ ಸುದ್ದಿ ನೀಡಲಿಲ್ಲ. ಅವನ್ನು ಮರೆಮಾಚಿ ಭಾರತ ಅನುಸರಿಸಬಹುದಾದ ಏಕಮಾತ್ರ ದಾರಿಯೆಂದರೆ ಮನಮೋಹನ್‌ಸಿಂಗ್ ಮಾದರಿ ಮಾತ್ರವೇ ಎಂದು ಪ್ರಚಾರ ಮಾಡುತ್ತಿವೆ. ಈ ಮಾದರಿಯನ್ನು ವಿರೋಧಿಸುವ ಯಾವುದೇ ಪರ್ಯಾಯ ನೀತಿಗಳ ಬಗ್ಗೆ ಚರ್ಚೆಯನ್ನೇ ಅವು ನಿರ್ಬಂಧಿಸುತ್ತವೆ.

ಮನಮೋಹನ್‌ಸಿಂಗ್ ಮಾದರಿ ಮತ್ತು ಅದಕ್ಕೆ ಪರ್ಯಾಯವಾದ ಮಾದರಿಗಳ ನಡುವೆ ವಿಚಾರಗಳ ತಾಕಲಾಟದಲ್ಲಿ ಒಂದು ಮೂಲಭೂತ ಪ್ರಶ್ನೆಯಿದೆ- ಈಗ ಸೋವಿಯೆಟ್ ಒಕ್ಕೂಟ ಮತ್ತು ಪೂರ್ವಯುರೋಪಿನ ಸಮಾಜವಾದಿ ಆಡಳಿತಗಳ ಅವಸಾನದ ನಂತರ ಅಮೇರಿಕಾ ಪ್ರಾಬಲ್ಯದ 'ಏಕಜಗತ್ತು' ನಮ್ಮದೆಂದು ಆಗಿರುವಾಗ ನಾವು ವಿಶ್ವಬ್ಯಾಂಕ್, ಐ.ಎಂ.ಎಫ್., ಗಾಟ್ ಇತ್ಯಾದಿಗಳು ಹಾಕಿಕೊಡುವ ದಾರಿಯಲ್ಲಿ ಸಾಗದೇಕೇ ಬೇಡವೇ?

ಮನಮೋಹನ್‌ಸಿಂಗ್ ಕಂಪೆನಿ ಇದಕ್ಕೆ ನೀಡುವ ಉತ್ತರ- ವಿಶ್ವಸಾಮ್ರಾಜ್ಯಶಾಹಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯದಿದ್ದರೆ ನಮ್ಮ ದೇಶ ವಿನಾಶವಾಗುತ್ತದೆ.

ಆದರೆ ನಮ್ಮ ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ನರಸಿಂಹರಾವ್- ಮನಮೋಹನ್‌ಸಿಂಗ್ ನೀತಿಗಳಿಂದಲೇ ದ ಶದ ವಿನಾಶವಾಗುತ್ತಿದೆ ಎಂದು ಪರಿಗಣಿಸುತ್ತವೆ. ನೆಹರೂರವರಂತೆ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಂದ ದೇಶೀ ಉದ್ದಿಮೆಗಳನ್ನು ಹಾಗೂ ಸ್ವದೇಶಿ ಗುತ್ತೇದಾರಿಗಳಿಂದ ಸಣ್ಣ ಹಾಗೂ ಮಧ್ಯಮ ಪ್ರಮಾಣ ಉದ್ದಿಮೆಗಳನ್ನು ರಕ್ಷಿಸುವ ನೀತಿಯನ್ನು ಮೂಲೆಗೆಸೆದು ಈ ಗುತ್ತೇದಾರಿಗಳು ಜನಸಾಮಾನ್ಯರೊಂದಿಗೆ ಮಾತ್ರವಲ್ಲ ಸಣ್ಣ-ಮಧ್ಯಮ ಪ್ರಮಾಣದ ಉದ್ದಿಮೆಗಳೊಂದಿಗೆ ತಮ್ಮ ಮನಬಂದಂತೆ ವರ್ತಿಸಲು ಮುಕ್ತ ಅವಕಾಶ ನೀಡಿದೆ.

## "ಇದು ಭಯಂಕರ ಬಜೆಟ್"

ಸ್ವಾವಲಂಬನೆ ಬೇಕಾದರೆ ಸಂಶೋಧನೆ ಇರಬೇಕು. ಈ ಸ್ವಾವಲಂಬನೆ ನಮ್ಮ ಆರ್ಥಿಕ ಸ್ವಾತಂತ್ರ್ಯಕ್ಕೆ ಮೂಲ ಮನಮೋಹನಸಿಂಗರ ಬಜೆಟ್ ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಗಳನ್ನು ಕಡೆಗಣಿಸಿದೆ. ಅತೀ ಹೆಚ್ಚು ಖರ್ಚು ಮತ್ತು ಕಡಿಮೆ ಪ್ರತಿಫಲ ನೀಡುವ ಸೌರಶಕ್ತಿ, ಗಾಳಿ ಶಕ್ತಿ ಇತ್ಯಾದಿಗಳ ಬಳಕೆಗೆ ಹೆಚ್ಚಿನ ಹಣ ನೀಡಿರುವ ಬಜೆಟ್ ದೇಶದ ಅತ್ಯುನ್ನತ ಸಂಶೋಧನಾ ಸಂಸ್ಥೆಯಾದ ಸಿ.ಎಸ್.ಐ. ಆರ್.ಗೆ ಅತೀ ಕಡಿಮೆ ಹಣ ತೆಗೆದಿರಿಸಿದೆ. ಇದರಿಂದ ಭಾರತದಲ್ಲಿ ಕೈಗಾರಿಕಾ ಬೆಳವಣಿಗೆಯಾಗಬಾರದೆಂದು ಸಿ.ಎಸ್.ಐ. ಆರ್‌ನಂತಹ ಸಂಸ್ಥೆಗಳ ಮತ್ತು ರಾಷ್ಟ್ರೀಯ ಸಂಶೋಧನ ಲ್ಯಾಬರೇಟರಿಗಳ ಜಾಲಗಳ ಸ್ಥಾಪನೆಯನ್ನು ವಿರೋಧಿಸಿದ್ದ ಅಮೇರಿಕಾ, ತನ್ನ ಏಜೆಂಟುರುಗಳಿಂದ ನಿರಂತರವಾಗಿ ಸಿ.ಎಸ್.ಐ. ಆರ್.ನ ಮೇಲೆ ಅಪಪ್ರಚಾರಮಾಡಿಸುತ್ತಿದ್ದ ಅಮೇರಿಕಾಕ್ಕೆ ಈಗ ನರಸಿಂಹರಾಯರ ಕಾಲದಲ್ಲಿ ಯಶ ಸಿಗಲಾರಂಭಿಸಿದೆ.

### ಐ.ಎಂ.ಎಫ್. ವಿಶ್ವಬ್ಯಾಂಕ್ ಅಭ್ಯರ್ಥಿಗಳ ನೇಮಕಾತಿ

ಮಾಂಟೆಕ್ ಸಿಂಗ್ ಅಹ್ಲೂವಾಲಿಯಾ ಕೇಂದ್ರ ಹಣಕಾಸು ಕಾರ್ಯದರ್ಶಿಯಾಗಿದ್ದಾರೆ. ಉದಾರೀಕರಣ ನೀರ ದೆಂಬಲಿರಾಗಿರುವ ಇವರು ಐ.ಎಂ.ಎಫ್ ಕಛೇರಿಯಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿದವರು. ಇದ್ದ ಗೀತಾಕೃಷ್ಣನ್ ಈಗ ಐ.ಎಂ.ಎಫ್ ನಿರ್ವಾಹಕ ನಿರ್ದೇಶಕರಾಗಿದ್ದಾರೆ. ಶೇರು ಹಗರಣದಲ್ಲಿ ಬಹುಮುಖ್ಯ ಕುಳವೆಂದು ಸಂಶಯಿಸಲ್ಪಟ್ಟಿರುವ ಈ ವ್ಯಕ್ತಿ ಐ.ಎಂ.ಎಫ್.ಗೆ ನೇಮಕ



ನರಸಿಂಹರಾವ್ ಸರಕಾರದ 21 ತಿಂಗಳಲ್ಲಿ

ವಾಗುತ್ತಿರಿರುವುದು ಏನನ್ನು ಸೂಚಿಸುತ್ತದೆ?

### "ಇದು ಭಯಂಕರ ಬಜೆಟ್" ಎಂದು ಹಿಂದಿನ ಮುಖ್ಯ ಆರ್ಥಿಕ ಸಲಹೆಗಾರ

ಕೇಂದ್ರ ಸರ್ಕಾರದ ಹಿಂದಿನ ಮುಖ್ಯ ಆರ್ಥಿಕ ಸಲಹೆಗಾರರಾದ ಡಾ. ದೀಪಕ್ ನಯ್ಯಾರ್ ಈ ಮಾತನ್ನು ಹೇಳಿದ್ದಾರೆ. ಅದು ದಿನ ಬೆಲೆಯನ್ನು ಶೇ. 25 ರಷ್ಟು ಏರಿಸುತ್ತದೆ ಎಂದಿದ್ದಾರೆ. ಅವರು ಬಜೆಟ್‌ನ ಪರಿಣಾಮದಿಂದಾಗಿ ಸಾಲದ ಕಂತು ಮತ್ತು ಬಡ್ಡಿ ವರ್ಷಕ್ಕೆ 2,200 ಕೋಟಿ ರೂಪಾಯಿಗಳಷ್ಟು ಏರಲಿದೆ. ರಕ್ಷಣಾ ಆದು 1000 ಕೋಟಿ ರೂಪಾಯಿಗಳಷ್ಟು ಏರಲಿದೆ. ಯೂರಿಯಾ ರಸಗೊಬ್ಬರ ಆದುದಿಗೆ 250 ಕೋಟಿ ರೂಪಾಯಿಗಳಷ್ಟು ಹೆಚ್ಚು ಖರ್ಚಾಗಲಿದೆ.

ಹಣದುಬ್ಬರದಿಂದಾಗಿ ತುಟ್ಟಿ ಬತ್ಯೆ 12,090 ಕೋಟಿ ರೂಪಾಯಿಗಳಷ್ಟಾಗಲಿದೆ. ಆಹಾರ, ಸಬ್ಸಿಡಿಯ ಅಂದಾಜೇ ತಪ್ಪಾಗಿದ್ದು ಅದು 300 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಲಿದೆ. ಹೀಗೆ ಈ ಎಲ್ಲ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡರೆ ನಯ್ಯಾರರ ಪ್ರಕಾರ ಬಜೆಟ್ 5000 ರಿಂದ 6000 ಕೋಟಿ ರೂಪಾಯಿಗಳಷ್ಟು ಕಡಿಮೆ ಅಂದಾಜು ಮಾಡಿದ್ದು ನಿಜದಲ್ಲಿ ಬಜೆಟ್ ಖೋತಾ ಶೇ. 5.5 ರಷ್ಟಾಗಲಿದೆ. ಇದರರ್ಥ ಹಣದುಬ್ಬರ ಹತೋಟಿಗೆ ಬರುವುದಿಲ್ಲ. ಎಂದು

ಹಾಗೆಂದ ಮೇಲೆ ಈ ಬಜೆಟ್ ಭಯಂಕರವಲ್ಲದೆ ಇನ್ನೇನು?

### ವ್ಯಾಪಾರ ಬಾಕಿ 9 ಬಿಲಿಯ ಡಾಲರ್‌ಗಳಿಗೇರುತ್ತದೆ

ಸರ್ಕಾರ ಹೇಳುವಂತೆ ದೇಶದ ರಫ್ತು ನಿರೀಕ್ಷಿತ ಮಟ್ಟಕ್ಕೆ ಏರುವುದಿಲ್ಲ ಸರ್ಕಾರದ್ದೇ ಅಂದಾಜಿನ ಪ್ರಕಾರ ರಫ್ತು 18 ಬಿಲಿಯ ಡಾಲರಿನಷ್ಟಾಗಬಹುದು. ಆದರೆ ಆಮದು 25 ಬಿಲಿಯ ಡಾಲರಿನಷ್ಟಾಗುತ್ತದೆ. ಅಂದರೆ ಸುಮಾರು 7 ಬಿಲಿಯ ಡಾಲರುಗಳಷ್ಟು ವ್ಯಾಪಾರ ಬಾಕಿ ನಮ್ಮ ಮೇಲೆ ಉಳಿಯುತ್ತದೆ. ಈ ವ್ಯಾಪಾರ ಬಾಕಿ ಸರ್ಕಾರದ ನಿರೀಕ್ಷೆಯಂತೆ ಇಳಿಯುವ ಬದಲು ಈ ಪಂಚವಾರ್ಷಿಕ ಯೋಜನೆಯಲ್ಲಿ 9 ಬಿಲಿಯ ಡಾಲರುಗಳಿಗೇರುತ್ತದೆ. ದಿನ ಬೆಳಗಾದರೆ ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳಿಂದ ಸಾಲ ಪಡೆಯುತ್ತಿರುವ ನಮ್ಮ ಸರ್ಕಾರಕ್ಕಂತೂ ಈ ವ್ಯಾಪಾರ ಬಾಕಿ ಸಾಲ ಬಾಕಿ ಇದೆಲ್ಲವನ್ನೂ ನಾವು ತೀರಿಸದೇ ಕಾಗುತ್ತದೆ. ಹಾಗೆ ಹಣವಿಲ್ಲದೆ ಕುಂಠಿತವಾಗುತ್ತದೆ ಎಂಬ ಕನಿಷ್ಠ ಅರಿವು ಇದ್ದಂತಿಲ್ಲ ಅಲ್ಲವೆ.

## ಶೇರು ಹಗರಣ
## ಪ್ರಧಾನಿ ಮಗನ ಗೋಲ್ಡಸ್ಟಾರ್

ಜಂಟಿ ಪಾರ್ಲಿಮೆಂಟರಿ ಸಮಿತಿ ಪ್ರಧಾನಿ ನರಸಿಂಹರಾಯರ ಮಗ ಪ್ರಭಾಕರ ನಿರ್ದೇಶಕರಾಗಿರುವ ಗೋಲ್ಡಸ್ಟಾರ್ ಸ್ಟೀಲ್ ಅಲಾಯ್ಸ್ ಕಂಪನಿಯ ವ್ಯವಹಾರಗಳನ್ನು ತನಿಖೆ ಮಾಡಲಿದೆ. ಭಾರತೀಯ ರಿಸರ್ವ್‌ಬ್ಯಾಂಕ್‌ನ ಜಾನಕಿರಾಮನ್ ಸಮಿತಿ ತನ್ನ ನಾಲ್ಕನೇ ವರದಿಯಲ್ಲಿ ಈ ವ್ಯವಹಾರದ ಬಗ್ಗೆ ಪ್ರಸ್ತಾಪಿಸಿದೆ. ಆಂಧ್ರಬ್ಯಾಂಕ್ ಫೈನಾನ್ಸಿಯಲ್ ಸರ್ವಿಸಸ್ ಮತ್ತು ಗೋಲ್ಡ್‌ಸ್ಟಾರ್ ನಡುವೆ ಎರಡು ಕೋಟಿ ರೂಪಾಯಿಗಳ ವಹಿವಾಟು ನಡೆದಿದ್ದ ಅದು ಶೇರು ದಲ್ಲಾಳಿ ಹಿತೇನ್ ದಲಾಲ್ ಮೂಲಕ ನಡೆದಿದೆ.

ಆಗಲೇ ಪ್ರಧಾನಿಯ ರಕ್ಷಣೆಗೆ ಹಲವು ಮಂತ್ರಿಗಳು ಕಾಂಗ್ರೆ ನಾಯಕರು ಧಾವಿಸಿದ್ದಾರೆ. ಆದರೆ ನಿಷ್ಪಕ್ಷಪಾತದ ತನಿಖೆ ನಡೆದರೆ ಪ್ರಧಾನಿಗಳ ನಿಜವಾದ ಬಣ್ಣ ಬಯಲಾದೀತು.

### ಹಾನಿ ತುಂಬಲು 272 ಮಿಲಿಯ ಪೌಂಡುಗಳು ತಂದ ಸ್ಟಾನ್‌ಚಾರ್ಟ್ ಬ್ಯಾಂಕ್

ಶೇರು ಹಗರಣದಲ್ಲಿ ನಿರ್ವಿವೇಚನೆಯಿಂದ ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡಿದ ಸ್ಟಾಂಡರ್ಡ್ ಚಾರ್ಟೆಡ್ ಬ್ಯಾಂಕ್ ಈಗ ಆಗಿರುವ ಹಾನಿ ತುಂಬಲು 272 ಮಿಲಿಯ ಪೌಂಡುಗಳನ್ನು ತಂದಿದೆ. ಅದರ ಅವ್ಯವಹಾರದ ಮೊತ್ತವಾದ 343 ಮಿಲಿಯ ಪೌಂಡ್‌ಗಳ ಶೇ 80 ರಷ್ಟಾಗುತ್ತದೆ.

ಈ ರೀತಿ ಕಕ್ಕುತ್ತಿರುವ ಈ ವಿದೇಶೀ ಬ್ಯಾಂಕ್ ಮುಂದೆ ಸುಮ್ಮನೆ ಕುಳಿತೀತೆಂದು ಭಾವಿಸಬೇಡಿ. ಮತ್ತೂ ಇಂತಹದ್ದೇ ವ್ಯವಹಾರ ನಡೆಸಿ ದುಡಿಯಲು ಹೊಂಚು ಹಾಕಿ ಕಾಯುತ್ತವೆ ಈ ಬ್ಯಾಂಕುಗಳು.

### ಜಂಟಿ ಸಂಸದೀಯ ಸಮಿತಿಯ ಮುಂದೆ ಸಾಕ್ಷ್ಯ ನುಡಿಯಬೇಕಾಗಿರುವ ಯಶವಂತ ಸಿನ್ಹಾ

ಚಂದ್ರಶೇಖರ ಮಂತ್ರಿಮಂಡಲದಲ್ಲಿ ಹಣಕಾಸು ಸಚಿವರಾಗಿದ್ದ ಯಶವಂತ ಸಿನ್ಹಾ ಜಂಟಿ ಪಾರ್ಲಿಮೆಂಟರಿ ಸಮಿತಿಯ ಮುಂದೆ ಸಾಕ್ಷ್ಯ ನುಡಿಯಬೇಕಾಗುತ್ತದೆ.

ಅವರ ಅವಧಿಯಲ್ಲಿ ರಾಷ್ಟ್ರೀಯ ಗೃಹ ಬ್ಯಾಂಕ್ ಅಧ್ಯಕ್ಷರಾಗಿ ನೇಮಕವಾದ ಎಂ. ಜೆ. ಫೆರ್ವಾನಿಯವರ ನೇಮಕಾತಿಯ ಯಾವುದೇ ವಿವರಗಳು ಹಣಕಾಸು ಮಂತ್ರಾಲಯದಲ್ಲಿ ಲಭ್ಯವಿಲ್ಲವಂತೆ. ಅವರ ಅವಧಿಯಲ್ಲೇ ವಿದೇಶೀ ಬ್ಯಾಂಕುಗಳು ನಿಯಮಗಳನ್ನು ಉಲ್ಲಂಘಿಸುತ್ತಿರುವ ಬಗೆಗೂ ವರದಿಯಾಗಿತ್ತು. ಆದರೆ ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ. ಇವೆಲ್ಲಕ್ಕೂ ಅವರು ಉತ್ತರಿಸಬೇಕಾದೀತು.!

# ದಶಕದಲ್ಲೇ ಅತೀ ಹೆಚ್ಚು ಕೊರತೆಯ ಬಜೆಟ್

**-- ಆರ್ಥಿಕತಜ್ಞ ಸಿ.ಟಿ. ಕುರಿಯನ್**


4500 ಕೋಟಿ ರೂಗಳ ತೆರಿಗೆ ರಿಯಾಯ್ತಿ ನೀಡಿದರೂ ಕಳೆದ ಹತ್ತು ವರ್ಷಗಳಲ್ಲೇ ಅತೀ ಕಮ್ಮಿ ಕೊರತೆಯ ನಯವಾದ 1993-94 ರ ಬಜೆಟ್ ಎಂದು ಪತ್ರಿಕೆಗಳು ವರ್ಣಿಸುತ್ತಿವೆ. ಇದು ನಿಜವೇ? 1993-94 ರ ಬಜೆಟ್‌ನ್ನು ಈ ರೀತಿ ವರ್ಣಿಸುವುದು ಸೂಕ್ತವಲ್ಲ ಎನ್ನುತ್ತಾರೆ ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಗೌರವ ಪ್ರಾಧ್ಯಾಪಕರು ಹಾಗೂ ಆರ್ಥಿಕ ತಜ್ಞ ಡಾ. ಸಿ.ಟಿ. ಕುರಿಯನ್

ನೀವುಯಾವ ಕೊರತೆಯ ದೃಷ್ಟಿಯಿಂದ ಬಜೆಟ್‌ನ್ನು ನೋಡುತ್ತಿದ್ದೀನಿ ಎಂಬುದರ ಮೇಲೆ ಇದು ಸರಿಯೋ ತಪ್ಪೋ ಎಂಬುದು ಅವಲಂಬಿಸಿದೆ ಎನ್ನುತ್ತಾರೆ ಅವರು.

ಐ.ಎಂ.ಎಫ್-ವಿಶ್ವಬ್ಯಾಂಕ್ ಹಣಕಾಸು ಕೊರತೆಯನ್ನು ಮಿತಗೊಳಿಸುವ ಒತ್ತಡ ಹಾಕುತ್ತಿದೆ. ಆದ್ದರಿಂದ ಸರಕಾರ ಅದನ್ನು ಮಿತಿಗೊಳಿಸಲು ಶತಪ್ರಯತ್ನ ನಡೆಸಿದೆ.

ಆದರೆ ಈಗ ಪ್ರಚಾರ ಮಾಡುತ್ತಿರುವ 4314 ಕೋಟಿ ರೂ. ಈ ಹಣಕಾಸು ಕೊರತೆ ಖುಜಾ ಅಲ್ಲ. ಅದು ಕೇವಲ ಬಜೆಟ್ ಕೊರತೆಯಷ್ಟೇ. ಅಂದರೆ ಬಜೆಟ್‌ನಲ್ಲಿ ಲೆಕ್ಕಹಾಕಿದ ಆದಾಯ ಬಂದರೆ, ಖರ್ಚು ಮೀರಿ ಹೋಗದಿದ್ದರೆ, ಒಳಗಿನ ಶ್ರೀಮಂತರಿಂದ, ಹೊರಗಿನ ಸಾಲಗಾರರಿಂದ ಸಾಲ ಬಂದರೆ, ಮೇಲೂ ಉಳಿಯುವ ಕೊರತೆ.

ಆದರೆ ನಮ್ಮ ಜೀವನವನ್ನು ನಿಜವಾಗಿ ತಟ್ಟುವುದು ಕೇಂದ್ರಸರಕಾರದ ರೆವಿನ್ಯೂ ಆದಾಯ. ಇದರ ಕಥೆಯೇನು ? ರೆವಿನ್ಯೂ




ಕೊರತೆಯ ಕಥೆ ಸಂಪೂರ್ಣ ಭಿನ್ನ ಎನ್ನುತ್ತಾರೆ ಡಾ. ಕುರಿಯನ್

1980 ರವರೆಗೂ ಭಾರತ ಸರಕಾರದ ರೆವಿನ್ಯೂ ಆದಾಯ ಖರ್ಚಿಗಿಂತ ಹೆಚ್ಚಿತ್ತು. ಅಂದರೆ ರೆವಿನ್ಯೂ ಮಿಗುತೆಯಿತ್ತು. ರೆವಿನ್ಯೂ ಕೊರತೆ ಮೊದಲು ಕಂಡು ಬಂದದ್ದು ಸುಮಾರು 1984-85 ರ ವೇಳೆಗೆ. ಏಳನೇ ಯೋಜನೆಯ ಮೊದಲ ವರ್ಷ ರೆವಿನ್ಯೂ ಕೊರತೆ 5800 ಕೋಟಿ ರೂ ಇತ್ತು. ಏಳನೇ ಯೋಜನೆಯ ಅಂತ್ಯದ ವೇಳೆಗೆ ಇದು 12 ಸಾವಿರ ಕೋಟಿ ರೂ ಗೇರಿತ್ತು. ಆಗ ನಮ್ಮ ಈಗಿನ ಹಣಕಾಸು ಮಂತ್ರಿ ಮನಮೋಹನ್‌ಸಿಂಗ್‌ರವರೇ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು ಎನ್ನುತ್ತಾರೆ ಡಾ. ಕುರಿಯನ್.ರೆವಿನ್ಯೂ ಕೊರತೆ ತುತ್ತು ತುದಿಗೇರಿದ್ದು 1990-91 ರಲ್ಲಿ ರೂ. 18,500 ಕೋಟಿ. ಆದರೆ ಅದೊಂದು ಅಸಾಮಾನ್ಯ ವರ್ಷ. ಕೊಲ್ಲಿ ಬಿಕ್ಕಟ್ಟಿನಿಂದಾಗಿ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಖರ್ಚು ವಿಪರೀತಗೊಂಡ ವರ್ಷ. 1991ರಲ್ಲಿ ಹೊಸ ಸರಕಾರ ಅದನ್ನು 1991-92 ರಲ್ಲಿ 16000 ಕೋಟಿ ರೂ ಗಿಳಿಸಿತು. ಆದರೆ ಇದೂ ದೊಡ್ಡ ಕೊರತೆಯೇ. 1992- 93 ರ ಬಜೆಟ್ ಇದನ್ನು 13,882 ಕೋಟಿ ರೂ. ಗೆ ಇಳಿಸುವುದಾಗಿ ಹೇಳಿತ್ತು. ಆದರೆ 1992-93 ರ ಪರಿಷ್ಕೃತ ಅಂದಾಜಿನ ಈ ಕೊರತೆ 16,700 ಕೋಟಿ ರೂ. 1993-94 ರ ಬಜೆಟ್ ಅಂದಾಜಿನಲ್ಲೂ ರೆವಿನ್ಯೂ ಕೊರತೆ ಕಮ್ಮಿಯಾಗಿಲ್ಲ-17,630 ಕೋಟಿ ರೂ ಗೇರಿದೆ. ಅಂದರೆ ಕಳೆದ ಹತ್ತು ವರ್ಷಗಳಲ್ಲಿ ಇದು ಎರಡನೇ ಅತೀ ಹೆಚ್ಚು ಕೊರತೆ. ಮೊದಲೇ ಹೇಳಿದಂತೆ ಅತೀ ಹೆಚ್ಚು ಕೊರತೆ ಕೊಲ್ಲಿ ಬಿಕ್ಕಟ್ಟಿನ ಅಸಾಮಾನ್ಯವರ್ಷದಲ್ಲಿ 18,500 ಕೋಟಿ. ರೆವಿನ್ಯೂ ಕೊರತೆ ಇಳಿಸುವ ತಂತ್ರ ಹಣಕಾಸು ಮಂತ್ರಿಗಳ ಬಳಿಯೇನಾದರೂ ಇದ್ದಿದ್ದರೆ ಆ ತಂತ್ರ ಸೋತಿದೆಯೆಂಬುದಂತೂ ನಿಜ ಎನ್ನುತ್ತಾರೆ ಡಾ. ಕುರಿಯನ್ ಈಗ ಹೇಳಿ 1993-94 ರ ಬಜೆಟ್ ಅತೀ ಕಮ್ಮಿ ಕೊರತೆಯ ನಯವಾದ ಬಜೆಟ್ಟೇ?

ಅದು ಸರಿ. ಆದರೆ ಈ ಕೊರತೆಯ ಅರ್ಥವೇನು? ಹಣಕಾಸು ಮಂತ್ರಿಗಳಿಗೆ ಸರಕಾರದ ಖರ್ಚಿನ ಮೇಲೆ ಹತೋಟಿ ಹಾಕಲು ಸಾಧ್ಯವಾಗಿಲ್ಲವೆಂದೇ ಇದರ ಅರ್ಥ. ಆದರೂ ಬಜೆಟ್ ಕೊರತೆ ತೋರಿಸಲು ಮನಮೋಹನ ಸಿಂಗ್‌ರಿಗೆ ಸಾಧ್ಯವಾಗಿದ್ದರೆ ಅದಕ್ಕೆ ಹಿಂದಿನ 'ಐಕ್ಯರಂಗ' ಸಂಚಿಕೆಗಳಲ್ಲಿ ಹೇಳಿರುವಂತೆ ರಾಜ್ಯಗಳಿಗೆ ಸಾಲದಲ್ಲಿ ಗಮನಾರ್ಹ ಕಡಿತ, ಸರಕಾರದಿಂದ ಬಂಡವಾಳ ಹೂಡಿಕೆಯನ್ನು 1992-93 ರ ಪರಿಷ್ಕೃತ ಅಂದಾಜಿಗಿಂತಲೂ ಕಮ್ಮಿಯಾಗಿ ತೋರಿಸಿದ್ದು ಹಾಗೂ ಕಳೆದ ಸಲಕ್ಕಿಂತಲೂ 3000 ಕೋಟಿ ರೂ. ಗಳ ಹೆಚ್ಚಿನ ಸಾಲ. ಹಿಂದಿನ ಎರಡು ಬಜೆಟ್‌ಗಳಲ್ಲಿಯೂ ಮನಮೋಹನಸಿಂಗ್‌ರು ಮಾಡಿದ್ದು ಇದನ್ನೇ ಎನ್ನುತ್ತಾರೆ ಡಾ. ಕುರಿಯನ್. ಐ.ಎಂ.ಎಫ್. ಹಣಕಾಸು ಕೊರತೆ ಎಷ್ಟಿರಬೇಕು ಎಂದು ಹಾಕಿದ ಲಕ್ಷ್ಮಣ ರೇಖೆಯನ್ನು ದಾಟಬಾರದು ಎಂಬುದಕ್ಕಾಗಿ ಇಷ್ಟೆಲ್ಲಾ ಕಸರತ್ತು. ●

# ಈ ಪರಿಯ ಸಮಾನಸ್ಪರ್ಧೆಯ ಬೇರಾವ ದೇಶದೊಳೂ ಕಾಣೆ

**-- ಡಾ. ಎಂ.ಕೆ. ಫಂದೆ**

ಕಿಸು

ಮನಮೋಹನ್‌ಸಿಂಗ್‌ರವರು ಜಾಗತಿಕ ಸ್ಪರ್ಧೆಯ ಮೂಲಕ ದಕ್ಷತೆ ಸಾಧಿಸಬೇಕು ಎನ್ನುತ್ತಾರೆ. ಆದರೆ ಅವರು ವಾಸ್ತವವಾಗಿ ಮಾಡಿರುವುದೇನು? ಭಾರತೀಯ ಉತ್ಪಾದಕರನ್ನು ವಿದೇಶೀ ಉತ್ಪಾದಕರೊಂದಿಗೆ ಅಸಮಾನ ಸ್ಪರ್ಧೆಗಿಳಿಸಿದ್ದು ಎನ್ನುತಾರೆ ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಫಂದೆ. ಅವರು ಉಕ್ಕು ಉದ್ದಿಮೆಯ ಉದಾಹರಣೆ ನೀಡುತ್ತಾರೆ.

ಉಕ್ಕು ಪ್ರಾಧಿಕಾರ (SAIL) ದ ಗೋದಾಮುಗಳು ತುಂಬಿ ತುಳುಕುತ್ತಿರುವ ಸಮಯದಲ್ಲಿ ಹಣಕಾಸು ಮಂತ್ರಿಗಳು ಉಕ್ಕಿನ ಮೇಲೆ ಕಸ್ಟಮ್ಸ್ ಸುಂಕ ಕಡಿತ ಮಾಡಿ ವಿದೇಶೀ ಉಕ್ಕನ್ನು ಅಗ್ಗಗೊಳಿಸಿದ್ದಾರೆ! ಈ ಮೂಲಕ ಭಾರತದ ಉಕ್ಕು ಉತ್ಪಾದನೆ ಮಾರುಕಟ್ಟೆ ಪಡೆಯದಂತೆ ಮಾಡಿದ್ದಾರೆ. ತಮ್ಮ ಸರಕಾರದಿಂದಲೇ ಇಂತಹ ಅನ್ಯಾಯ ಎದುರಿಸುವ ಭಾರತದ ಉಕ್ಕು ಉತ್ಪಾದಕರು ಯಾರೊಡನೆ ಸ್ಪರ್ಧಿಸಬೇಕು ಗೊತ್ತೆ? ತಮ್ಮ ಸರಕಾರದಿಂದ ಟನ್‌ಗೆ ಸುಮಾರು 3000 ರೂ ಸಹಾಯಧನ ಪಡೆಯುವ ಜರ್ಮನ್ ಉಕ್ಕು ಉತ್ಪಾದಕರೊಂದಿಗೆ ಹಾಗೂ 30 ಶೇ. ರಷ್ಟು ಕಡಿತ ಮಾಡಿ ಮಾರುವ ಜಪಾನೀ ಉಕ್ಕು ಉತ್ಪಾದಕರೊಂದಿಗೆ. ಇದು ಮನಮೋಹನ್‌ಸಿಂಗ್ ಬಯಸುವ 'ಸಮಾನ' ಸ್ಪರ್ಧೆ!

ಆದ್ದರಿಂದಲೇ ಇದು ಮುಂದುವರಿದ ದೇಶಗಳ ಪ್ರಯೋಜನದ ಬಜೆಟ್, ನಮ್ಮ ಪ್ರಯೋಜನದ ಬಜೆಟ್ ಅಲ್ಲ, ಐ.ಎಂ.ಎಫ್. ಶರತ್ತುಗಳನ್ನೆಲ್ಲಾ ಶಿರಸಾವಹಿಸಿದ ಬಜೆಟ್ ಎನ್ನುತ್ತಾರೆ ಕಾಂ. ಎಂ.ಕೆ. ಫಂದೆ. ಕಾರ್ಮಿಕ ಸಂಘಟನೆಗಳು ಕೊಟ್ಟ ಯಾವುದೇ ಸೂಚನೆಗಳನ್ನು ಗಮನಕ್ಕೆ ತಗೊಳ್ಳದ ಕೈಗಾರಿಕೋದ್ಯಮಿಗಳು ನೀಡಿದ ಹೆಚ್ಚಿನ ಪ್ರಸ್ತಾವಗಳನ್ನು ಅಳವಡಿಸಿಕೊಂಡ ಈ ಬಜೆಟ್ ಕಾರ್ಮಿಕರಿಗೆ ನೀಡಿರುವುದು 630 ಕೋಟಿ ರೂ. ಗಳ "ರಾಷ್ಟ್ರೀಯ ನವೀಕರಣ ನಿಧಿ" ! ತಮ್ಮ ವಿದೇಶೀ ಯಜಮಾನರನ್ನು ಸಂತುಷ್ಟಗೊಳಿಸಲು ತಾವು ಕಾರ್ಮಿಕರನ್ನು ಬೀದಿಗೆಸೆಯುವ 'ಎಕ್ಸಿಟ್ ನೀತಿ' ಪಾಲಿಸುತ್ತೇವೆ ಎಂದಿರುವ ಸರಕಾರದ ನಿಲುವಿಗೆ ಇನ್ನೂ ಯಾರಿಗಾದರೂ ಪುರಾವೆ ಬೇಕಿದ್ದರೆ ಪುರಾವೆ ಇಲ್ಲಿದೆ ಎನ್ನುತ್ತಾರೆ ಕಾಂ. ಫಂದೆ. 11 ಕೋಟಿ ದುಡಿಯುವ ದಿನಗಳಷ್ಟು ಉದ್ಯೋಗವಕಾಶ ಕಲ್ಪಿಸಲಾಗುವುದು ಎಂದು ಈ ಬಜೆಟ್ ಭರವಸೆ ನೀಡಿದೆ ವಾಸ್ತವವಾಗಿ ಉದ್ಯೋಗದಲ್ಲಿರುವವರೂ ರಿಟ್ರೆಂಚ್‌ಮೆಂಟ್, ಕ್ಲೋಶರ್‌ಗಳ ಮೂಲಕ ಕೆಲಸ ಕಳಕೊಳ್ಳುವಂತಾಗಿ ನಿರುದ್ಯೋಗಿಗಳ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ ಎಂದು ಡಾ. ಫಂದೆ ಅಭಿಪ್ರಾಯ ಪಟ್ಟಿದ್ದಾರೆ. ಸರಕಾರೀ ಬ್ಯಾಂಕುಗಳಿಗೆ ಖಾಸಗೀ ವಲಯದಿಂದ ಇಕ್ವಿಟಿಗಳನ್ನು ಪಡೆಯಲು ಅವಕಾಶ ನೀಡಿ ಬ್ಯಾಂಕ್ ಖಾಸಗೀಕರಣ ದತ್ತ ಸಾಗಿದ್ದಾರೆ. ಸರಕಾರದ ಬಳಿ ಬಹುಪಾಲು ಶೇರು ಇರುತ್ತದೆಂಬ ಹಣಕಾಸು ಮಂತ್ರಿಗಳ ವಾದ ಶುದ್ಧ ಪೊಳ್ಳು, ಏಕೆಂದರೆ ಈಗಲೂ ಖಾಸಗೀ ಕಂಪೆನಿಗಳಲ್ಲಿ ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಗಳೇ ಬಹುಪಾಲು ಹೊಂದಿರುತ್ತವೆ. ಆದರೂ ತಾವು ಖಾಸಗೀ ಲಾಭದ ಕಂಪೆನಿಗಳೇ ಅಲ್ಲವೇ?

ವಾಸ್ತವವಾಗಿ ಈ ಮನಮೋಹನ್ ಸಿಂಗ್‌ರ ಬಜೆಟ್ ವಿಶ್ವಬ್ಯಾಂಕ್, ಐ.ಎಂ.ಎಫ್. ಬಹುರಾಷ್ಟ್ರೀಯ ಕಂಪೆನಿಗಳು, ಲಾಭದಾಹದ ಅನಿವಾಸಿ ಭಾರತೀಯರು, ಜೂಜುಕೋರರು ಕಳ್ಳ ಸಾಗಾಣಿಕೆದಾರರು ಹಾಗೂ ಗ್ರಾಮೀಣ ಶ್ರೀಮಂತರ ಮನಮುದಗೊಳಿಸಿದ ಬಜೆಟ್ ಎಂದಿದ್ದಾರೆ.

ಬ್ರಿಟನ್ನಿನಲ್ಲಿ ನಿರುದ್ಯೋಗಿಗಳ ಸಂಖ್ಯೆ 30 ಲಕ್ಷ 62 ಸಾವಿರ ದಾಟಿದೆ ಎಂದು ಅಲ್ಲಿನ ಆಳರಸರ ಗಮನಕ್ಕೆ ತರಲು ಬ್ರಿಟನ್ನಿನ ಸಂಸತ್ತಿನೆದುರು ಆ ಸಂಖ್ಯೆಯ ಪ್ರದರ್ಶನ. ಮನಮೋಹನ್‌ಸಿಂಗ್‌ರವರು ಬಯಸುವುದು ನಿರುದ್ಯೋಗಿಗಳನ್ನು ಸೃಷ್ಟಿಸುವವರೊಂದಿಗೆ ನಮ್ಮನ್ನು ಬೆಸೆದುಕೊಳ್ಳುವ ಜಾಗತೀಕರಣವೇ? ಅದಕ್ಕಾಗಿಯೇ 630 ಕೋಟಿ ರೂಗಳ 'ನವೀಕರಣ' ನಿಧಿ?



# ತಮಿಳುನಾಡಿನಲ್ಲಿ ರೈಲು ತಡೆ ಚಳವಳಿ



ಬಜೆಟ್ ಮುಂಚೆಯೇ ಆಡಳಿತಾತ್ಮಕ ಕ್ರಮಗಳ ಮೂಲಕ ಅಕ್ಕಿ, ಸಕ್ಕರೆ, ಕಲ್ಲೆಣ್ಣೆ, ರಸಗೊಬ್ಬರದ ಬೆಲೆಗಳನ್ನು ಹೆಚ್ಚಿಸಿದ್ದನ್ನು ಹಾಗೂ ರೈಲ್ವೆ ಬಜೆಟ್‌ನಲ್ಲಿ ಪ್ರಯಾಣದರಗಳನ್ನು ಏರಿಸಿರುವುದನ್ನು ಪ್ರತಿಭಟಿಸಿ ತಮಿಳುನಾಡಿನಾದ್ಯಂತ ಮಾರ್ಚ್ ಒಂಬತ್ತರಂದು ರೈಲು ತಡೆ ಚಳವಳಿ ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಇದಕ್ಕೆ ಕರೆ ನೀಡಿತ್ತು.

ಮದ್ರಾಸ್ ನಗರವೊಂದರಲ್ಲೇ ನಾಲ್ಕು ರೈಲ್ವೆ ನಿಲ್ದಾಣಗಳಲ್ಲಿ ಕಾರ್ಯಕರ್ತರು ರೈಲ್ವೆ ಹಳಿಗಳ ಮೇಲೆ ಕುಳಿತು ಧರಣಿ ನಡೆಸಿದರು. ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಎ.ನಲ್ಲ ಶಿವನ್ ನೇತೃತ್ವದಲ್ಲಿ ಸುಮಾರು 1000 ಮಂದಿ ಕಾರ್ಯಕರ್ತರು ಉಪನಗರ ರೈಲ್ವೆ ನಿಲ್ದಾಣದಲ್ಲಿ ಪಾಲ್ಗೊಂಡಿದ್ದರು.

ತಿರುವೊಟ್ಟಿಯೂರು, ನಗ್ಗೈ-ಕ್ವೈದೆ ಮಿಲ್ಲತ ಜಿಲ್ಲೆ, ಮಧುರೆ, ಕೊಯಮತ್ತೂರು ಮೊದಲಾದ ಕಡೆಗಳಿಂದಲೂ ರೈಲು ತಡೆ ಚಳವಳಿಯ ವರದಿಗಳು ಬಂದಿವೆ.

ಕೇಂದ್ರ ಜನವಿರೋಧಿ ಕ್ರಮಗಳ ವಿರುದ್ಧದ ಈ ಆಂದೋಲನದಲ್ಲಿ ಪಾಲ್ಗೊಂಡ 35 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು. ಇವರಲ್ಲಿ ಸುಮಾರು ಒಂದು ಸಾವಿರ ಜನ ಮಹಿಳೆಯರಿದ್ದಾರೆ.

## ತ್ರಿಪುರಾದಲ್ಲಿ ನಾಲ್ವರ ಕ್ರೂರ ಹತ್ಯೆ

ಪಶ್ಚಿಮ ತ್ರಿಪುರಾ ಜಿಲ್ಲೆಯ ಜಿರಾನಾ ಪೊಲೀಸ್ ಠಾಣೆ ವ್ಯಾಪ್ತಿಯ ಭುವನ್ ಚಂತಯ್ ಗ್ರಾಮಕ್ಕೆ ಮಾರ್ಚ್ ಎಂಟು ಒಂದು ಕರಾಳ ದಿನ. ಅಂದು ರಾತ್ರಿ ಏಳರ ಗಂಟೆ ಹೊತ್ತಿಗೆ ಗ್ರಾಮದ ನಾಲ್ವರು ಯುವಕರ ಪ್ರಾಣಹರಣವಾಯಿತು. ರಾಜಧಾನಿ ಅಗರ್ತಲಾದಿಂದ ಸುಮಾರು 16ಕಿ.ಮೀ ದೂರದ ಪ್ರದೇಶದಲ್ಲಿ ದುಷ್ಕರ್ಮಿಗಳ ಗುಂಡಿಗೆ ಬಲಿಯಾದವರು ದಿಲೀಪ್‌ಸೇನ್ (38ವ.) ದಿಲೀಪ್ ಶೀಲ್ (32ವ.), ಪ್ರದೀಪ್ ಶೀಲ್ (22. ವ.), ಬಿಪಾಲ್‌ದಾಸ್ (28.ವ) ಮೊದಲಿಬ್ಬರು ಸಿಪಿಐ(ಎಂ) ನ ಸಕ್ರಿಯ ಕಾರ್ಯಕರ್ತರು ಇನ್ನಿಬ್ಬರು ಪಕ್ಷದ ಹಿತೈಷಿಗಳು.

ಸ್ಥಳೀಯ ಮಾರುಕಟ್ಟೆಯೊಂದರಲ್ಲಿ ಬುದಾಖಾ ಗ್ರಾಮದಲ್ಲಿನ ತಮ್ಮ ಮನೆಗೆ ತೆರಳುತ್ತಿದ್ದ ಈ ನಾಲ್ವರನ್ನು ಸುತ್ತುವರಿದ ಪಾತಕಿಗಳು ಅವರ ಕೈಗಳನ್ನು ಹಿಂದಕ್ಕೆ ಕಟ್ಟಿ ಹಾಕಿ ಗುಂಡು ಹಾರಿಸಿ ಅಮಾನುಷವಾಗಿ ಕೊಂದರು.

ಈ ಘೋರ ಹತ್ಯಾಕಾಂಡವನ್ನು ಸಿಪಿಎಂ ತ್ರಿಪುರಾ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಉಗ್ರವಾಗಿ ಖಂಡಿಸಿದೆ. ಬುಡಕಟ್ಟು ಜನರು ಮತ್ತು ಬಂಗಾಳಿಗಳ ಮಧ್ಯೆ ವೈರ ಹುಟ್ಟಿಸಲು ಯೋಜಿತವಾಗಿ ಈ ಕುಕೃತ್ಯ ನಡೆಸಲಾಗಿದೆ ಎಂದು ಅದು ಹೇಳಿದೆ.

ಅಸೆಂಬ್ಲಿ ಚುನಾವಣೆಗಳಲ್ಲಿ ಪೂರ್ಣ ಸೋಲನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಕಾಂಗ್ರೆಸ್ (ಐ) - ಟಿ.ಯು.ಜೆ.ಎಸ್. ಮೈತ್ರಿ ಕೂಟ 1980 ರಲ್ಲಿ ಸಂಭವಿಸಿದ ರೀತಿಯಲ್ಲಿ ಬುಡಕಟ್ಟು-ಬಂಗಾಳಿಗಳ ಮಧ್ಯೆ ಘರ್ಷಣೆಯನ್ನು ಹುಟ್ಟಿಹಾಕಲು ಯತ್ನಿಸುತ್ತಿದೆ.

ಮೈತ್ರಿಕೂಟದ ಕೆಲವು ನಾಯಕರು ಈ ಘರ್ಷಣೆಗಳನ್ನು ಪ್ರಚೋದಿಸುತ್ತಿದ್ದಾರೆ. ಆದರೆ ರಾಜ್ಯದ ಬಹುತೇಕ-ಬಂಗಾಳಿ ಜನರು ಸೌಹಾರ್ದವನ್ನು ಕಾಪಾಡಲು ಕಟ್ಟಿಬದ್ಧರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ನಿಯೋಗದ ಮನವಿ

ನೃಪೇನ್ ಚಕ್ರವರ್ತಿ, ದಶರಥದೇವ್, ಮಾಣಿಕ್ ಸರ್ಕಾರ್ ಮತ್ತು ಮಾಣಿಕ್ ಡೇ ಅವರುಳ್ಳ ಸಿಪಿಐ(ಎಂ) ನಿಯೋಗದವರೊಂದು ರಾಜ್ಯದ ಮುಖ್ಯ ಕಾರ್ಯದರ್ಶಿಯವರನ್ನು ಭೇಟಿ ಮಾಡಿ ಈ ಅಪ್ರಚೋದಿತ ಹೇಯ ಕೃತ್ಯದ ಬಗ್ಗೆ ವಿವರಣೆ ನೀಡಿತು. ದುಷ್ಕರ್ಮಿಗಳನ್ನು ಪತ್ತೆಹಚ್ಚಿ ಶಿಕ್ಷೆಗೆ ಗುರಿಪಡಿಸುವಂತೆ ನಿಯೋಗ ಮನವಿ ಮಾಡಿತು.

### ಬಂದ್

ನಾಲ್ವರ ಹತ್ಯೆಯನ್ನು ಪ್ರತಿಭಟಿಸಿ ಸಿಪಿಎಂ ಕರೆ ಮೇರೆಗೆ ಜಿರಾನಾ ಬ್ಲಾಕ್‌ನಲ್ಲಿ ಮಾರ್ಚ್ 10 ರಂದು ಬಂದ್ ನಡೆಯಿತು.

## ಬಜೆಟ್ ವಿರುದ್ಧ ಮತ ಪ್ರದರ್ಶನ

ಕೇಂದ್ರ ಸರಕಾರದ ಜನವಿರೋಧಿ ಬಜೆಟ್ ಪ್ರಸ್ತಾಪಗಳ ವಿರುದ್ಧ ಸಿಪಿಐ(ಎಂ) ಕಾರ್ಯಕರ್ತರು ಅಸ್ಸಾಂ ರಾಜಧಾನಿ ಗುವಾಹಟಿಯಲ್ಲಿ ಮತಪ್ರದರ್ಶನ ನಡೆಸಿದರು. ಮತಪ್ರದರ್ಶಕರು ಜಿಲ್ಲಾಧಿಕಾರಿ ಕಚೇರಿಯ ಆವರಣವನ್ನು ಪ್ರವೇಶಿಸದಂತೆ ಪೊಲೀಸರು ತಡೆದರು. ಈ ಕಾರ್ಯಕ್ರಮ ಮಾರ್ಚ್ ಎರಡರಂದು ನಡೆಯಿತು.

ಇದಕ್ಕೂ ಮುನ್ನ, ಫೆ. 27 ರಂದು ಕಾರ್ಯಕರ್ತರು ಗುವಾಹಟಿ ರೈಲ್ವೆ ನಿಲ್ದಾಣದಲ್ಲಿ ಸೇರಿ ಪ್ರಯಾಣದರಗಳನ್ನು ಹೆಚ್ಚಿಸಿರುವ ರೈಲ್ವೆ ಬಜೆಟ್‌ಗೆ ವಿರೋಧ ವ್ಯಕ್ತಪಡಿಸಿದರು.

ರೈಲ್ವೆ ಸೌಕರ್ಯಗಳ ವಿಚಾರದಲ್ಲಿ ಈ ಬಾರಿಯೂ ಅಸ್ಸಾಮ್‌ಗೆ ಅನ್ಯಾಯವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ನಂದೇಶ್ವರ ತಾಲೂಕ್ ದಾರ್ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ. ಅಸ್ಸಾಂನಂಥ ಹಿಂದುಳಿದ ರಾಜ್ಯಗಳು ಮತ್ತು ಇಡೀ ಪ್ರಯಾಣದ ಅಥವಾ ಸರಕು ಸಾಗಣೆ ರೈಲುಗಳ ಸೌಲಭ್ಯಗಳಿಂದ ವಂಚಿತವಾಗಿದೆ ಎಂದೂ ಅವರು ಹೇಳಿದ್ದಾರೆ.

## ಪಂಜಾಬ್ ವ್ಯಾಪಕ ಕೋಮು ಸೌಹಾರ್ದ ಆಂದೋಳನಕ್ಕೆ ಸಿದ್ಧತೆ

ಕೋಮುವಾದ ಮತ್ತು ಸರಕಾರದ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ; ಹಾಗೂ ರಾಜ್ಯದಲ್ಲಿ ಶಾಂತಿ, ನ್ಯಾಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಪಂಜಾಬಿ ಜನರನ್ನು ಅಣಿನೆರೆಯಿಸಲಿಕ್ಕಾಗಿ ಸಂಯುಕ್ತ ಚಳುವಳಿಯೊಂದನ್ನು ಹಮ್ಮಿಕೊಳ್ಳಲು ರಾಜ್ಯದ ಕೆಲವು ಪಕ್ಷಗಳು ನಿರ್ಧರಿಸಿವೆ.

ಮಾರ್ಚ್ ಎರಡರಂದು ಚಂಡೀಗಢದಲ್ಲಿ ಸಭೆ ಸೇರಿದ ಸಿಪಿಐ(ಎಂ). ಸಿಪಿಐ, ಜನತಾದಳ ಮತ್ತು ಅಕಾಲಿದಳ (ಕಾಬೂಲ್) ನಾಯಕರು ಈ ನಿರ್ಧಾರ ಕೈಗೊಂಡರು.

ಪಂಜಾಬ್ ಸಮಸ್ಯೆ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ತಳೆದಿರುವ ನಿಲುವನ್ನು ಸಭೆ ಕಟುವಾಗಿ ಟೀಕಿಸಿತು. ರಾಜಕೀಯ, ಸೈದ್ಧಾಂತಿಕ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳನ್ನು ಕಡೆಗಣಿಸಿ ಕೇವಲ ಕಾನೂನು ಮತ್ತು ಸುವ್ಯವಸ್ಥೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಅವು ನೋಡುತ್ತಿವೆ ಎಂದು ನಾಯಕರು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಭದ್ರತಾ ವಾತಾವರಣದಲ್ಲಿ ಸುಧಾರಣೆ ಆಗಿದೆ. ಪಂಜಾಬ್‌ಗೆ ಚಂಡೀಗಢ ವರ್ಗಾವಣೆ, ರಾಜೀವ್‌ಲೋಂಗೋವಾಲ್ ಒಪ್ಪಂದದ ವ್ಯಾಪ್ತಿಯಲ್ಲಿ ನದಿ ನೀರಿನ ಹಾಗೂ ಪ್ರಾದೇಶಿಕ ವಿವಾದಗಳ ಪರಿಹಾರ ಇವುಗಳಿಗಾಗಿ ಈ ಅವಕಾಶವನ್ನು ಬಳಸಿಕೊಳ್ಳಬೇಕು. ಅಲ್ಲದೆ 1984 ರಲ್ಲಿ ನಡೆದ ಸಿಖ್ ವಿರೋಧಿ ಗಲಭೆಗಳ ತಪ್ಪಿತಸ್ಥರನ್ನು ಶಿಕ್ಷಿಸಬೇಕು ಎಂದೂ ಈ ಮಹತ್ವದ ಸಭೆ ಆಗ್ರಹಪಡಿಸಿತು.

### ಪಾಠ ಕಲಿಯದ ಅಕಾಲಿದಳ

ಹಿಂದಿನ ಅನುಭವಗಳಿಂದ ಅಕಾಲಿದಳ (ಬಾದಲ್‌ಬಣ) ಯಾವುದೇ ಪಾಠವನ್ನು ಕಲಿಯುತ್ತಿಲ್ಲ ಎಂದು ಸಭೆ ಟೀಕಿಸಿತು. ಕೋಮುವಾದಿ ನಿಲುವನ್ನೇ ಅದು ಮುಂದುವರಿಸುತ್ತಿದೆ ಎಂದಿರುವ ಸಭೆ ಬಾದಲ್ ಬಣ ತೆರೆಮರೆಯಲ್ಲಿ ಬಿ.ಜೆ.ಪಿ.ಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದೆ.

ಮಂಗತ್‌ರಾಮ್, ಪಾಸ್ಲ, ಬಲವತಸಿಂಗ್ ಫರ್ಕಣ್‌ವಾಲಾ ಸಿಂಗ್ ಮತ್ತು ಚರಣಸಿಂಗ್ ವರ್ದಿ (ಸಿಪಿಐ(ಎಂ)),ಅವತಾರ್ ಸಿಂಗ್ ಮಲ್ಹೋತ್ರಾ, ಜೋಗಿಂದರ್ ಭಾಸಿನ್ ಮತ್ತು ಭೂಪಿಂದರ್ ಸಮಿರ್ (ಸಿಪಿಐ), ಕ್ಯಾಪ್ಟನ್ ಕನ್ವಲ್‌ಜಿತ್ ಸಿಂಗ್ (ಅಕಾಲಿದಳ-ಕಾಬೂಲ್) ಹಾಗೂ ರೂಪಲಾಲ್ ಸಾಥಿ (ಜನತಾದಳ) ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರು.

### ಲೇಖಕ-ಕಲಾವಿದರ ಪಣ

ಕೋಮುಶಕ್ತಿಗಳ ಹರಿಯಬಿಟ್ಟಿರುವ ಆಕ್ರಮಣವನ್ನು ಸಕ್ರಿಯವಾಗಿ ಎದುರಿಸಲು ಪಶ್ಚಿಮಬಂಗಾಳದ ಪ್ರಜಾಸತ್ತಾತ್ಮಕ ಲೇಖಕರು ಹಾಗೂ ಕಲಾವಿದರರ ಸಂಘ ಸರ್ವಾನುಮತದಿಂದ ನಿರ್ಧರಿಸಿದೆ ಸಂಘದ ಮೂರನೆ ಸಮ್ಮೇಳನ ಹಲ್ದಿಯಾದಲ್ಲಿ ಇತ್ತೀಚೆಗೆ ಮೂರು ದಿನ ಕಾಲ ನಡೆದಾಗ ಈ ಬಗ್ಗೆ ಗೊತ್ತುವಳಿಯೊಂದನ್ನು ಅಂಗೀಕರಿಸಲಾಯಿತು.

ಆತ್ಮಸಂತೃಪ್ತಿಯಿಂದಿರಲು ಇದು ಕಾಲವಲ್ಲ ಎಂದು ಸಮ್ಮೇಳನದಲ್ಲಿ ಪಾಲ್ಗೊಂಡ ಲೇಖಕರು ಮತ್ತು ಬುದ್ಧಿಜೀವಿಗಳು ಹೇಳಿದರು. ಕೋಮುವಾದಿಗಳ ಪ್ರಚಾರವನ್ನು ಪರಿಣಾಮಕಾರಿಯಾಗಿ ಎದುರಿಸುವಂತಾಗಲು ಲೇಖಕರು ಮತ್ತು ಕಲಾವಿದರು ಮನೆಮನೆಯನ್ನು ತಲುಪುವಂತಹ ತಂತ್ರವನ್ನು ರೂಪಿಸುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಜನವಾದಿ ಲೇಖಕ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಾವಳಿ ಸಿಂಗ್ ಸಮ್ಮೇಳನವನ್ನು ಉದ್ಘಾಟಿಸಿದರು. ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಶುಭಕೋರಿ ಮಾತನಾಡಿದರು. ಪಶ್ಚಿಮಬಂಗಾಳದ ವಾರ್ತಾ ಸಚಿವ ಬುದ್ಧದೇವ ಭಟ್ಟಾಚಾರ್ಯ ಸಮಾರೋಪ ಭಾಷಣ ಮಾಡಿದರು.

### ಸೊಹೆಲ್ ಸಿಂಗ್ ಇನ್ನಿಲ್ಲ

ಸಿಪಿಐ(ಎಂ) ಪಂಜಾಬ್ ರಾಜ್ಯ ಸಮಿತಿಯ ಮುಖವಾಣಿಯಾದ 'ಲೋಕ್ ಲಹರ್'ನ ಸಂಪಾದಕರು ರಾಜ್ಯ ಸಮಿತಿ ಸದಸ್ಯರೂ ಆಗಿದ್ದ ಕಾಮ್ರೇಡ್ ಸೊಹೇಲ್ ಸಿಂಗ್ ಮಾರ್ಚ್ ಎಂಟರಂದು ಹೃದಯಾಘಾತದಿಂದ ನಿಧನರಾದರು. ಅವರಿಗೆ [illegible] ವರ್ಷ ಪ್ರಾಯವಾಗಿತ್ತು.

ಸಿಪಿಐ(ಎಂ)ನ ಸಾವಿರಾರು ಕಾರ್ಯಕರ್ತರು ವಿವಿಧ ರಾಜಕೀಯ ಪಕ್ಷಗಳ ನಾಯಕ, ಪತ್ರಕರ್ತರು ಮತ್ತು ಬುದ್ಧಿಜೀವಿಗಳ ಸಮ್ಮುಖದಲ್ಲಿ ಮಾರ್ಚ್ 9 ರಂದು ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಿತು. ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಎಸ್. ರಾಮಚಂದ್ರಪಿಳ್ಳೆ, ಕೇಂದ್ರ ಸಮಿತಿ ಸದಸ್ಯ ಹರಿಸಿಂಗ್ ಕಾಂಗ್ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಶರಣಪ್ಪನ ಪ್ರಕರಣವನ್ನು ಸಿಬಿಐಗೆ ಒಪ್ಪಿಸಲು ಹಟ್ಟಿಯಲ್ಲಿ ಯಶಸ್ವಿ ಬಂದ್

ಹಟ್ಟಿ : ಕುಷ್ಟಗಿಯಲ್ಲಿ ನಡೆದ ಶರಣಪ್ಪನ ಅತ್ಯಾಚಾರದ ಸಂಬಂಧ ಪ್ರಕರಣವನ್ನು ಸಿಬಿಐಗೆ ಮತ್ತು ನ್ಯಾಯಾಂಗ ತನಿಖೆಗೆ ಒಪ್ಪಿಸಲು ರಾಯಚೂರು ಜಿಲ್ಲೆಯ ವಿವಿಧ ಪಕ್ಷಗಳು ಜಿಲ್ಲೆಯಾದ್ಯಂತ ದಿನಾಂಕ 13.3.94 ರಂದು "ಬಂದ್" ಕರೆಯ ಕೊಟ್ಟಿದ್ದರ ಹಿನ್ನೆಲೆಯಲ್ಲಿ ಹಟ್ಟಿಯಲ್ಲಿ ಶಾಲಾ-ಕಾಲೇಜುಗಳನ್ನು ಹೊರತುಪಡಿಸಿ ಯಶಸ್ವಿ ಬಂದ್ ಆಚರಿಸಲಾಯಿತು. ಮುಂಜಾನೆ 8-ರಿಂದ 4 ರವರೆಗೆ ಹೋಟೆಲ್ ಕಿರಾಣಿ ಅಂಗಡಿ, ಮುಂತಾದ ವರ್ತಕರ ಅಂಗಡಿಗಳು ಬಂದ್ ಆಗಿದ್ದವು. ಅವರು ಸಹ ಬೆಂಬಲ ಕೊಟ್ಟು ಭಾಗವಹಿಸಿದ್ದರು. ಆದರೆ ಹಟ್ಟಿಯ ಪಿ.ಎಸ್.ಐ. ಎನ್. ನಾಗರಾಜಪ್ಪ ಇವರು ಬಂದ್ ವಿಫಲ ಗೊಳಿಸಲು ಪ್ರಚೋದನೆ ನೀಡಿ ವರ್ತಕರು ಮತ್ತು ಬಂದ ಕಾರ್ಯಕರ್ತರ ಮಧ್ಯೆ ಘರ್ಷಣೆಗೆ ಇಳಿಸಿ ಪರಿಸ್ಥಿತಿಯನ್ನು ಉದ್ರೇಕಗೊಳಿಸಲು ಪ್ರಯತ್ನಿಸಿದರು. ಆದರೂ ಹಟ್ಟಿ ಗ್ರಾಮದ ಸಾರ್ವಜನಿಕರು ವರ್ತಕರು ವಿವಿಧ ಪಕ್ಷದ ಮತ್ತು ಸಂಘಟನೆಯ ನಾಯಕರು ಅವರ ಪ್ರಚೋದನೆಗೆ ಕಿವಿ ಕೊಡದೆ ಶರಣಪ್ಪನ ಅತ್ಯಾಚಾರವನ್ನು ಖಂಡಿಸಿ ಸಿಬಿಐಗೆ ಮತ್ತು ನ್ಯಾಯಾಂಗ ತನಿಖೆಗೆ ಒಪ್ಪಿಸಲು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದರು.

## ಸಿಂಧನೂರಿನಲ್ಲಿ ಯಶಸ್ವಿ ಬಂದ್

ಕುಷ್ಟಗಿ ತಾಲೂಕಿನ ಮದಲಗಟ್ಟಿ ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಶರಣಮ್ಮಳ ಮೇಲೆ ನಡೆದಿದೆಯೆನ್ನಲಾದ ಸಾಮೂಹಿಕ ಅತ್ಯಾಚಾರವನ್ನು ತೀವ್ರವಾಗಿ ಪ್ರತಿಭಟಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯವರು ರಾಯಚೂರು ಜಿಲ್ಲೆಯಾದ್ಯಂತ ನೀಡಿದ ಬಂದ್ ಕರೆಯ ಮೇರೆಗೆ ಸಿಂಧನೂರಿನಲ್ಲಿಯೂ ಇಂದು ಯಶಸ್ವಿಯಾಗಿ ಮತ್ತು ಶಾಂತಿಯುತವಾಗಿ ಬಂದ್ ಆಚರಿಸಲಾಯಿತು.

ಬೆಳಗಿನ 7 ಗಂಟೆಯ ಸುಮಾರಿಗೆ ಆಗಲೇ ನಗರದ ಬೀದಿ ಬೀದಿಯಲ್ಲಿ ತಂಡೋಪ ತಂಡವಾಗಿ ಸಿಪಿಐ(ಎಂ) ಕಾರ್ಯಕರ್ತರು ಅದೇ ತಾನೇ ತೆಗೆಯುತ್ತಿದ್ದ ಅಂಗಡಿಗಳ ಚಿಕ್ಕ ಹೋಟೆಲ್ಲುಗಳ ಸ್ಟೇಶನರಿಗಳ ಬೀಡಿ ಅಂಗಡಿಗಳ ಸಮೇತವಾಗಿ ಎಲ್ಲಾ ವ್ಯವಹಾರ ವಹಿವಾಟುಗಳನ್ನು ಬಂದ್ ಮಾಡಿಸಿದರು.

ಸಿಪಿಐ(ಎಂ) ಜಿಲ್ಲಾ ಮುಖಂಡ ಬಿ. ಲಿಂಗಪ್ಪ ತಾಲೂಕು ಕಾರ್ಯದರ್ಶಿ ಶರಬಣ್ಣ ನಾಗಲಾಪೂರ ಮತ್ತು ಸಿ.ಐ.ಟಿ.ಯು ಮುಖಂಡ ಶೇಷಾದ್ರಿ ಮತ್ತು ಡಿ.ವೈ. ಎಫ್.ಐ. ಮುಖಂಡರಾದ ಸುಬಾನ ಟೇಲರ ಅವರುಗಳು ಬಂದ್ ಚಳುವಳಿಯ ನೇತೃತ್ವವನ್ನು ವಹಿಸಿದ್ದರು.

ಯಮನೂರಪ್ಪ ಉರುಸು ಎಂಬ ಪ್ರಸಿದ್ಧ ಉರುಸು ಅಂದು ಇದು ಪಟ್ಟಣದ ತುಂಬಾ ಜನ ಇದ್ದರೂ ಬೆಳಗಿನಿಂದ ಮ 3 ಗಂಟೆಯವರಗೆ ಎಲ್ಲಾ ವಹಿವಾಟುಗಳ ಬಂದ್ ಆಗಿದ್ದು ಸೋಜಿಗ.

ಸಿಪಿಐ(ಎಂ) ಈ ಬಂದ್ ಕರೆಗೆ ಎಸ್. ಎಫ್.ಐ., ಸಿ.ಐ.ಟಿ.ಯು, ಡಿ.ವೈ.ಎಫ್.ಐ. ಮತ್ತು ಕೃಷಿಕೂಲಿಗಾರರ ಸಂಘಟನೆಗಳು ಬೆಂಬಲ ನೀಡಿದ್ದವು.

ತಮ್ಮ ಬಂದ್‌ಗೆ ಬೆಂಬಲ ನೀಡಿ ಚಳುವಳಿಯಲ್ಲಿ ಪಾಲ್ಗೊಂಡ ಮೇಲಿನ ಎಲ್ಲಾ ಸಂಘಟನೆಗಳಿಗೆ ಸಿಪಿಐ(ಎಂ) ತಾಲೂಕು ಕಾರ್ಯದರ್ಶಿಗಳಾದ ಶರಬಣ್ಣ ನಾಗಾಲಾಪುರ ಅಭಿನಂದನೆ ಸಲ್ಲಿಸಿದ್ದಾರೆ.

ವರದಿ : 'ರಾಯಚೂರು ಸುದ್ದಿ ಜಿಲಬ'

# ಯುವಜನ-ವಿದ್ಯಾರ್ಥಿಗಳಿಂದ ಮೈತ್ರಿ ಜ್ಯೋತಿ

ವಿದೇಶಿ ಸುಲಿಗೆಯ ವಿರುದ್ಧ, ದೇಶದ ಸ್ವಾತಂತ್ರ್ಯ ಕೋಮು ಸಾಮರಸ್ಯ ಸಮಾನತೆಗಾಗಿ ದಣಿವರಿಯದೆ ಹೋರಾಟ ನಡೆಸಿದ ಶಹೀದ್ ಭಗತ್‌ಸಿಂಗ್ ಹುತಾತ್ಮ ದಿನದಂದು ಮಾರ್ಚ್ 23 ರಂದು ಸಂಜೆ ಎಲ್ಲಾ ಜಿಲ್ಲಾ, ತಾಲ್ಲೂಕುಗಳಲ್ಲದೆ ಗ್ರಾಮಾಂತರ ಪ್ರದೇಶಗಳ 200 ಕ್ಕೂ ಹೆಚ್ಚು ಸ್ಥಳಗಳಲ್ಲಿ ಕರಾಳ ಕತ್ತಲೆಯನ್ನು ಹಿಮ್ಮೆಟ್ಟಿಸುವ ಬೆಳಕಿನ ಸಂಕೇತದ ಮೂಲಕ ಕೋಮು ಸೌಹಾರ್ದತೆ ಆರ್ಥಿಕ ಸಾರ್ವಭೌಮತ್ವದ ಉಳಿವಿಗೆ ಹೋರಾಡಲು ದೃಢ ಪ್ರತಿಜ್ಞೆ ಮಾಡಲಾಗುವುದು. ಈ ಕಾರ್ಯಕ್ರಮವನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಉದ್ಘಾಟಿಸಿದರು. ಕೋಮುವಾದ ಭಯೋತ್ಪಾದನೆ, ಹಾಗೂ ಯುವಜನ ವಿದ್ಯಾರ್ಥಿಗಳ ಪಾಲಿಗೆ ಆಕ್ರಮಣಕಾರಿ, ಜನವಿರೋಧಿಯಾಗಿರುವ ಕೇಂದ್ರ ಬಜೆಟಿನ ಶಿಫಾರಾಸ್ಸು ವಿರುದ್ಧ ಪ್ರಚಾರಾಂದೋಲನವಾಗಿ ಮುಂದುವರಿಯಲಿದೆ. ಬಹಿರಂಗ ಸಭೆಗಳು, ಬೀದಿಬದಿಯ ಸಭೆಗಳು, ವಿಚಾರ ಸಂಕಿರಣ ಸಾಹಿತ್ಯ ಮಾರಾಟ ಹಾಡೂ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾರ್ಚ್ 23ರಿಂದ 30 ರವರೆಗಿನ ಈ ಪ್ರಚಾರ ಸಪ್ತಾಹ ಒಳಗೊಳ್ಳಲಿದೆ.

ಎಪ್ರಿಲ್ 1 ರಂದು ಸಾರ್ವತ್ರಿಕ ಬಜೆಟ್ ಮತ್ತು ರೈಲ್ವೆ ಬಜೆಟ್ ವಿರೋಧಿಸಿ ರಾಜ್ಯದ ಪ್ರಮುಖ ಕೇಂದ್ರಗಳಾದ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ವಿಜಾಪುರ ತುಮಕೂರು, ಕೋಲಾರ ಚಿಕ್ಕ ಮಗಳೂರು ಜಿಲ್ಲೆಗಳಲ್ಲಿ ವಿದ್ಯಾರ್ಥಿ ಯುವಜನರಿಂದ ರೈಲು ತಡೆ ಚಳುವಳಿ ನಡೆಸಲಾಗುವುದು.

ಅಖಿಲ ಭಾರತ ಕರೆಯಂತೆ ಕರ್ನಾಟಕ ರಾಜ್ಯದಲ್ಲಿಯೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ) ಕರ್ನಾಟಕ ಪ್ರದೇಶ ಯುವಜನತಾ ದಳ ಮತ್ತು ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎ.ಐ.ಎಸ್.ಎಫ್) ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ದಲಿತ ವಿದ್ಯಾರ್ಥಿ ಒಕ್ಕೂಟ ಅಲ್ಲದೆ ಸಮಾನ ಮನಸ್ಕ ಇತರ ಪ್ರಗತಿ ಪರ ಸಂಘಟನೆಗಳನ್ನು ಒಳಗೊಂಡು ಆಂದೋಲನ ನಡೆಸಲಾಗುವುದು.

ಕೇಂದ್ರ ಸರ್ಕಾರ ಮಂಡಿಸಿರುವ ಸಿ.ಪಿ. ಲೇಪಿತ ಎರಡು ಬಜೆಟ್‌ಗಳು ಅತ್ಯಂತ ಅಪಾಯಕಾರಿಯಾಗಿದ್ದು ಉದ್ಯೋಗ, ಶಿಕ್ಷಣ ನೀಡಿಕೆಯ ಬಗ್ಗೆ ವಂಚಕ ಮೌನ ತಳೆದಿವೆ ಎಂದಿರುವ ಯುವಜನ ವಿದ್ಯಾರ್ಥಿ ನಾಯಕರು. ವಿದೇಶ ನಿರ್ದೇಶಿತ ಆರ್ಥಿಕ ನೀತಿಗಳು ಕೋಮುವಾದ, ಭಯೋತ್ಪಾದನೆ ಹಿಂಸಾಘಟನೆಗಳಿಗೂ ಸಂಬಂಧವಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ದೇಶಪ್ರೇಮಿಗಳು ದೇಶದ ಉಳಿವಿನ ಬಗ್ಗೆ ಚಿಂತಿಸಿ ಹೋರಾಟಕ್ಕೆ ಮುಂದಾಗಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

# ಕ್ರಿಕೆಟ್ ಲಾಠಿ ಪ್ರಹಾರ ಖಂಡನೆ

ಬೆಂಗಳೂರು : ಇಲ್ಲಿ ನಡೆದ ಒಂದು ದಿನದ ಅಂತರ್ರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟ ವೀಕ್ಷಿಸಲು ಬೇರೆ ರಾಜ್ಯಗಳಿಂದ ಹಾಗೂ ಬೆಂಗಳೂರು ನಗರ, ಕ[illegible] ರಾಜ್ಯದಿಂದ ಬಂದ ಕ್ರೀಡಾಭಿಮಾನಿಗಳು ಟಿಕೆಟ್ ತೋರಿಸಿದರೂ ಕೂಡ ಅ[illegible]ರನ್ನು ಒಳಗೆ ಬಿಡದೆ 'ಅವರ ಮೇ[illegible] ಲಾಠಿ ಚಾರ್ಜ್ ಮಾಡಿ ದೌರ್ಜನ್ಯ[illegible]ಗಿದ್ದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸೆಕ್ರೆಟಾರಿಯೇಟ್ ಬಲವಾಗಿ ಖಂಡಿಸಿ ದೌರ್ಜನ್ಯಕ್ಕೊಳಗಾದವರಿಗೆ ಸಹಾನುಭೂ[illegible] ವ್ಯಕ್ತಪಡಿಸಿದೆ.

ಅಧಿಕೃತ ಟಿಕೆಟುಗಳನ್ನು ಕಾಳಸಂತೆಯ[illegible] ಮಾರಲ್ಪಟ್ಟಿವೆಯಲ್ಲದೆ ನಕಲಿ ಟಿಕೇಟು[illegible] ಮಾರಟ ನಡೆದು ಜನರಿಗೆ ಅನ್ಯಾಯ[illegible]ಗಿದೆ. ಕ್ರಿಕೆಟ್ ಮಂಡಳಿಯ ಅಧಿಕಾರಿ[illegible] ಬೆಂಬಲದಿಂದಲೇ ಇದು ನಡೆದು ಅವರ[illegible] ಅಪಾರ ಹಣ ಸಂಪಾದಿಸಿ ಕ್ರೀಡಾಭಿಮಾ[illegible]ಗಳಿಗೆ ದ್ರೋಹ ಬಗೆದು ಕರ್ನಾಟಕಕ್ಕೆ [illegible] ಹೆಸರು ತಂದಿದ್ದಾರೆ.

ಕಲ್ಕತ್ತದಲ್ಲಿ ಇದೇ ರೀತಿ ಕ್ರಿಕೆಟ್ ಪಂದ್ಯಾಟ ನಡೆದಾಗ ಈ ರೀತಿಯ [illegible]ವಹಾರ ನಡೆಯಲು ಅವಕಾಶ ಕೊ[illegible]ಲಿಲ್ಲ. ಪಶ್ಚಿಮಬಂಗಾಳದ ಜ್ಯೋತಿಬ[illegible] ಸರಕಾರ ಈ ಇಡೀ ಘಟನೆಯ ಕುರಿ[illegible] ಸಂಪೂರ್ಣ ತನಿಖೆ ನಡೆಸಿ ತಪ್ಪಿತ[illegible] ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕೆಂದು ಕ್ರಿಕೆಟ್ ಪಂದ್ಯಾಟ ನೋಡಲು ಅವಕಾ[illegible]ಸಿಗದ ಟಿಕೆಟ್‌ಧಾರಿಗಳಿಗೆಲ್ಲ ಟಿಕೆಟಿನ ಹ[illegible]ವನ್ನು ಕ್ರಿಕೆಟ್ ಮಂಡಲಿ ವಾಪಸ್ ಕೊ[illegible]ಬೇಕೆಂದೂ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ಎಸ್.ಕೆ. ಉ[illegible]ಧ್ಯಾಯ ಆಗ್ರಹಪಡಿಸಿದ್ದಾರೆ.

# ರಷ್ಯಾದಲ್ಲಿ ಜನತೆ ಹಾಗೂ ಸರ್ವಾಧಿಕಾರಿ ಯೆಲ್ಟ್‌ಸಿನ್ನರ ನಡುವಣ ಸಂಘರ್ಷದಲ್ಲಿ ಹೊಸಘಟ್ಟ

**-- ಶರತ್‌ಚಂದ್ರ**

- ರಶ್ಯದ ಜನತಾ ಪ್ರತಿನಿಧಿ ಕಾಂಗ್ರೆಸ್‌ನಲ್ಲಿ ಯೆಲ್ಟ್‌ಸಿನ್‌ಗೆ ಭಾರೀ ಸೋಲು-ಅಧ್ಯಕ್ಷ ವಿಶೇಷ ಅಧಿಕಾರಿಗಳಿಗೆ ಕತ್ತರಿ-ಜನಮತ ಸಂಗ್ರಹದ ಯೆಲ್ಟ್‌ಸಿನ್‌ರ ಸಲಹೆ ತಿರಸ್ಕೃತ
- ಉತರ ಕೋರಿಯಾ ಅಣ್ವಸ್ತ್ರ ಪ್ರಸಾರ ನಿಷೇಧ ಒಪ್ಪಂದಿಂದ ಹೊರಕ್ಕೆ. ಅಂತ ರಾಷ್ಟ್ರೀಯ ಅಣುಶಕ್ತಿ ಆಯೋಗದ ತಂಡ ಅಮೇರಿಕಾ ಮತ್ತು ದ. ಕೋರಿಯಾ ಪರವಾಗಿ ಬೇಹುಗಾರಿಕೆ ನಡೆಸಿದ ಆರೋಪ.

ರಶ್ಯದ ಜನತಾ ಪ್ರತಿನಿಧಿಗಳ ಕಾಂಗ್ರೆಸ್ - ಅಲ್ಲಿನ ಬೃಹತ್ ಪಾರ್ಲಿಮೆಂಟಿನ ವಿಶೇಷ ತುರ್ತು ಅಧಿವೇಶನ ಅಧ್ಯಕ್ಷ ಯೆಲ್ಟ್‌ಸಿನ್ನರ ಎಲ್ಲಾ ಸಲಹೆಗಳನ್ನು ತಿರಸ್ಕರಿಸಿದೆ. ಇದರಿಂದ ಯೆಲ್ಟ್‌ಸಿನ್ನರ ರಾಜಕೀಯ ಭವಿಷ್ಯ ಮತ್ತು ರಶ್ಯವನ್ನು ಬಂಡವಾಳಶಾಹಿಯತ್ತ ಒಯ್ಯುವ ಸನ್ನಾಹಕ್ಕೆ ಕಡಿವಾಣ ಹಾಕಿದಂತಾಗಿದೆ. ಅವರಿಗೆ ಭಾರಿ ಸೋಲು ಉಂಟಾಗಿದೆ. ಏಪ್ರಿಲ್ 1 ರಂದು ಪಾರ್ಲಿಮೆಂಟು ಮತ್ತು ಅಧ್ಯಕ್ಷರಲ್ಲಿ ಯಾರಿಗೆ ನಿಜವಾದ ಅಧಿಕಾರ ಇರಬೇಕು, ಹೊಸ ಸಂವಿಧಾನ ರಚಿಸುವ ಬಗ್ಗೆ ಹಾಗೂ ಆರ್ಥಿಕ ಸುಧಾರಣೆಗಳನ್ನು ಮುಂದುವರೆಸುವ ಬಗ್ಗೆ ಜನಮತಸಂಗ್ರಹ ನಡೆಸುವ ಯೆಲ್ಟ್‌ಸಿನ್ನರ ಸಲಹೆಯನ್ನು ಕಾಂಗ್ರೆಸ್ ಭಾರಿ ಬಹುಮತದಿಂದ ತಿರಸ್ಕರಿಸಿತು.

ಕಾಂಗ್ರೆಸ್ ಭಾರಿ ಬಹುಮತದಿಂದ ಮಂಜೂರು ಮಾಡಿದ ನಿರ್ಣಯ ಯೆಲ್ಟ್‌ಸಿನ್ನರ ಆರ್ಥಿಕ ಧೋರಣೆಗಳು ರಶ್ಯದ ಬಹುಪಾಲು ಜನತೆಯ ಜೀವನದ ಮೇಲೆ ಗದಾ ಪ್ರಹಾರ ಮಾಡಿವೆ. ಯೆಲ್ಟ್‌ಸಿನ್ ಸಂವಿಧಾನವನ್ನು ಉಲ್ಲಂಘಿಸಿ ಅಧಿಕಾರ ಚಲಾಯಿಸುತ್ತಿದ್ದಾರೆ. ಎಂದು ನಿರ್ಣಯ ಟೀಕಿಸಿದೆ. ಡಿಸೆಂಬರ್‌ನಲ್ಲಿ ಪಾರ್ಲಿಮೆಂಟು ಮತ್ತು ಅಧ್ಯಕ್ಷರ ಅಧಿಕಾರಿಗಳ ನಡುವೆ ಸಾಮರಸ್ಯ ತರುವ ಒಪ್ಪಂದವನ್ನು ಮತದಾನದ ಮೂಲಕ ರದ್ದು ಮಾಡಲಾಯಿತು. ಅಧ್ಯಕ್ಷರು ಚುನಾಯಿತ ಸದನಗಳನ್ನು ರದ್ದು ಮಾಡುವ ಅಥವಾ ಅಮಾನತ್ತಿನಲ್ಲಿಡುವ ಪ್ರಯತ್ನ ಮಾಡಿದರೆ ಅಧ್ಯಕ್ಷರ ಎಲ್ಲಾ ಅಧಿಕಾರಗಳನ್ನು ಕಿತ್ತು ಕೊಳ್ಳುವ ಸಂವಿಧಾನದ ಕಲಮು 121-6 ನನ್ನು ಕಿತ್ತು ಹಾಕಬೇಕೆಂಬ ಯೆಲ್ಟ್‌ಸಿನ್ನರ ಸಲಹೆಯನ್ನು ಕಾಂಗ್ರೆಸ್ ತಿರಸ್ಕರಿಸಿತು.

ಅಧ್ಯಕ್ಷರ ಸಂಪುಟ ರಚನೆ ಮಾಡುವ ಅಧಿಕಾರ ಕಾಂಗ್ರೆಸ್‌ನ ಅನುಮೋದನೆಗೆ ಅಧೀನ ಎಂದು ಒಂದನೇ ಕಾಂಗ್ರೆಸ್ ಸ್ಪಷ್ಟಪಡಿಸಿತ್ತು. ಈ ಅಧಿವೇಶನದ ಹಲವಾರು ನಿರ್ಣಯಗಳ ಮೂಲಕ ರಶ್ಯಾವನ್ನು ಪಾಶ್ಚಿಮಾತ್ಯ ದೇಶಗಳ ಗುಲಾಮನನ್ನಾಗಿಸುವ, ಸಾಲದ ಕೂಪದಲ್ಲಿ ಸಿಕ್ಕಿಸುವ ಆರ್ಥಿಕ ಧೋರಣೆಗಳನ್ನು ಪಾರ್ಲಿಮೆಂಟಿನ ಅನುಮತಿಯಿಲ್ಲದೆ ವಿಶೇಷ ಅಧಿಕಾರಿಗಳ ಮೂಲಕ ಜಾರಿಮಾಡುವ ಸಾಧ್ಯತೆಗೆ ತೀವ್ರ ಧಕ್ಕೆ ಉಂಟಾಗಿದೆ. ಆ ಮೂಲಕ ಬಂಡವಾಳಶಾಹಿಯತ್ತ ಓಂದಿರುಗುವ ನೀತಿಗೆ ತೀವ್ರ ಹಿಂಜರಿತ ಉಂಟಾಗಿದೆ. ಒಂದು ಒಳ್ಳೆಯ ಬೆಳವಣಿಗೆ ರಶ್ಯದ ಜನತೆಯ ದೃಷ್ಟಿಯಿಂದ ಎಂದು ಬೇರೆ ಹೇಳಬೇಕಾಗಿಲ್ಲ.

ಯೆಲ್ಟ್‌ಸಿನ್ ತಮ್ಮ ಪ್ರಚಾರದಲ್ಲಿ ಕಾಂಗ್ರೆಸ್ ಮತ್ತು ಅಧ್ಯಕ್ಷರ ನಡುವಣ ತಿಕ್ಕಾಟ ಪಾಶ್ಚಿಮಾತ್ಯ ಸಹಾಯಕ್ಕೆ ಕುತ್ತು ತಂದಿದೆ ಎಂದಿದ್ದರು. ಅಂತಹ ಸಹಾಯ ರಶ್ಯಕ್ಕೆ ಕುತ್ತು ಎಂದು ಹಲವಾರು ಕಾಂಗ್ರೆಸ್ ಸದಸ್ಯರು ತಿರುಗುಬಾಣ ಬಿಟ್ಟಿದ್ದಾರೆ. ಸಂವಿಧಾನಾತ್ಮಕವಾಗಿ ಸರ್ವಾಧಿಕಾರ ಚಲಾಯಿಸಲು ವಿಫಲರಾದ ಯೆಲ್ಟ್‌ಸಿನ್ನರ 'ಇತರ ವಿಧಾನಗಳಿಂದ' ಇದನ್ನು ಚಲಾಯಿಸುವುದಾಗಿ ಬೆದರಿಸಿದ್ದಾರೆ. ತುರ್ತು ಪರಿಸ್ಥಿತಿ ಘೋಷಣೆ, ಪಾರ್ಲಿಮೆಂಟಿನ ರದ್ದತಿ ಇಂತಹ ಕ್ರಮಗಳು ಎಂದು ಹೇಳಲಾಗಿದೆ.

ಯೆಲ್ಟ್‌ಸಿನ್ನರ ಅಧಿಕಾರದ ಸೆಲೆ ಎಂಬುದರ ಬಗ್ಗೆ ಯಾರಿಗಾದರೂ ಅನುಮಾನವಿದ್ದರೆ ಅಮೇರಿಕದ ಅಧ್ಯಕ್ಷ ಕ್ಲಿಂಟನ್ ಸ್ಪಷ್ಟಪಡಿಸಿದ್ದಾರೆ. ಯೆಲ್ಟ್‌ಸಿನ್ ಮತ್ತು ಪಾರ್ಲಿಮೆಂಟು ತಿಕ್ಕಾಟದಲ್ಲಿ ಯೆಲ್ಟ್‌ಸಿನ್ನರಿಗೆ ಆರ್ಥಿಕ, ರಾಜಕೀಯ, ಮತ್ತು ಅಗತ್ಯ ಬಿದ್ದರೆ ಮಿಲಿಟರಿ ಸಹಾಯವನ್ನು ಪಾಶ್ಚಿಮಾತ್ಯ ದೇಶಗಳು ನೀಡುವುದಾಗಿ ಘೋಷಿಸಿದ್ದಾರೆ. ಅವರ ಪ್ರಕಾರ ರಶ್ಯಾವಲ್ಲಿ 'ಪ್ರಜಾಪ್ರಭುತ್ವ' ಉಳಿಸಿಕೊಳ್ಳಲು ಇದು ಅಗತ್ಯವಂತೆ, ಜನರೇ ಚುನಾಯಿಸಿದ ಪಾರ್ಲಿಮೆಂಟಿಗೆ ಅವರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಿಮ್ಮತ್ತು ಇಲ್ಲ! ಅವರ ಬಾಲಬುಡುಕ ಸರ್ವಾಧಿಕಾರಿ ಯೆಲ್ಟ್‌ಸಿನ್ ಆತ ನಿಜವಾಗಿ ಜನರಿಂದ ಚುನಾಯಿತ ವ್ಯಕ್ತಿ ಅಂತೆ ಬೂರ್ಜ್ವಾ ಪ್ರಜಾಪ್ರಭುತ್ವ ವರ್ಗಗುಣದ ಬಗ್ಗೆ ಏನಾದರೂ ಭ್ರಮೆ ಉಳಿದಿದ್ದರೆ ಇನ್ನೇನಾದರೂ ಉದಾಹರಣೆ ಬೇಕೆ?

## ಪಕ್ಷಪಾತದ ವಿರುದ್ಧ ಉತ್ತರ ಕೋರಿಯಾ ಪ್ರತಿಭಟನೆ

ಆಸ್ಟ್ರಿಯಾದ ವಿಯೆನ್ನಾದಲ್ಲಿರುವ ಸ್ವತಂತ್ರ ಸಂಸ್ಥೆ ಎಂದು ಹೇಳಲಾದ ಅಂತರಾಷ್ಟ್ರೀಯ ಅಣು ಶಕ್ತಿ ಎಜನ್ಸಿ (ಐ.ಎ.ಇ.ಎ) ಉತ್ತರ ಕೋರಿಯಾದ ಅಣು ಪರೀಕ್ಷೆಯಲ್ಲಿ ಅತ್ಯಂತ ಪಕ್ಷಪಾತದಿಂದ ಕೂಡಿದ ರೀತಿಯಲ್ಲಿ ವರ್ತಿಸಿದೆ. ಉತ್ತರಕೊರಿಯಾ ಅಣು ಶಕ್ತಿ ಸಂಸ್ಥೆಗಳ ಪರಿಕ್ಷೆಯಲ್ಲಿ ಪೂರ್ಣ ಸಹಕಾರ ತೋರಿದ್ದರೂ, ಐ.ಎ.ಇ.ಎ ಅಮೇರಿಕನ್ ಏಜಂಟಿನಂತೆ ವರ್ತಿಸುತ್ತಿದೆ. ಎಲ್ಲಾ ನೈತಿಕ, ನಿಯಮಾವಳಿಗಳನ್ನೂ ಗಾಳಿಗೆ ತೂರಿ, ಐ.ಎ.ಇ.ಎ. ತಂಡ ಪರೀಕ್ಷಣೆಯ ಸಮಯದಲ್ಲಿ ಕಲೆಹಾಕಿದ ಮಾಹಿತಿಯನ್ನು ಅಮೇರಿಕ ಮತ್ತು ದ.ಕೋರಿಯಾ ಸರಕಾರಗಳಿಗೆ ರವಾನಿಸಿದೆ. ಇಂತಹ ವರ್ತನೆಗೆ ಪ್ರತಿಭಟನೆಯಾಗಿ ಉತ್ತರ ಕೋರಿಯಾ ಅಣ್ವಸ್ತ್ರ ಪ್ರಸಾರ ನಿಷೇಧ ಒಪ್ಪಂದಕ್ಕೆ ತಾನು ನೀಡಿದ ಒಪ್ಪಿಗೆಯನ್ನು ಹಿಂತೆಗೆದುಕೊಂಡಿದೆ.

ಅಣ್ವಸ್ತ್ರ ಪ್ರಸಾರ ನಿಷೇಧ ಒಪ್ಪಂದ, ಅಣ್ವಸ್ತ್ರ ಉಳ್ಳ ದೇಶಗಳಿಗೆ ಒಲವು ತೋರುವ ಪಕ್ಷಪಾತ ಕೂಡಿದ ಒಪ್ಪಂದವಾಗಿದ್ದರೂ, ಅಣುಶಕ್ತಿಯ ಶಾಂತಿ ಕಾಲೀನ ಪ್ರಯೋಜನ ಪಡೆಯುವ ಉದ್ದೇಶದಿಂದ ಹಾಗೂ ಎರಡು ಕೋರಿಯಾಗಳ ನಡುವೆ ಘರ್ಷಣೆ ಕಡಿಮೆ ಮಾಡುವ ಉದ್ದೇಶದಿಂದ ಉತ್ತರ ಕೋರಿಯಾ ಅದಕ್ಕೆ ಸಹಿ ಹಾಕಿತ್ತು. ಅದರ ಪ್ರಕಾರ, ಉತ್ತರಕೋರಿಯಾ ತನ್ನ ಅಣುಶಕ್ತಿಗೆ ಸಂಬಂಧಪಟ್ಟ ಸ್ಥಾವರಗಳ ವಿವರಗಳನ್ನು ಐ.ಎ.ಇ.ಎ. ಗೆ ಸಲ್ಲಿಸಿತ್ತು. ಈ ಬಗ್ಗೆ ಉತ್ತಕೋರಿಯಾಕ್ಕೆ ಭೇಟಿ ನೀಡಿದ ಐ.ಎ.ಇ.ಎ. ತಂಡ ಮೊದಮೊದಲು ಈ ಬಗ್ಗೆ ತನ್ನ ಸಮಾಧಾನ ವ್ಯಕ್ತಪಡಿಸಿತ್ತು. ಆದರೆ ಬರಬರುತ್ತಾ ತನಗೆ ಕೊಟ್ಟ ವಿವರ, ಮತ್ತು ಪರೀಕ್ಷಣಾ ವರದಿಗಳ ನಡುವೆ 'ವ್ಯತ್ಯಾಸ'ಗಳ ಬಗ್ಗೆ ಹೇಳತೊಡಗಿತ್ತು. ಈ ಬಗ್ಗೆ ಉತ್ತರ ಕೋರಿಯಾ ಸರಕಾರ ಸಮಜಾಯಿಷಿ ಕೊಟ್ಟರೂ, ತನಗೆ ಕೊಟ್ಟ ಪಟ್ಟಿಯಲ್ಲಿ ಎರಡು ಸ್ಥಾವರಗಳು ಸೇರಿಲ್ಲ ಎಂಬ ಮೊಂಡುವಾದ ಹೂಡಲಾರಂಭಿಸಿತು. ಇದರಲ್ಲಿ ಒಂದು ಬಳಕೆ ವಸ್ತುಗಳ ಉತ್ಪಾದನಾ ಕೇಂದ್ರ, ಇನ್ನೊಂದು ಅಣ್ವಸ್ತ್ರವಲ್ಲದ ಸಾಂಪ್ರದಾಯಿಕ ಮಿಲಿಟರಿ ಸ್ಥಾವರ ಎಂಬ ಸರ್ಕಾರದ ಸಮಜಾಯಿಷಿಯನ್ನು ನಂಬಲು ತಂಡ ತಯಾರಿರಲಿಲ್ಲ. ಸರಕಾರ ನೀಡಿದ ಪಟ್ಟಿಯಲ್ಲಿಲ್ಲದ ಸ್ಥಳಗಳಿಗೆ ಭೇಟಿ ನೀಡಿ ತಂಡದ ಕೆಲವು ಸದಸ್ಯರು ನಿಯಮಾವಳಿಗಳಿಗೆ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗಿದ್ದು ಕಂಡು ಬಂತು. ಅದರಲ್ಲಿ ಕೆಲವರು ಅಮೇರಿಕನ್ ಬೇಹುಗಾರಿಕೆ ಒದಗಿಸಿದ ಮಾಹಿತಿ ಪರೀಕ್ಷಣೆ ಮಾಡುತ್ತಿರುವುದಾಗಿ ಒಪ್ಪಿಕೊಂಡರು. ಅಲ್ಲದೆ ಐ.ಎ.ಇ.ಎ. ತಂಡ ಕಳಿಸಿದ ಮಾಹಿತಿ ಕೆಲವೇ ದಿನಗಳಲ್ಲಿ ದಕ್ಷಿಣ ಕೋರಿಯಾ ಮತ್ತು ಅಮೇರಿಕನ್ ಪತ್ರಿಕೆಗಳಲ್ಲಿ ಎಲ್ಲಾ ವಿವರಗಳೊಡನೆ ಅಚ್ಚಾಗುವುದು ಐ.ಎ.ಇ.ಎ. ತಂಡದ ಪೊಳ್ಳನ್ನು ಪೂರ್ತಿಯಾಗಿ ಬಯಲು ಮಾಡಿದೆ. ಇದಕ್ಕೆ ಪ್ರತಿಭಟನೆಯಾಗಿ ಉತ್ತರ ಕೋರಿಯಾ ಒಪ್ಪಂದಕ್ಕೆ ಅನುಮತಿ ವಾಪಸು ಪಡೆಯಲು ನಿರ್ಧರಿಸಿದೆ.

## ಅಫ್‌ಘಾನಿಸ್ತಾನದಲ್ಲಿ ಒಪ್ಪಂದ-ಪುನಃ ಕಾದಾಟ

ಪಾಕಿಸ್ತಾನದ ಪ್ರಧಾನಿ, ಅಧ್ಯಕ್ಷರ ವಿಶೇಷ ಪ್ರಯತ್ನಗಳಿಂದ ಅಫ್‌ಘಾನಿಸ್ತಾನದಲ್ಲಿ ಸರ್ಕಾರ ಮತ್ತು ಪ್ರಮುಖ ವಿರೋಧಿ ಮುಜಾಹಿದ್ ಗುಂಪುಗಳ ನಡುವೆ ಒಪ್ಪಂದ, ತಾತ್ಕಾಲಿಕ ಕದನ ವಿರಾಮ ಏರ್ಪಟ್ಟಿದೆ.

ಪಾಕಿಸ್ತಾನ, ಸೌದಿ ಅರೇಬಿಯಾ, ಇರಾನ್‌ಗಳ ಮಧ್ಯಸ್ಥಿಕೆಯಿಂದಾಗಿ ಆದ ಈ ಒಪ್ಪಂದದ ಪ್ರಕಾರ ಪ್ರಮುಖ ವಿರೋಧಿ ಗೆರಿಲ್ಲಾ ಗುಂಪು ಹೆಕಮತ್‌ಯಾರ್ ಪ್ರಧಾನಿಯಾಗುತ್ತಾರೆ ಅವರು ಅಧ್ಯಕ್ಷ ಮತ್ತು ಇತರ ಮುಜಾಹಿದ್ ಗುಂಪುಗಳ ಜತೆ ಚರ್ಚಿಸಿ ಮಂತ್ರಿ ಮಂಡಲ ರಚಿಸುತ್ತಾರೆ.

ಆದರೆ ಈ ಒಪ್ಪಂದ ಜಾರಿಗೆ ಬರುವ ಬಗ್ಗೆ ತೀವ್ರ ಅನುಮಾನಗಳು ಮರುದಿನವೇ ಖಚಿತವಾಯಿತು. ಕಾಬೂಲ್‌ನಲ್ಲಿ ಪುನಃ ಷೆಲ್‌ದಾಳಿಗಳ ಶಬ್ದ ಕೇಳಿಬಂತು ಇದಕ್ಕೆ ಕಾರಣ ರಕ್ಷಣಾ ಮಂತ್ರಿ, ಮತ್ತು ಜನರಲ್ ಅಬ್ದುಲ್ ರಶೀದ್ ದೊಸ್ತುಂರ ಉತ್ತರ ಉಜ್‌ಬೇಕ ಗುಂಪುಗಳು, ಇರಾನ್ ಬೆಂಬಲಿತ ಶಿಯಾ ಗುಂಪುಗಳು ಈ ಒಪ್ಪಂದದಲ್ಲಿ ಭಾಗವಹಿಸಿಲ್ಲ.

## ಚೀನಾ ವಿರುದ್ಧ ಛೀಮಾರಿ ನಿರ್ಣಯಕ್ಕೆ ಸೋಲು

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದಲ್ಲಿ ಚೀನಾದಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿ ಬಗ್ಗೆ ಛೀಮಾರಿ ಹಾಕುವ ನಿರ್ಣಯದ ಬಗೆಗಿನ ಮತದಾನದಲ್ಲಿ ಆ ನಿರ್ಣಯಕ್ಕೆ ಸೋಲಾಗಿದೆ. ಅಮೇರಿಕ ಮತ್ತು ಪಶ್ಚಿಮ ಯುರೋಪಿನ ದೇಶಗಳು ಈ ನಿರ್ಣಯವನ್ನು ಆಯೋಗದಲ್ಲಿ ಮಂಡಿಸಿದ್ದವು. ಆದರೆ ಮತದಾನವಾದಾಗ 22-17 ಮತಗಳಿಂದ ಆ ನಿರ್ಣಯ ತಿರಸ್ಕೃತವಾಯಿತು. 12 ದೇಶಗಳು, ಮತದಾನದಲ್ಲಿ ಭಾಗವಹಿಸಲಿಲ್ಲ 2 ದೇಶಗಳು ಸಭೆಯಲ್ಲಿ ಭಾಗವಹಿಸಲಿಲ್ಲ. ಪಾಕಿಸ್ತಾನ, ಕ್ಯೂಬಾ, ನೈಜಿರಿಯಾ, ಬಾಂಗ್ಲಾದೇಶ, ಸಿರಿಯಾ, ಇರಾನ್, ಮಲೇಶ್ಯಾ ಮತ್ತು ಸೂಡಾನ್ ಚೀನಾದ ಪರವಾಗಿ ನಿರ್ಣಯದ ವಿರುದ್ಧ ಬಲವಾದ ಪ್ರಚಾರ ಮಾಡಿದವು.

## ಆಸ್ಟ್ರೇಲಿಯಾ ಲೇಬರ್ ಪುನರಾಯ್ಕೆ

ಆಸ್ಟ್ರೇಲಿಯಾ ಚುನಾವಣೆಯಲ್ಲಿ ಸತತ 5 ನೇ ಬಾರಿ ಲೇಬರ್ ಪಕ್ಷ ಪುನರಾಯ್ಕೆಗೊಂಡಿದೆ. ಲಿಬರಲ್-ರಾಷ್ಟ್ರೀಯ ಪಕ್ಷಗಳ ಒಕ್ಕೂಟ ಚುನಾವಣೆಗೆ ಮುನ್ನ ನಡೆಸುವ ಅಭಿಪ್ರಾಯ ಸಂಗ್ರಹದಲ್ಲಿ ಮುಂದಿದ್ದರೂ, ಚುನಾವಣೆ ಫಲಿತಾಂಶ ಲೇಬರ್ ಪರವಾಗಿ ಹೋಗಿದೆ.

# ಕೇಂದ್ರ ಸರಕಾರಕ್ಕೆ ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಸಮ್ಮೇಳನದ ಆಗ್ರಹ

ಸರಕಾರದ ಆಡಳಿತಾತ್ಮಕ ಮೇಲ್ದರ್ಜೆಯ ಹುದ್ದೆಗಳಿಗೆ (ಯು.ಪಿ.ಎಸ್.ಸಿ ಮತ್ತು ಕೆ.ಪಿ. ಎಸ್.ಸಿ.) ನಡೆಸುವ ಪರಿಕ್ಷೆಗಳನ್ನು ಆಯಾ ಜಿಲ್ಲೆಗಳ ಕೇಂದ್ರದಲ್ಲೇ ನಡೆಸಬೇಕು. ಪ್ರಸ್ತುತ ಬೆಂಗಳೂರು, ಮೈಸೂರು, ಧಾರವಾಡಗಳಲ್ಲಿ ಪರೀಕ್ಷಾ ಕೇಂದ್ರಗಳಿದ್ದು ರಾಜ್ಯದ ಯುವಜನತೆಗೆ ಬಹುದೂರದಲ್ಲಿರುವ ಈ ಕೇಂದ್ರಗಳಿಗೆ ಪರಿಕ್ಷೆಗಾಗಿ ಭಾಗವಹಿಸುವುದು ಕಷ್ಟಸಾಧ್ಯ. ಅದಲ್ಲದೆ ಬಡ ಪ್ರತಿಭಾವಂತ ವಿದ್ಯಾವಂತ ಅಭ್ಯರ್ಥಿಗೆ ಈ ಪರಿಕ್ಷೆಗಾಗಿ ಅಲೆದಾಡುವುದು ಆರ್ಥಿಕವಾಗಿಯೂ ಅಸಾಧ್ಯವಾಗಿದೆ. ಆದುದರಿಂದ ಆಡಳಿತಾತ್ಮಕ ಮೇಲ್ದರ್ಜೆಯ ಹುದ್ದೆಗಳಿಗೆ ಆಯಾಯ ಜಿಲ್ಲಾ ಕೇಂದ್ರಲ್ಲೇ ಪರೀಕ್ಷೆ ನಡೆಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ದ.ಕ. ಜಿಲ್ಲಾ 5 ನೇ ಸಮ್ಮೇಳನವು ಅಂಗೀಕರಿಸಿತು.

ಜಿಲ್ಲೆಯ ಅಭಿವೃದ್ಧಿ ಯೋಜನೆಗಳಾದ ಮಂಗಳೂರು ತೈಲಗಾರ, ನಂದಿಕೂರು ಉಷ್ಣ ವಿದ್ಯುತ್‌ಸ್ಥಾವರ, ಕೊಂಕಣ ರೈಲ್ವೆ ಯೋಜನೆಯನ್ನು ಕೂಡಲೇ ಪ್ರಾರಂಭಿಸಿ ವಿದ್ಯಾವಂತ ನಿರುದ್ಯೋಗಿ ಯುವಜನತೆಗೆ ಉದ್ಯೋಗ ಒದಗಿಸಿ ರಾಜ್ಯದ ಪ್ರಮುಖ ಕಾರ್ಖಾನೆ ಎಂ.ಸಿ.ಎಫ್.ಅನ್ನು ಸರಕಾರ ಖಾಸಗಿ ವ್ಯಕ್ತಿ ಯು.ಬಿ. ಮಲ್ಯರಿಗೆ ಕೊಟ್ಟು, ಈಗ ಮುಚ್ಚುಗಡೆಗೆ ಕಾರಣವಾಗಿದ್ದು, ಖಾಸಗೀ ವ್ಯಕ್ತಿಗಳ ಕೈಯಿಂದ ಆ ಕಾರ್ಖಾನೆಯನ್ನು ಮುಕ್ತಗೊಳಿಸಿ ಸಾರ್ವಜನಿಕ ಉದ್ದಿಮೆಯಾಗಿ ಬೆಳೆಸಿ ಯುವಜನತೆ ನಿರುದ್ಯೋಗದ ಬವಣೆಗೆ ಸಿಗದಂತೆ ಮಾಡಬೇಕು ಸರಕಾರ ಕೂಡಲೇ ಕ್ರಮವಹಿಸಬೇಕೆಂಬ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿತು.

ಭಾರತದ ಸಂಸ್ಕೃತಿ 'ಜಾತ್ಯಾತೀತ' ಸಂಸ್ಕೃತಿಯಾಗಿದ್ದು, ಈ ಸಂಸ್ಕೃತಿಗೆ ಹೊಡೆತ ನೀಡುವ ಕೋಮುವಾದಿಗಳ ವಿರುದ್ಧ ಸೈದ್ಧಾಂತಿಕವಾಗಿ ಅವಿಶ್ರಾಂತವಾಗಿ ಹೋರಾಡುವುದು ಹಾಗೂ ದೇಶದ ಏಕತೆ-ಸಮಗ್ರತೆಯನ್ನು ಎತ್ತಿ ಹಿಡಿಯುತ್ತಾ ಕೋಮು ಸೌಹಾರ್ದತೆಯನ್ನು ರಕ್ಷಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

ಜಿಲ್ಲೆಯ ಸರಕಾರಿ ಆಸ್ಪತ್ರೆಗಳಾದ ವೆನ್‌ಲಾಕ್ ಮತ್ತು ಲೇಡಿಗೋಶನ್ ಆಸ್ಪತ್ರೆಗಳು ಅವ್ಯವಸ್ಥೆಯ ತಾಣವಾಗಿದ್ದು, ಡಿ.ವೈ.ಎಫ್.ಐ. ಈ ಬಗ್ಗೆ ಹಲವಾರು ಬಾರಿ ಸರಕಾರ ಮತ್ತು ಸಂಬಂಧಪಟ್ಟವರನ್ನು ಒತ್ತಾಯಿಸುತ್ತಾ ಬಂದಿದ್ದರೂ ಕಿವಿ ಕೊಡದಿರುವುದನ್ನು ತೀವ್ರವಾಗಿ ಖಂಡಿಸಿದ ಈ ಸಮ್ಮೇಳನವು ಆಸ್ಪತ್ರೆತಯ ಅವ್ಯವಸ್ಥೆಯ ಪರಿಹಾರಕ್ಕಾಗಿ ಅವಿಶ್ರಾಂತ ಹೋರಾಡುವ ನಿರ್ಣಯವನ್ನು ಅಂಗೀಕರಿಸಿತು.

## ಜನವಿರೋಧಿ ಬಜೆಟುಗಳು

ಜನ ವಿರೋಧಿ ಕೇಂದ್ರ ಹಾಗೂ ರಾಜ್ಯ ಸರಕಾರದ ಬಜೆಟ್‌ನ್ನು ತೀವ್ರವಾಗಿ ಖಂಡಿಸಿ ಸಮ್ಮೇಳನ ಬಜೆಟ್‌ನ್ನು ಪ್ರತಿಭಟಿಸಲು ಕರೆ ನೀಡಿದೆ.

## ಹೊಸ ಜಿಲ್ಲಾಧ್ಯಕ್ಷ

ಡಿ.ವೈ.ಎಫ್.ಐ ದ.ಕ. ಜಿಲ್ಲಾ ಸಮಿತಿಯ ನೂತನ ಅಧ್ಯಕ್ಷರಾಗಿ ಕೆ. ಯಾದವ ಶೆಟ್ಟಿಯವರನ್ನು ಆರಿಸಲಾಗಿದೆ. ಈ ಆಯ್ಕೆಯನ್ನು 28,2,1993ರಂದು ಮಂಗಳೂರಿನಲ್ಲಿ ನಡೆದ ಡಿ.ವೈ.ಎಫ್.ಐ. ದ.ಕ. ಜಿಲ್ಲಾ 5 ನೇ ಸಮ್ಮೇಳನದಲ್ಲಿ ಮಾಡಲಾಯಿತು. ಅದಲ್ಲದೆ, ಮಹಾಲಿಂಗೇಶ್ವರ ಭಟ್, ಸ್ವಾದುವಾದಿ (ಬೆಳ್ತಂಗಡಿ), ನರಸಿಂಹ.ಎಚ್. (ಕುಂದಾಪುರ) ಉಪಾಧ್ಯಕ್ಷರಾಗಿ, ವಸಂತ ಆಚಾರಿ (ಗುರುಪುರ) ಕಾರ್ಯದರ್ಶಿಯಾಗಿ, ಉದಯಕುಮಾರ್ (ಬಂಟ್ವಾಳ), ಬಾಬು ಪಿಲಾರು (ಉಳ್ಳಾಲ ವಲಯ) ಸಹ ಕಾರ್ಯದರ್ಶಿಗಳಾಗಿ, ಕೃಷ್ಣಪ್ಪ ಕೊಂಚಾಡಿ (ಮಂಗಳೂರು) ಖಜಾಂಚಿಯಾಗಿ ಆಯ್ಕೆಗೊಂಡರು.

## ಕೋಮುವಾದಿಗಳಿಗೆ ಬೀಡಿ ಮಾಲಿಕರ ಬೆಂಬಲ

**-- ಕೆ.ಮೂಸಬ್ಬ**

**ಮಂಗಳೂರು :** ಗುರುಪುರ-ಸುರತ್ಕಲ್ ಪ್ರದೇಶ ಬೀಡಿ ಲೇಬರ್ ಯೂನಿಯನ್‌ನ 10 ನೇ ವಾರ್ಷಿಕ ಮಹಾಸಭೆಯು, 28-2-93 ರಂದು ಕುಂದಾವರ ಮಂಡಲ ಪಂಚಾಯತ್ ಸಭಾಭವನದಲ್ಲಿ ಕಾಂ ಎಂ. ನೋಣಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು ಗತವರ್ಷದ ವರದಿಯನ್ನು ಕಾರ್ಯದರ್ಶಿ ಯು.ಬಿ. ಲೋಕಯ್ಯನವರು ಮಂಡಿಸಿದರು. ಲೆಕ್ಕಪತ್ರವನ್ನು ಕೋಶಾಧಿಕಾರಿ ಎಂ. ಹರಿಶ್ಚಂದ್ರ ಮಂಡಿಸಿದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿದ್ದ ದಕ್ಷಿಣ ಕನ್ನಡ ಜಿಲ್ಲಾ ಸಿ.ಐ.ಟಿ.ಯು ಕಾರ್ಯದರ್ಶಿ ಕೆ. ಮೂಸಬ್ಬರವರು ಕಾರ್ಮಿಕರನ್ನುದ್ದೇಶಿ ಮಾತನಾಡುತ್ತಾ, ಬೀಡಿ ಕಾರ್ಮಿಕರನ್ನು ಶೋಷಿಸುವಾಗ ಮಾಲಕರು ಜಾತಿಭೇದ ತೋರಿಸುವುದಿಲ್ಲ. ಈ ಕೈಗಾರಿಕೆಯಲ್ಲಿ ಬೇಕಾದಷ್ಟು ಲಾಭಗಳಿಸಿ, ಜಾತಿವಾದಿ ದುಷ್ಟಕೂಟ ಕಟ್ಟಲು ಎಲ್ಲಾ ರೀತಿಯ ಸಹಾಯ ಸಹಕಾರ ಕೊಡುತ್ತಿದ್ದಾರೆ. ಆದುದರಿಂದ ಕಾರ್ಮಿಕ ವರ್ಗದ ಸಂಘಟನೆಯು ಅನ್ಯಾಯಕ್ಕೊಳಗಾದ ಎಲ್ಲಾ ಜನರ ರಕ್ಷಣೆಗೆ ನಿಲ್ಲುವಂತಾಗಬೇಕು ಎಂದು ಕರೆ ನೀಡಿದರು.

19 ಮಂದಿಯ ಹೊಸ ಕಾರ್ಯದರ್ಶಿ ಸಮಿತಿಯೊಂದನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರು ಎಂ. ನೋಣಯ್ಯ, ಎಂ. ಹೊನ್ನಯ್ಯ ಮತ್ತು ಅಕ್ಕಮ್ಮ ಉಪಾಧ್ಯಕ್ಷರು, ಯು.ಬಿ. ಲೋಕಯ್ಯ ಕಾರ್ಯದರ್ಶಿ, ಜನಾರ್ಧನ ಮತ್ತು ರಮೇಶ ಸಹಕಾರ್ಯದರ್ಶಿಗಳು ಹಾಗೂ ಎಂ. ಹರಿಶ್ಚಂದ್ರ ಕೋಶಾಧಿಕಾರಿ.

ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡ ಯು.ಬಿ. ಲೋಕಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಅಸಂಘಟಿತ ಕಾರ್ಮಿಕರಿಗೆ 1050 ರೂ ಕನಿಷ್ಠ ಕೂಲಿಗಾಗಿ ಮಾರ್ಚ್ 15 ರಂದು ನಡೆಯುವ ಮುಷ್ಕರದಲ್ಲಿ ಬೀಡಿ ಕಾರ್ಮಿಕರು ಮಜೂರಿಯ ಹೆಚ್ಚಳಕ್ಕಾಗಿ ತೀವ್ರ ಹೋರಾಟಕ್ಕೆ ಮುಂದಾಗಲು ಬೀಡಿ ಕಾರ್ಮಿಕರಿಗೆ ಕರೆ ನೀಡಿದರು.

ಗಂಜಿಮಠದಲ್ಲಿ ಹೆರಿಗೆ ಕೇಂದ್ರ ತೆರೆಯಬೇಕು ಕಾರ್ಮಿಕರ ಕಲ್ಯಾಣ ನಿಧಿ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೀತಿಯ ಔಷಧೋಪಚಾರ ದೊರೆಯಬೇಕು ಎಂದು ಸರಕಾರವನ್ನು ಒತ್ತಾಯಿಸುವ ಠರಾವುಗಳನ್ನು ಸಭೆ ಅಂಗೀಕರಿಸಿತು.

ಸಂಘದ ಎಂ. ಹೊನ್ನಯ್ಯ ಧನ್ಯವಾದ ಸಮರ್ಪಿಸಿದರು.

## ಬೋನಸ್ ನಿರಾಕರಣೆ ಪ್ರತಿಭಟಿಸಿ ಆಮರಣ ಉಪವಾಸ ಸತ್ಯಾಗ್ರಹ

ಸಿಐಟಿಯು ಸಂಯೋಜಿತ ಧಾರವಾಡ ಜಿಲ್ಲಾ ಜನರಲ್ ಯುನಿಯನ್ ಓಂವ್‌ಮಾತಾ ಇಂಡಸ್ಟ್ರೀಸ್ ಕಲಘಟಗಿ ಶಾಖೆಯ ಕಾರ್ಮಿಕರು ಹಾಗೂ ಆಡಳಿತ ವರ್ಗದ ನಡುವೆ ಬೋನಸ್ ಬಗ್ಗೆ ದಿನಾಂಕ ಫೆಬ್ರವರಿ 4,1993 ರಂದು ಒಂದು ಹೊಂದಾಣಿಕೆ ಬಂದು ತಿಳುವಳಿಕೆ ಪತ್ರಕ್ಕೆ ಸಹಿ ಹಾಕಲಾಗಿತ್ತು. ಆದರೆ ಆಡಳಿತ ವರ್ಗ, ನಂತರದಲ್ಲಿ ದಿನಗೂಲಿ, ಕಂಟ್ರಾಕ್ಟ್ ಕಾರ್ಮಿಕರಿಗೆ ಬೋನಸ್ ಕೊಡಲು ಸಾಧ್ಯವಿಲ್ಲವೆಂದು ಹಟಮಾರಿ ಧೋರಣೆ ತಳೆದಿದೆ. ಅದರ ಪ್ರತಿಭಟನಾರ್ಥವಾಗಿ ಓಂವ್‌ಮಾತಾ ಇಂಡಸ್ಟ್ರೀಸ್ ಶಾಖೆಯ ಕಾರ್ಯದರ್ಶಿ ಕಾಂ. ಎಸ್.ಡಿ. ಅಕ್ಕಿಯವರು 4-3-1993 ಗುರುವಾರ ದಿವಸದಿಂದ "ಅಮರಣ ಉಪವಾಸ" ಪ್ರಾರಂಭಿಸಿದರು. ಉದ್ಘಾಟನಾ ಸಮಯದಲ್ಲಿ ಕಾಂ. ಕೃಷ್ಣ ಕಟ್ಟಿಯುವರು ಅಕ್ಕಿಯವರಿಗೆ ಮಾಲಾರ್ಪಣೆ ಮಾಡಿ ಸಿ.ಐ.ಟಿ.ಯು ವಿನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು. ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಗಂಗಪ್ಪ ರಾಮನಕೊಪ್ಪ ವಹಿಸಿದ್ದರು. ಕಾಂ. ಪಿ. ಎಸ್. ಕಾಮತ್ ಅವರು ವಂದನಾರ್ಪಣೆ ಮಾಡಿದರು.

## ರೈತ ಸಂಘ ಬಳ್ಳಾರಿ ಜಿಲ್ಲಾ ಸಮ್ಮೇಳನಕ್ಕೆ ಸಿದ್ಧತೆ

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯು ತೀರ್ಮಾನದ ಮೇರೆಗೆ, ರೈತ ಸಂಘದ 3 ನೇ ಜಿಲ್ಲಾ ಸಮ್ಮೇಳನವನ್ನು 29,30 ಮಾರ್ಚ್ 1993 ರಂದು 2 ದಿನಗಳ ಕಾಲ ಕುರುಗೋಡಿನಲ್ಲಿ ಯಶಸ್ವಿಯಾಗಿ ನಡೆಸಲು ದಿನಾಂಕ 4-3-93 ರಂದು ಸಿಪಿಐ(ಎಂ) ಕಚೇರಿಯಲ್ಲಿ (ಕುರುಕೋಡು) ನಡೆದ ಸಭೆ ನಿರ್ಧರಿಸಿದರು. ವಿವಿಧ ಸಂಸ್ಥೆಗಳಿಗೆ ಸೇರಿದ್ದ 65 ಜನರು ಸಭೆಯಲ್ಲಿ ಪಾಲ್ಗೊಂಡಿದ್ದರು ಅಧ್ಯಕ್ಷತೆಯನ್ನು ಕೆ. ವೀರಣ್ಣ (ಮುಷ್ಟಗಟ್ಟಿ) ವಹಿಸಿದ್ದರು.

ಸಭೆಯ ಉದ್ದೇಶವನ್ನು ಕರುಗೋಡು ವಿಭಾಗೀಯ ಸಮಿತಿ ಸಂಚಾಲಕರಾದ ವಿ.ಎಸ್. ಶಿವಶಂಕರ್ ವಿವರಿಸಿದರು.

ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಕಾಂ. ಯು. ಬಸವರಾಜ್ ಮಾತನಾಡಿದರು. ಡಂಕೆಲ್ ಪ್ರಸ್ತಾವಗಳಿಗೆ ಕೇಂದ್ರ ಸರ್ಕಾರ ಸಹಿ ಹಾಕುವುದನ್ನು ತಡೆಯಲು ಬ್ಯಾಂಕ್‌ಗಳ ಖಾಸಗೀಕರಣವನ್ನು ವಿರೋಧಿಸಲು, ಹೊಸ ಆರ್ಥಿಕ ನೀತಿಗಳನ್ನು ಪ್ರತಿಭಟಿಸಲು, ಸಬ್ಸಿಡಿಗಾಗಿ ಒತ್ತಾಯಿಸಲು, ಹತ್ತಿ, ಜೋಳ, ಮೆಕ್ಕೆಜೋಳ, ಶೇಂಗಾ ಮುಂತಾದ ಬೆಳೆಗ

ಪುಟ 2 ಕ್ಕೆ

KRNM/BGS-405 MAG(2) PRB DECR 319-78/79

# ರೂಪಾಯಿಯ ಪೂರ್ಣ ಪರಿವರ್ತನಿಯತೆ ಹಣದುಬ್ಬರಕ್ಕೆ ಹಾದಿ

- ಬಿ. ಮಾಧವ

ಕೇಂದ್ರ ಬಜೆಟ್‌ನಲ್ಲಿ ರೂಪಾಯಿಯ ಪೂರ್ಣ ಪರಿವರ್ತನಿಯತೆಗೆ ಅವಕಾಶ ಮಾಡಿದುದರಿಂದಾಗಿ ಮುಂದಿನ ದಿನಗಳಲ್ಲಿ ದೇಶವು ಭೀಕರ ಹಣದುಬ್ಬರವನ್ನು ಎದುರಿಸಬೇಕಾಗಬಹುದು ಎಂದು ಕಾಂ. ಬಿ. ಮಾಧವ ಕುಂದಾಪುರದಲ್ಲಿ ಹೇಳಿದರು ಕರ್ನಾಟಕದ ವೀರಪ್ಪ ಮೊಯ್ಲಿ ಸರಕಾರವು ಅನೇಕ ಜೀವನಾವಶ್ಯಕ ವಸ್ತುಗಳ ಮೇಲೆ ಹೆಚ್ಚುವರಿ ತೆರಿಗೆ ಹೇರಿ ಪೆಟ್ರೋಲಿನ ಮೇಲಿನ ತೆರಿಗೆ ಹೆಚ್ಚಿಸಿದ್ದಲ್ಲದೇ ವೃತ್ತಿ ತೆರಿಗೆಯನ್ನು ಏರಿಸಿ ರಾಜ್ಯದ ಜನತೆ ಮೇಲೆ ತನ್ನ ಪಾಲಿನ ಹೊರೆಯನ್ನು ಹೇರಿದೆ ಎಂದು ವಿವರಿಸಿದರು.

ಮಾರ್ಚ್ 15 ರಂದು ಸಿಪಿಐ(ಎಂ) ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ಕೋಮುವಾದದ ವಿರುದ್ಧ ಹಾಗೂ ಜನವಿರೋಧಿ ಕೇಂದ್ರ-ರಾಜ್ಯ ಸರಕಾರಗಳ ಮುಂಗಡಪತ್ರಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡ ಮೆರವಣಿಗೆಯನಂತರದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಅನಂತರ ಪಕ್ಷದ ತಾಲೂಕು ಸಮಿತಿಯ ಕಾರ್ಯದರ್ಶಿಯವರಾದ ಶ್ರೀಯುತ ಕೆ. ಶಂಕರ್‌ರವರು ಹಾಗೂ ಅಧ್ಯಕ್ಷತೆವಹಿಸಿದ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಶ್ರೀಯುತ ಅಬ್ರಹಾಂ ಕರ್ಕಡರವರು ಮಾತನಾಡಿ ಕೋಮುವಾದದ ವಿರುದ್ಧ ಜನತೆಯ ಆಂದೋಳನವನ್ನು ತೀವ್ರಗೊಳಿಸಲು ಹಾಗೂ ರೈಲ್ವೆ ಬಜೆಟ್, ಕೇಂದ್ರ ಮತ್ತು ರಾಜ್ಯ ಬಜೆಟ್‌ಗಳ ಜನವಿರೋಧಿ ನೀತಿಗಳನ್ನು ಪ್ರತಿಭಟಿಸುವ ಮಹತ್ವವನ್ನು ವಿವರಿಸಿದರು.

ಕೊನೆಯಲ್ಲಿ ಶ್ರೀಯುತ ಯು. ವಾಸು ಭಂಡಾರಿಯವರು ಎಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿದರು.

## ಕುಂದಾಪುರದಲ್ಲಿ ಬೀಡಿ ಕಾರ್ಮಿಕರ ಯಶಸ್ವಿ ಮುಷ್ಕರ

ಸಿ.ಐ.ಟಿ.ಯು ರಾಜ್ಯ ಸಮಿತಿಯ ತೀರ್ಮಾನದಂತೆ ಮಾರ್ಚ್ 15 ರಂದು ಅಸಂಘಟಿತ ಕಾರ್ಮಿಕರ ಒಂದು ದಿನ ಮುಷ್ಕರದ ಅಂಗವಾಗಿ ಕುಂದಾಪುರದಲ್ಲಿ ಬೀಡಿ ಕಾರ್ಮಿಕರು ಮುಂಚಿತವಾಗಿ ಮುಷ್ಕರ ನೋಟೀಸು ಮಾಲಕರಿಗೆ ಕಳುಹಿಸಿ, ಸಾವಿರ ಬೀಡಿಗೆ 30 ರೂಪಾಯಿ ಕೂಲಿ ನಿರ್ಣಯಿಸಲು, ಬೀಡಿ ಕಾರ್ಮಿಕರಿಗೆ ಗ್ರಾಚ್ಯುಟಿ ಜ್ಯಾರಿಯಾಗಬೇಕೆಂದು ಹಾಗೂ ವಾರ್ಷಿಕ ಬೋನಸ್ಸು ಶೇಕಡಾ 20 ರಷ್ಟು ಸಿಗಬೇಕೆಂದು ಒತ್ತಾಯಿಸಿ ಯಶಸ್ವಿ ಮುಷ್ಕರ ನಡೆಸಿದರು.

## ಹುಬ್ಬಳ್ಳಿ, ಧಾರವಾಡ ಅವಳಿ ನಗರಗಳಲ್ಲಿ "ಕನಿಷ್ಠ ಕೂಲಿ" ಹೋರಾಟ

ಕೇವಲ ರೂ 300 ಸಹ ಪಗಾರ ಇಂಥ ಹರಕಲು ಬಟ್ಟೆಯ, ಒಣಗಿಸಿದ ಮುಖ ಹೊತ್ತು ತಲೆಗೆ ಎಣ್ಣೆ ಕಾಣದೇ ಕಾಲಿಗೆ ಚಪ್ಪಲಿ ಇಲ್ಲದೇ ಬಾಳಿನ ಬಗ್ಗೆಯೇ ಜಿಗುಪ್ಸೆ ಹೊಂದಿದಂತೆ ಕಾಣುವ ಕೈಮಗ್ಗ ನೇಕಾರರು, ಮತ್ತು ತಿಂಗಳಿಗೆ 6 ರಿಂದ 7 ನೂರು ರೂ ಸಂಪಾದಿಸುವ ತಂಬಾಕಿನ ಘಾಟಿನಿಂದ ಕೆಮ್ಮು ಮತ್ತಿತರೆ ರೋಗಗಳಿಂದ ಬಳಲುವ ಅನಾರೋಗ್ಯವಾದ ಕೂಸುಗಳನ್ನು ಹೊತ್ತುಕೊಂಡ ಬೀಡಿ ಕಾರ್ಮಿಕರು ತಮ್ಮ ಜೀವನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬೇಕೆಂಬ ಧೃಡ ನಿರ್ಧಾರದಿಂದ ಸಿ.ಐ.ಟಿ.ಯುವಿನ ಕನಿಷ್ಠ ಕೂಲಿ ಹೋರಾಟಕಕೆ ಉತ್ಸಾಹದಿಂದ ಮುಂದೆ ಬಂದರು.

ಮಾರ್ಚ್ 15 ರಂದು ಸಿ.ಐ.ಟಿ.ಯು ಕರೆಯ ಪ್ರಕಾರ ಹುಬ್ಬಳ್ಳಿ, ಧಾರವಾಡ ಅವಳಿನಗರದಲ್ಲಿ ಬೀಡಿ, ಕೈಮಗ್ಗ ನೇಕಾರರು ಮತ್ತು ಕಂಟ್ರಾಕ್ಟ್ ಕಾರ್ಮಿಕರು ಒಂದು ದಿನದ ಮುಷ್ಕರ ನಡೆಸಿದರು. ಹುಬ್ಬಳ್ಳಿಯಲ್ಲಿ ಮೂರು ವಿಭಾಗದ ಕಾರ್ಮಿಕರು ಪ್ರತ್ಯೇಕ ಮೆರವಣಿಗೆಗಳನ್ನು ನಡೆಸಿ ತಹಶೀಲ್ದಾರ ಆಫೀಸ್ ಎದುರು ಹಾಕಿದ ಮಂಟಪದಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 5.30 ರವರೆಗೆ 'ಧರಣಿ' 'ಸತ್ಯಾಗ್ರಹ' ನಡೆಸಿದರು. ಅದರಂತೆ ಧಾರವಾಡದಲ್ಲಿ ಸಹ ಬೀಡಿ ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ತಹಸಿಲ್ದಾರ ಕಚೇರಿ ಎದುರು ಹಾಕಿದ ಮಂಟಪದಲ್ಲಿ ಬೆಳಿಗ್ಗೆ 10.30 ರಿಂದ 5.30 ರವರೆಗೆ 'ಧರಣಿ' 'ಸತ್ಯಾಗ್ರಹ' ನಡೆಸಿದರು. ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ಏಕತಾ ಆಂದೋಳನದ ಕಾರ್ಯಕ್ರಮದ ಭಾಗವಾಗಿ ಸಾರ್ವಜನಿಕರಿಂದ ಸಹಿ ಸಂಗ್ರಹ ನಡೆಸಲಾಯಿತು.

ಧಾರವಾಡದಲ್ಲಿ ಇಂಡಿಯನ್ ಪ್ಲಾಯ್‌ವುಡ್ ಕಂಪನಿ ಕಾರ್ಮಿಕರು ಹೋರಾಟದಲ್ಲಿದ್ದ ಥಮ್ಸಪ್ ಕಾರ್ಮಿಕರು ಮತ್ತಿತರರು ಸೇರಿ ಸುಮಾರು 500 ಜನರು ಮೆರವಣಿಗೆಯಲ್ಲಿ ಬಂದು ಧರಣಿ ಕುಳಿತ ಕಾರ್ಮಿಕರಿಗೆ ತಮ್ಮ ಬೆಂಬಲ ಸೂಚಿಸಿದರು. ಕೊನೆಗೆ ತಹಶೀಲ್ದಾರರಿಗೆ ಮನವಿ ಕೊಟ್ಟು ಕಾರ್ಯಕ್ರಮ ಮುಕ್ತಾಯಗೊಳಿಸಿಸಲಾಯಿತು. 5000 ಕರಪತ್ರ ಮುದ್ರಿಸಿ ಎಲ್ಲಾ ಕಾರ್ಮಿಕ ವಿಭಾಗಗಳಲ್ಲಿ ಪ್ರಚಾರ ಮಾಡಲಾಗಿದೆ.

ಹುಬ್ಬಳ್ಳಿಯಲ್ಲಿ ಕಾಂ. ಎಂ.ಎಚ್. ಮುಲ್ಲಾ, ಡಿ.ಜಿ. ಗೋಂಧಳೆ ಎ.ಎಂ. ಜೋಶಿ, ಎಮ್. ಕಸ್ತೂರಿಬಾಯಿ ನೇತೃತ್ವ ವಹಿಸಿದ್ದರು. ಧಾರವಾಡದಲ್ಲಿ ಕಾಂ. ಎಂ.ಬಿ. ಕಟ್ಟಿ, ಹಾಶಿಮ ಧಾರವಾಡ, ಹೂರಾಬಿ ಹುಬ್ಬಳ್ಳಿ ಮುಂತಾದವರು ನೇತೃತ್ವವಹಿಸಿದ್ದರು.

## ಕನಿಷ್ಠ ವೇತನಕ್ಕೆ ಆಗ್ರಹಿಸಿ ಸಾಂಕೇತಿಕ ಮುಷ್ಕರ

**ಹುಬ್ಬಳ್ಳಿ:** ಗುತ್ತಿಗೆ ಪದ್ಧತಿ ರದ್ಧತಿ ಮತ್ತು 1250 ರೂ. ಗಳ ಕನಿಷ್ಠ ವೇತನ ನಿಗದಿಪಡಿಸುವಂತೆ ಒತ್ತಾಯಿಸಲು ಅಸಂಘಟಿತ ಕಾರ್ಮಿಕರು ಇಂದು ಇಲ್ಲಿ ಒಂದು ದಿನದ ಸಾಂಕೇತಿಕ ಮುಷ್ಕರ ಆಚರಿಸಿ, ಸಂಜೆ ತಹಶೀಲ್ದಾರರಿಗೆ ಮನವಿ ಅರ್ಪಿಸಿದರು.

ಸಿ.ಐ.ಟಿ.ಯು ರಾಜ್ಯ ಸಮಿತಿಯು ಈ ಮುಷ್ಕರ ಆಚರಿಸಲು ಕರೆ ಕೊಟ್ಟಿತು.

ತಹಶೀಲ್ದಾರರ ಕಚೇರಿ ಎದುರು ಧರಣಿ ಕುಳಿತು ನೌಕರರಲ್ಲಿ ಉದ್ದಿಮೆ ಕಾರ್ಮಿಕರು, ಬೀಡಿ ಕಾರ್ಮಿಕರು, ನೇಕಾರರು ಅದರಲ್ಲೂ ಮಹಿಳಾ ಕಾರ್ಮಿಕರು ಹೆಚ್ಚಾಗಿದ್ದರು.

ಸಿ.ಐ.ಟಿ.ಯು ಜಿಲ್ಲಾ ಸಮಿತಿ ಉಪಾಧ್ಯಕ್ಷ ಎಂ.ಎಚ್. ಮುಲ್ಲಾ ಅವರು ಧರಣಿ ಸತ್ಯಾಗ್ರಹದ ನೇತೃತ್ವ ವಹಿಸಿದ್ದರು.

ಒಂದು ಸಾವಿರ ಬೀಡಿ ಕಟ್ಟಲು 30 ರೂ ಕನಿಷ್ಠ ವೇತನ ನಿಗದಿಪಡಿಸಬೇಕು ಮತ್ತು ಬೆಲೆ ಸೂಚ್ಯಂಕದ ಪ್ರತಿ ಪಾಯಿಂಟಿಗೆ 5 ಪೈಸೆ ದರದಲ್ಲಿ ತುಟ್ಟಿ ಭತ್ಯೆ ಕೊಡಬೇಕು. ಹೊಟೆಲ್ ಮುದ್ರಣಾಲಯ, ಸಿನೆಮಾ, ಟೇಲರಿಂಗ್, ಇಂಜಿನಿಯರಿಂಗ್ ಮೊದಲಾದ ಸಣ್ಣ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಅಸಂಘಟಿತ ಕಾರ್ಮಿಕರಿಗೆ 1250 ರೂ. ಕನಿಷ್ಠ ಮಾಸಿಕ ವೇತನ ಮತ್ತು ತುಟ್ಟಿ ಭತ್ಯೆ ಕೊಡಬೇಕು ಅಲ್ಲದೇ ಭದ್ರತಾ ( ವಾಚ್‌ಮನ್) ಸಿಬ್ಬಂದಿ ಸೇರಿ ಎಲ್ಲ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಿ ಅವರಿಗೆ ಕಾಯಂ ಕೆಲಸಗಾರರ ಜೊತೆಯಲ್ಲಿ ಸಮಾನ ವೇತನವನ್ನು ಕೊಡಬೇಕು. ಕೈಮಗ್ಗ, ನೇಕಾರರಿಗೆ ತಿಂಗಳಿಗೆ 26 ದಿನಗಳಿಗೆ ಬೇಕಾಗುವಷ್ಟು ಗುಣಮಟ್ಟದ ನೂಲನ್ನು ಪೂರೈಸಬೇಕು. ಅವರಿಗೆ 1250 ರೂಗಲ ಕನಿಷ್ಠ ವೇತನ ಖಾತರಿಗೊಳಿಸೆ ಬೇಕು ಮುಂತಾದ ಬೇಡಿಕೆಗಳನ್ನು ಮನವಿಯಲ್ಲಿ ಕಾಣಿಸಲಾಗಿದೆ.

ಇದೇ ಕಾಲಕ್ಕೆ ರಾಷ್ಟ್ರೀಯ ಏಕತೆಗಾಗಿ ಪ್ರತಿಜ್ಞೆ ಕೈಗೊಳ್ಳಲು ಸಾರ್ವಜನಿಕ ಸಹಿಗಳನ್ನು ಸಂಗ್ರಹಿಸಲಾಯಿತು.

## ವೈದ್ಯರ ಅಚಾತುರ್ಯ ಯುವತಿಯ ಜೀವಕ್ಕೆ ಹಾನಿ

**ಸಿಂಧನೂರು:** ಸಿಂಧನೂರಿನ ವೈದ್ಯ ಡಾ. ಚಿದಾನಂದ್ರಗೌಡರ ನರ್ಸಿಂಗ್ ಹೋಮ್‌ನಲ್ಲಿ ಬಸವಣ್ಣ ಕ್ಯಾಂಪಿನ ಶ್ರೀಮತಿ ಸತ್ಯವತಿ ಗರ್ಭಕೋಶದ ಚಿಕಿತ್ಸೆಗಾಗಿ ಬಂದಿದ್ದು ಶಸ್ತ್ರ ಚಿಕಿತ್ಸೆ ನಡೆಯುವಾಗ ಅವಳ ಕಿಡ್ನಿ (ಮೂತ್ರಪಿಂಡ) ಯು ನಾಪತ್ತೆಯಾಗಿದೆ. ಇದು ಅಚಾತುರ್ಯದಿಂದ ನಡೆದಿರುವುದಾಗಿ ವೈದ್ಯರು ಹೇಳುತ್ತಿದ್ದಾರೆ. ಶಸ್ತ್ರ ಚಿಕಿತ್ಸೆಯಾದ ಎರಡನೇ ದಿನ ರೋಗಿಗೆ ಸಂಪೂರ್ಣ ಮೂತ್ರ ವಿಸರ್ಜನೆ ನಿಂತು ಹೋದಾಗ ಗಂಗಾವತಿಯಿಂದ ಸ್ಕ್ಯಾನಿಂಗ್ ತಂದು ಪರಿಕ್ಷಿಸಿದಾಗ ಬಲಭಾಗದಲ್ಲಿ ಕಿಡ್ನಿ ಇಲ್ಲದಿರುವುದು ಗೊತ್ತಾಯಿತೆಂದು ವೈದ್ಯರು ಹೇಳಿದ್ದಾರೆ. ಶಸ್ತ್ರ ಚಿಕಿತ್ಸೆ ಪೂರ್ವದಲ್ಲಿ ತಪಾಸಣೆ ಮಾಡುವಾಗ ಮತ್ತು ಶಸ್ತ್ರ ಚಿಕಿತ್ಸೆ ಸಮಯದಲ್ಲಿ ಮೂವರು ಪರಿಣಿತ ವೈದ್ಯರಿದ್ದರೂ ಸಹ ರೋಗಿಯ ಕಿಡ್ನಿಯನ್ನು ತೆಗೆದುಹಾಕಿರುವುದು ಆಶ್ಚರ್ಯಕರ. ಈ ಕೃತ್ಯಕ್ಕೆ ಮುಖ್ಯವಾಗಿ ವೈದ್ಯರೇ ಜವಾಬ್ದಾರರಾಗುತ್ತಾರೆ ಎಂದು ಪಕ್ಷದ ಸಿಂಧನೂರ್ರು ತಾಲೂಕು ಸಮಿತಿಯು ಅಭಿಪ್ರಾಯಪಟ್ಟಿದೆ.

ಈಗಾಗಲೇ ಸತ್ಯವತಿಯ ದೇಹಸ್ಥಿತಿ ಚಿಂತಾಜನಕವಾಗಿದೆ. ಅವರ ತಾಯಿಯು ತನ್ನ ಕಿಡ್ನಿಯನ್ನು ತನ್ನ ಮಗಳಿಗೆ ದಾನಕೊಡಲು ಸಿದ್ಧಳಿರುವುದರಿಂದ ಸುಸಜ್ಜಿತ ಆಸ್ಪತ್ರೆಯಲ್ಲಿ ಸೇರಿಸಿ ಕಿಡ್ನಿಯನ್ನು ವರ್ಗಾವಣೆಗೆ ವ್ಯವಸ್ಥೆ ಮಾಡಬೇಕು ಅವರ ಜೀವ ಉಳಿಸಲು ವೈದ್ಯರು ಕೂಡಲೇ ಈ ಪ್ರಯತ್ನ ಮಾಡಬೇಕು ಹಾಗೂ ಅಪರಾಧಿ ವೈದ್ಯರ ಐ.ಎಮ್.ಎ. ಸದಸ್ಯತ್ವವನ್ನು ರದ್ದುಗೊಳಿಸಬೇಕು. ಅವರಿಗೆ ಮೆಡಿಕಲ್ ಕೌನ್ಸಿಲ್ ನೀಡಿದ ಸರ್ಟಿಫಿಕೆಟ್‌ಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ತಾಲೂಕು ಸಮಿತಿಯು ಸರಕಾರಕ್ಕೆ ಒತ್ತಾಯಿಸುತ್ತದೆ ಎಂದು ಕಾರ್ಯದರ್ಶಿ ಶರಬಣ್ಣ ನಾಗಲಾಪುರ ತಿಳಿಸಿದ್ದಾರೆ.

ಸುದ್ದಿಗಳು ! ಪುಟ ೨ ರಿಂದ.

ವಾರು ಕಡೆಗಳಲ್ಲಿ ನಾಯಕತ್ವವಿಲ್ಲದೆ ಜನರು ಸ್ವಪ್ರೇರಣೆಯಿಂದ ಗುಂಪು ಗುಂಪಾಗಿ ಕೆ.ಇ.ಬಿ. ಆಫೀಸನ್ನು ಮುತ್ತಿಗೆ ಹಾಕಿದರು. ಅಂಥ ವೇಳೆಯಲ್ಲಿ ಕೆ.ಇ.ಬಿ. ಅಧಿಕಾರಿಗಳೆಲ್ಲರೂ ಕಾರ್ಯಾಲಯವನ್ನು ಬಿಟ್ಟು ಓಡಿ ಹೋಗಿದ್ದರು. ನಾಯಕತ್ವವನ್ನು ವಹಿಸಿಕೊಂಡ ಇತರ ರಾಜಕೀಯ ಪುಡಾರಿಗಳು ಗಂಗಾವತಿಯ ವಿಭಾಗದ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರೂ ಫಲಪ್ರದಾಯಕವಾಗಲಿಲ್ಲ. ಕೆ.ಇ.ಬಿ. ಎಂದರೇ ಸಾಕು ಛೀಮಾರಿ ಹಾಕುವ ಪರಿಸ್ಥಿತಿ ಅಲ್ಲಿ ನಿರ್ಮಾಣಗೊಂಡಿತ್ತು.

ಇಂಥ ಪರಿಸ್ಥಿತಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಕುಷ್ಟಗಿ ತಾಲೂಕು ಸಮಿತಿ ತನ್ನ ನಾಯಕತ್ವವನ್ನು ವಹಿಸಿ ತೀವ್ರತರವಾದ ರಸ್ತೆ ರೋಕೋ ಚಳುವಳಿಯನ್ನು ಪ್ರಾರಂಭಿಸಿತು. ಎಲ್ಲ ಅಧಿಕಾರಿ, ಅಧಿಕಾರೇತರರಿಗೂ ಕೆ.ಇ.ಬಿ. ಸಮಸ್ಯೆ ತಲೆನೋವಿನಂತೆ ಇತ್ತು ಇಂಥ ಪರಿಸ್ಥಿತಿಯಲ್ಲಿ ಫೆ 2 ರಂದು 3 ಘಂಟೆಗೆ ತಹಶಿಲ್ದಾರ ಎಸ್. ಶಿವರಾಜರನ್ನು ನಾಲ್ಕು ತಾಸು ಕೆ.ಇ.ಬಿ. ಕಛೇರಿಯಲ್ಲಿ ದಿಗ್ಬಂಧನಕ್ಕೆ ಒಳಪಡಿಸಲಾಗಿತ್ತು. ಅವರನ್ನು ಕುಷ್ಟಗಿ ಪೋಲೀಸ್ ಅಧಿಕಾರಿಗಳೂ ಬಿಡಿಸುವ ಪರಿಸ್ಥಿತಿಯಲ್ಲಿ ಇರಲಿಲ್ಲ. ನಂತರ, ಕೊಪ್ಪಳ, ಮತ್ತು ರಾಯಚೂರಿನಿಂದ ಹೆಚ್ಚುವರಿ ಪೋಲೀಸ್ ಸಿಬ್ಬಂದಿಗಳನ್ನು ಕರೆತರ ಬೇಕಾಯಿತು. ಕರ್ನಾಟಕ ಪ್ರಾಂತ ರೈತ ಸಂಘವು ತಹಶಿಲ್ದಾರ ಪರತ್ತಿನ ಆಧಾರಗಳ ಅಡಿಯಲ್ಲಿ ಕಚೇರಿಯಿಂದ ಹೊರತರಲಾಗಿತ್ತು.

ನಂತರ ಪ್ರಾಂತ ರೈತ ಸಂಘವು ಹೆಚ್ಚುವರಿ ಕರೆಂಟಿಗಾಗಿ ಘೋಷಣೆ ಕೂಗುತ್ತ ಕೊನೆಯ ಹಂತಕ್ಕೆ ಮುನಿರಬರದ್ ವಿಭಾಗದ ಮತ್ತೊಬ್ಬ ಅಧಿಕಾರಿ ಕರೆಯಿಸಿ ಬರಹದಲ್ಲಿ ಭರವಸೆನೀಡಿದಾಗ ಅಂದಿನ ಕಾರ್ಯಕ್ರಮ ಮುಗಿಸಲಾಯಿತು. ಕುಷ್ಟಗಿ ತಾಲೂಕಿನಲ್ಲಿ ಇದು ಐತಿಹಾಸಿಕ ಹೋರಾಟ ಅನಿಸಿತು. ಅನೇಕ ಜನರು ಈಗ ಪ್ರಾಂತ ರೈತ ಸಂಘದವರ ನಿಲವುಗಳು ಒಪ್ಪತೊಡಗಿದರು.

ನಂತರ 14-2-93 ರಂದು ಗುರವಾರ ಕೆ.ಇ.ಬಿ. ಪಿಕೆಟಿಂಗ್ ಚಳುವಳಿ ಬಗ್ಗೆ ರಿಕ್ಷಾ ಪ್ರಚಾರ ಮಾಡಲಾಯಿತು. ಯಾಕೆಂದರೇ ಅಂದಿನ ದಿವಸ ಕುಷ್ಟಗಿ ನಗರದ ಮಾರ್ಕೆಟ ದಿನವಾಗಿತ್ತು.

ನಂತರ ದಿನಾಂಕ 15-2-93 ರಂದು ಕೆ.ಇ.ಬಿ. ಪಿಕೆಟಿಂಗ್ ಕಾರ್ಯಕ್ರಮ ಮಾಡಲು ತಿರ್ಮಾನಿಸಲಾಗಿತ್ತು. ಸುಮಾರು 200 ಕ್ಕಿಂತ ಹೆಚ್ಚು ರೈತರು ಪಿಕೆಟಿಂಗ್ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಸುಮಾರು ನಾಲ್ಕು ಗಂಟೆಯವರೆಗೆ ಮುತ್ತಿಗೆ ಹಾಕಲಾಯಿತು. ಪುನಃ ಮತ್ತೊಮ್ಮೆ ವಿಭಾಗೀಯ ಅಧಿಕಾರಿಗಳನ್ನು ಕರೆತರಲಾಗಿತ್ತು ಬರಹದ ಮುಖಾಂತರ ಭರವಸೆ ನೀಡಬೇಕೆಂದರು ರೈತ ಮುಖಂಡರಾದ ಆರ್.ಕೆ. ದೇಸಾಯಿಯವರು ಒತ್ತಾಯಿಸಿದಾಗ ಇಲ್ಲವೆಂದು ಅವರಿಗೆ ಉತ್ತರ ಬಂದಾಗ ಆಗ ಪುನಃ ಮತ್ತೆ ಜನಭುಗಿಲೇಳುವ ವಾತಾವರಣವು ಉಂಟಾಯಿತು. ವೇಳಾ ಪಟ್ಟಿಯಾಧಾರದಾದಲ್ಲಿ ವಿದ್ಯುತ್ ಕೊಡುವುದಾಗಿ ಒಪ್ಪಿಕೊಳ್ಳಲಾಯಿತು.

ಕುಷ್ಟಗಿಯಲ್ಲಿ 110 ಕೆ. ವ್ಯಾಟ್ ಸ್ಟೇಶನ್ ಪ್ರಾರಂಭಿಸಬೇಕು. ಸರಿಯಾದ ಅಶ್ವಶಕ್ತಿಯ ಟ್ರಾನ್ಸ್ ಫಾಮರ್‌ಗಳನ್ನು ಒದಗಿಸಬೇಕು ಹೊಸದಾಗಿ ಬಾವಿ ತೊಡಿದ ರೈತರಿಗೆ ಕೊಡಲೇ ವಿದ್ಯುತ್ ಒದಗಿಸಬೇಕು. ವಿದ್ಯುತ್ ಇಲಾಖೆಯಿಂದ ರೈತರಿಗೆ ಆಗುತ್ತಿರುವ ತೊಂದರೆ ನಿವಾರಿಸಬೇಕು.

ಈ ಮೇಲಿನ ಬೇಡಿಕೆಗಳನ್ನು ಒತ್ತಾಯಿಸುವ ಜೊತೆಯಲ್ಲಿ ಇತರ ಕೃಷಿ ಕೂಲಿಕಾರರ ಹಸಿರುಕಾರ್ಡ್ ಅವ್ಯಶವಾದ; ಭೂಮಿ ಪಟ್ಟಿ, ಸರಿಯಾದ ಕೂಲಿ, ಸರಕಾರಿ ಪಡಾ ಭೂಮಿ ಹಂಚುವಿಕೆ ಇತ್ಯಾದಿ ಬೇಡಿಕೆಗಳಿಗೆ ಒತ್ತುಕೊಡಲಾಗಿದೆ.

## ಪ್ರಧಾನಿ ಪುತ್ರನ ಹಗರಣ

**ಸಂಸತ್ತಿನಲ್ಲಿ ನಮ್ಮವರು - ವಿಶ್ವ**

ಪ್ರಧಾನಿ ಪಿ.ವಿ. ನರಸಿಂಹರಾವ್‌ರವರ ಪುತ್ರನಿಗೆ ಸೇರಿದ ಕಂಪೆನಿಯೊಂದಕ್ಕೆ ಶೇರು ಹಗರಣದ ಹಣ ಸಂದಾಯವಾಗಿದೆಯೆಂಬ ವರದಿಗಳು ಪ್ರಕಟವಾದ ನಂತರ ಪ್ರಕರಣದ ಬಗ್ಗೆ ದಿನದಿನವೂ ಹೊಸ ಮಾಹಿತಿಗಳು ಪ್ರಕಟವಾಗುತ್ತಿವೆ. ಷೇರು ಹಗರಣದ ಪ್ರಮುಖ ಆರೋಪಿಗಳಲ್ಲೊಬ್ಬರಾದ ಹಿತೇನ್ ದಲಾಲ್‌ಗೂ ಪ್ರಧಾನಿ ಪುತ್ರನ ಕಂಪೆನಿಗೂ ಸಂಬಂಧವಿದೆ ಎಂಬ ವಿಚಾರ ಸಂಸತ್ತಿನಲ್ಲಿ ಪ್ರತಿದಿನವೂ ಚರ್ಚೆಗೆ ಗ್ರಾಸ ಒದಗಿಸಿದೆ.

ವಿಷಯಕ್ಕೆ ಸಂಬಂಧಿಸಿದಂತೆ ಸರಕಾರ ಹೇಳಿಕೆ ನೀಡಬೇಕು ಎಂದು ಲೋಕಸಭೆಯಲ್ಲಿ ಸಿಪಿಐ(ಎಂ) ನಾಯಕ ಸೋಮನಾಥ ಚಟರ್ಜೀ ಒತ್ತಾಯಿಸಿದರು. ( ಮಾರ್ಚ್ 10.) ಅದೇ ದಿನ ರಾಜ್ಯಸಭೆಯಲ್ಲಿ ಸಿಪಿಐ(ಎಂ) ಗುಂಪಿನ ನಾಯಕ ದಿಪೇನ್ ಘೋಷ್ ಮಾತನಾಡಿದರು.

### ತ್ರಿಪುರಾದಲ್ಲಿ ಕೇಂದ್ರ ಆಡಳಿತ

ಮಾರ್ಚ್ 11 ರಂದು ತ್ರಿಪುರಾದಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಲಾಯಿತು. ಈ ಕ್ರಮ ಮುಖ್ಯವಾಗಿ ಸಿಪಿಐ(ಎಂ) ಗೆ ದೊರೆತ ದೊಡ್ಡ ಜಯವಾಗಿದೆ ಸಂಸತ್ತಿನಲ್ಲಿ ಮತ್ತು ಹೊರಗೆ ಇದಕ್ಕಾಗಿ ಸಿಪಿಐ(ಎಂ) ಸತತ ಹೋರಾಟ ನಡೆಸಿತ್ತು.

11 ರಂದು ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆಸಲ್ಲಿಸುವ ಗೊತ್ತುವಳಿ ಮೇಲೆ ನಡೆದ ಚರ್ಚೆಗೆ ಪ್ರಧಾನಿ ಉತ್ತರ ಕೊಡುತ್ತಿದ್ದ ಸಂದರ್ಭದಲ್ಲಿ (ಲೋಕಸಭೆ) ಸಿಪಿಐ(ಎಂ) ನಾಯಕ ಸೋಮನಾಥ ಚಟರ್ಜೀ ತ್ರಿಪುರಾ ಬಗ್ಗೆ ಸ್ಪಷ್ಟನೆ ಕೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ನರಸಿಂಹರಾವ್ ತ್ರಿಪುರಾದಲ್ಲಿ ಕೇಂದ್ರದ ಆಡಳಿತ ಹೇರುವಂತೆ ರಾಷ್ಟ್ರಪತಿಯವರಿಗೆ ಆಗಲೇ ಶಿಫಾರಸು ಮಾಡಿಯಾಗಿದೆ ಎಂದು ಹೇಳಿದರು.

31 ಸಣ್ಣ ಮತ್ತು ಮಧ್ಯಮ ಪ್ರಮಾಣದ ತೈಲ ಭಾವಿಗಳಲ್ಲಿ ಬಂಡವಾಳ ಹೂಡಲು ಖಾಸಗಿಯವರಿಗೆ ಅವಕಾಶ ನೀಡಲಾಗಿದೆ ಎಂದು ಸಿಪಿಐ(ಎಂ) ನ ಮಾಲಿನಿ ಭಟ್ಟಾಚಾರ್ಯ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಂಬಂಧಪಟ್ಟ ಸಚಿವರು ತಿಳಿಸಿದರು.

### ರೆಡ್ಡಿ ಆಗಮನ ವಿವಾದ

ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸೂಚಿಸುವ ನಿರ್ಣಯದ ಮೇಲೆ ನಡೆದ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ವಿಜಯ ಭಾಸ್ಕರ ರೆಡ್ಡಿ ಲೋಕಸಭೆಯಲ್ಲಿ ಉಪಸ್ಥಿತರಿದ್ದರು ದೊಡ್ಡ ವಿವಾದಕ್ಕೆ ಕಾರಣವಾಯಿತು. ಲೋಕಸಭೆಯ ಸದಸ್ಯರಾಗಿ ಕೇಂದ್ರ ಸಚಿವರೂ ಆಗಿದ್ದ ವಿಜಯಾಭಾಸ್ಕರ ರೆಡ್ಡಿ ಆಂಧ್ರ ಮುಖ್ಯಮಂತ್ರಿಯಾಗಿದ್ದಾರೆ. ತಾಂತ್ರಿಕವಾಗಿ ಅವರು ಲೋಕಸಭೆ ಸದಸ್ಯರೂ ಹೌದು. ಆದರೆ ಬೇರೆ ರಾಜ್ಯವೊಂದರ ಮಂತ್ರಿ ಅಥವಾ ಮುಖ್ಯಮಂತ್ರಿಯಾದ ಮೇಲೆ ಸದನದ ಕಲಾಪಗಳಲ್ಲಿ ಪಾಲ್ಗೊಳ್ಳುವುದು ನೈತಿಕವಾಗಿ ಸರಿಯಲ್ಲ ಎನ್ನುವುದು ಪ್ರತಿಪಕ್ಷಗಳ ಮುಖ್ಯವಾದವಾಗಿತ್ತು.

ಎ.ಐ.ಡಿ.ಎಂ.ಕೆ. ಕೇಂದ್ರ ಸರಕಾರಕ್ಕೆ ಬೆಂಬಲವನ್ನು ವಾಪಸು ಪಡೆಯಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ರೆಡ್ಡಿ ಆಗಮನಕ್ಕೆ ಮಹತ್ವ ಬಂದಿತ್ತು. ಸರಕಾರ ಅಪಾಯದಲ್ಲೇನೂ ಇರಲಿಲ್ಲ. ರೆಡ್ಡಿ ಬರುವ ಅಗತ್ಯವಿರಲಿಲ್ಲ ಎಂದು ಸಿಪಿಐ(ಎಂ) ನಾಯಕ ಸೋಮನಾಥ ಚಟರ್ಜೀ ಮಾತಿನ ಚಾಟಿಯೇಟು ಹಾಕಿದರು.

ಆ ದಿನ, ಈಗ ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿರುವ ರಕ್ಷಣಾ ಸಚಿವ ಶರದ್ ಪವಾರ್ ಕೂಡ ಲೋಕಸಭೆ ಆವರಣಕ್ಕೆ ಬಂದಿದ್ದರು. ಆದರೆ ಅವರು ಸದನವನ್ನು ಪ್ರವೇಶಿಸದೆ ಹೊರಗೆ ಕಾಯುತ್ತಿದ್ದರು. ಇದನ್ನು ಶ್ಲಾಘಿಸಿದ ಚಟರ್ಜೀ, ವಿಜಯಭಾಸ್ಕರರೆಡ್ಡಿ ಕೂಡ ಹೀಗೆ ಮಾಡಬೇಕಿತ್ತು ಎಂದು ಹೇಳಿದರು.

ಎರಡನೇ ದಿನ ಕೂಡ ಈ ವಿಷಯ ಪ್ರಸ್ತಾಪಕ್ಕೆ ಬಂತು. ನಿರ್ಮಲ್ ಚಟರ್ಜೀ ವಿಷಯವನ್ನೆತ್ತಿ ಸಂವಿಧಾನ ಮತ್ತು ಹಿಂದಿನ ಉದಾಹರಣೆಗಳನ್ನು ಉಲ್ಲೇಖಿಸಿ ಈ ಸಂದರ್ಭದಲಿ ಸ್ಪೀಕರ್ ರೂಲಿಂಗ್ ನೀಡಬೇಕೆಂದು ಕೋರಿದರು. ಬೇರೆ ಬೇರೆ ಪಕ್ಷಗಳ ಸದಸ್ಯರು ಕೂಡ ಸಿಪಿಐ(ಎಂ) ವಾದವನ್ನು ಬೆಂಬಲಿಸಿ ಮಾತನಾಡಿದರು.

ಈ ವಿಚಾರದಲ್ಲಿ ತಾವು ಸಮಗ್ರವಾಗಿ ಪರಿಶೀಲಿಸಿ ಶೀಘ್ರವೇ ರೂಲಿಂಗ್ ನೀಡುವುದಾಗಿ ಸ್ಪೀಕರ್ ಭರವಸೆ ನೀಡಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು - 560 027, ಫೋನ್: 236462 ಸಂಪಾದಕರು: [illegible]